ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಭಾನುವಾರ 2022

₹4

ಸಂಪುಟ: 43 | ಸಂಚಿಕೆ: 146 | ಪುಟಗಳು: 12+IV

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com




ಕೆ.ಜಿ. ಕೊಪ್ಪಲಿನ ಮನೆ ಮಗ
ಚಾಮರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಯಲ್ಲಿ
ದಾಖಲೆ ನಿರ್ಮಿಸುತ್ತಿರುವ ಶಾಸಕರಾದ
ಎಲ್. ನಾಗೇಂದ್ರ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
11.09.2022
Mob : 7760589999
ಇಂಡಿಯನ್ ಟಿವಿ
ಬಸವ ಮಾರ್ಗ
ವ್ಯಸನ ಮುಕ್ತ ಕೇಂದ್ರ
21 ದಿನಗಳ ಕುಡಿತ ಬಿಡಿಸುವ ಶಿಬಿರ
ದಿನಾಂಕ
ಸೆಪ್ಟೆಂಬರ್ 15 ರಿಂದ
ಅಕ್ಟೋಬರ್ 05 ರವರೆಗೆ
ಕುಡಿತ ನಿಮಗೆ ಒಂದು ಸಮಸ್ಯೆಯೇ?
8553111999 | 8803344999
ಸೂಚನೆ ಪಾಲಿಸಿದ್ದಲ್ಲಿ ಪರಿಹಾರ ಖಚಿತ
ಶ್ರೀ. ಎಂ. ಸೋನಿಕರೀಗೌಡರ ಮೊಮ್ಮಕ್ಕಳು
ಕೆ.ಜಿ. ಕೊಪ್ಪಲು, ಮೈಸೂರು
ಶ್ರೀ. ಎಸ್. ವೆಂಕಟೇಶ್ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಇಂಡಿಯನ್ ಟಿ.ವಿ.
ಮಾಲೀಕರು ವಿ.ಕೆ. & ಕಂಪನಿ
ಶ್ರೀ. ಎಸ್. ಬಸವರಾಜು
ಸಂಸ್ಥಾಪಕರು. ಬಸವಮಾರ್ಗ ಫೌಂಡೇಷನ್
ಛೇರ್‌ಮನ್ ಇಂಡಿಯನ್ ಟಿ.ವಿ. ಮೈಸೂರು
ಮಾಲೀಕರು, ಎಂ.ಎಸ್.ಕೆ. & ಕಂಪನಿ
ಶ್ರೀ. ಎಸ್. ರಾಜು
CHAIRMAN
M.S.K.B. INFRA PROPERTIES
PRIVATE LIMITED
ಶುಭಕೋರುವವರು : ಇಂಡಿಯನ್ ಟಿವಿ, ಬಸವಮಾರ್ಗ ಫೌಂಡೇಷನ್ ಹಾಗೂ
ಕೆ.ಜಿ.ಕೊಪ್ಪಲಿನ ಯಜಮಾನರು, ಯುವಕರು ಹಾಗೂ ಗ್ರಾಮಸ್ಥರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಭಾನುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 146 | ಪುಟಗಳು: 12+IV

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಗುಂಡ : ಸಾರ್ ನಿನ್ನೆ ರಾತ್ರಿಯಿಂದ ನನ್ನ ಹೆಂಡತಿ ಕಾಣ್ತಾ ಇಲ್ಲ...!
ಪೋಸ್ಟ್‌ಮ್ಯಾನ್: ನಿನ್ನ ಹೆಂಡತಿ ಕಾಣೆಯಾಗಿದ್ದರೆ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೆಂಟ್ ಕೊಡು... ಪೋಸ್ಟ್ ಆಫೀಸಿಗೆ ಯಾಕೆ ಬಂದಿದೀಯಾ?
ಗುಂಡ: ಓ ಸಾರಿ ಸರ್, ಖುಷಿಲಿ ಎಲ್ಲಿ ಹೋಗ್ಬೇಕು ಅಂತ ಗೊತ್ತಾಗ್ಲಿಲ್ಲ ಸಾರ್...

ಮೈಸೂರು ಮಿತ್ರ
ಭಾನುವಾರ, 11 ಸೆಪ್ಟೆಂಬರ್ 2022
ಸತ್ಯೇನೋತ್ತಭಿತಾ ಭೂಮಿ!! ನಹಿ ಸತ್ಯಾತ್ಪರೋ ಧರ್ಮ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಎರಡನೇ ಬಾರಿ ಮಾಡುವ ಚಿಂತನೆಗಳು ಅತ್ಯುತ್ತಮವಾದವು. – ಜಾನ್ ಡ್ರೈಡನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಬ್ಬು ಡೊಂಕಾದರೆ, ಸಿಹಿಯೂ ಡೊಂಕೇ?

ಕಲಾಮಂದಿರ ನಿರ್ವಹಣೆಗೆ ನಮ್ಮತ್ರ ದುಡ್ಡಿಲ್ಲ!

● ವಿದ್ಯುತ್ ಬಿಲ್ ಕಟ್ಟಲು, ಸಿಬ್ಬಂದಿಗೆ ವೇತನ ನೀಡಲು ಹಣವಿಲ್ಲ ● ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ವಿಷಾದ

ಮೈಸೂರು, ಸೆ.10(ಎಸ್‌ಪಿಎನ್)– ಮೈಸೂರು ಕಲಾಮಂದಿರ, ಕಿರುರಂಗ ಮಂದಿರ ನಿರ್ವಹಣೆಗೆ ಸಾಕಾಗುವಷ್ಟು ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆಯಲ್ಲಿ ಹಣವಿಲ್ಲ. ಇದರಿಂದ ವಿದ್ಯುತ್ ಬಿಲ್ ಹಾಗೂ ಇಲ್ಲಿನ ತಾಂತ್ರಿಕ ಸಿಬ್ಬಂದಿಗೆ ಮಾಸಿಕ ವೇತನ ನೀಡಲು ಪರದಾಡುವಂತಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಿರುರಂಗ ಮಂದಿರದಲ್ಲಿ ಸಂಚಲನ ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಸಂಚಲನ ಯುವ ರಂಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜೂ.21ರಂದು ನನ್ನನ್ನು ಹಾಸನದಿಂದ ಮೈಸೂರು ಜಿಲ್ಲೆಗೆ ರಾಜ್ಯ ಸರ್ಕಾರ ವರ್ಗಾವಣೆ ಮಾಡಿತ್ತು. ನಾನು ಮೊದಲು ಅಧಿಕಾರ ಸ್ವೀಕರಿಸಿದಾಗ ನನ್ನ ಗಮನಕ್ಕೆ ಬಂದಿದ್ದು, ಇಲ್ಲಿನ ಹಣಕಾಸು ನಿರ್ವಹಣೆಯ ಅವ್ಯವಸ್ಥೆ ಎಂದರು.

ಕಲಾಮಂದಿರ, ಕಿರು ಮಂದಿರದ ವಿದ್ಯುತ್ ಬಿಲ್ ಕಟ್ಟಲು ದುಡ್ಡಿಲ್ಲ. ಕಲಾಮಂದಿರ ಮೇಲ್ಛಾವಣಿ ಸೋರುತ್ತಿದೆ. ಧ್ವನಿ ಮತ್ತು ಬೆಳಕು ವ್ಯವಸ್ಥೆ ನಿರ್ವಹಣೆ ಸರಿಯಿಲ್ಲ. ಈ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಪತ್ರ ವ್ಯವಹಾರ ನಡೆಸಿದ ಹಿನ್ನೆಲೆಯಲ್ಲಿ ಇಲ್ಲಿನ ಸಿವಿಲ್ ಕಾಮಗಾರಿ ಕೈಗೊಳ್ಳಲು ರಾಜ್ಯ ಸರ್ಕಾರ 68.50 ಲಕ್ಷ ರೂ ಹಾಗೂ ಧ್ವನಿ ಮತ್ತು ಬೆಳಕು ವ್ಯವಸ್ಥೆ ಸರಿಪಡಿಸಲು 46.75 ಲಕ್ಷ ಬಿಡುಗಡೆ ಮಾಡಿದೆ. ಇನ್ನೆರಡು ಮೂರು ದಿನಗಳಲ್ಲಿ ಜಿಲ್ಲಾಧಿಕಾರಿಗಳ ಖಾತೆಗೆ ಈ ಅನುದಾನ ಬರಲಿದೆ ಎಂದು ಮಾಹಿತಿ ನೀಡಿದರು.

ಹಿಂದಿನ ಅಧಿಕಾರಿಗಳು ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ವೈಜ್ಞಾನಿಕ ಬಾಡಿಗೆ ದರ ನಿಗದಿಪಡಿಸಿಲ್ಲ. ಅಗತ್ಯಕ್ಕೂ ಹೆಚ್ಚು ಸಿಬ್ಬಂದಿ ನೇಮಕವಾಗಿರುವುದು. ಕೊರೊನಾ ಸಂದರ್ಭದಲ್ಲಿ ಯಾವುದೇ ಕಾರ್ಯಕ್ರಮ ನಡೆಯದಿದ್ದರೂ ಕಲಾಮಂದಿರದ ವಿದ್ಯುತ್ ಬಿಲ್ ತಿಂಗಳಿಗೆ 87 ಸಾವಿರ ರೂ. ಬಂದಿದೆ. ಇದು ಹೇಗೆ ಎಂಬುದು ಯಕ್ಷ ಪ್ರಶ್ನೆ? ಕಲಾಮಂದಿರದಲ್ಲಿ ನಡೆದಿರುವ ಬಹುತೇಕ ಕಾರ್ಯಕ್ರಮಗಳಿಗೆ ರಂಗಮಂದಿರವನ್ನು ಬಹುತೇಕ ಉಚಿತವಾಗಿ ನೀಡಲಾಗಿದೆ. ಇದರಿಂದ ಇಲಾಖೆಗೆ ನಷ್ಟವಾಗಿದೆ ಎಂದರು.

ನಾನು ಹಿಂದೆ ಕೆಲಸ ಮಾಡುತ್ತಿದ್ದ ಹಾಸನದ ಕಲಾಮಂದಿರದಲ್ಲಿ ವಾರ್ಷಿಕ 5 ಲಕ್ಷ ಬಾಡಿಗೆ ವಸೂಲಿಯಾಗುವುದು ಕಷ್ಟವಾಗಿತ್ತು. ಇದರಿಂದ ಅಲ್ಲಿನ ಕಲಾಮಂದಿರ ನಿರ್ವಹಣೆ ಕಷ್ಟವಾಗುತ್ತಿತ್ತು. ತದನಂತರ ಈ ಅಂಶವನ್ನು ಸರ್ಕಾರದ ಗಮನಕ್ಕೆ ತಂದು ಕಲಾಮಂದಿರವನ್ನು ನವೀಕರಣಗೊಳಿಸಿ, ಉದ್ಘಾಟಿಸಿದ 2ನೇ ದಿನಕ್ಕೆ 'ಪರ್ವ' ನಾಟಕ ಅದೇ ರಂಗಮಂದಿರದಲ್ಲಿ ಯಶಸ್ವಿಯಾಗಿ ಪ್ರದರ್ಶನವಾಯಿತು. ಅದಾದ ನಾಲ್ಕೇ ತಿಂಗಳಲ್ಲೇ 8 ಲಕ್ಷಕ್ಕೂ ಹೆಚ್ಚು ಆದಾಯ ಬಂದಿರುವುದು ಸಂತೋಷದ ಸಂಗತಿ. ಈಗಲೂ ಅಲ್ಲಿನ ಪ್ರಭಾರ ಸಹಾಯಕ ನಿರ್ದೇಶಕನಾಗಿ ನಾನೇ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ರಂಗಾಸಕ್ತರು ಮಧ್ಯ ಪ್ರವೇಶಿಸಬೇಕು: ಮೈಸೂರು ಕಲಾಮಂದಿರದ ಒಳಾಂಗಣ ಸೋರುತ್ತಿದೆ. ಧ್ವನಿ ಮತ್ತು ಬೆಳಕು ವ್ಯವಸ್ಥೆ ಸರಿಯಾಗಿಲ್ಲ. ಇದನ್ನು ಸರಿಪಡಿಸುವಂತೆ ರಾಜ್ಯ ಸರ್ಕಾರ 1.15 ಕೋಟಿಗೂ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಿದೆ. ಹಾಗಾಗಿ ಕಲಾಮಂದಿರ, ಕಿರು ರಂಗಮಂದಿರ ಅಭಿವೃದ್ಧಿಗೆ ರಂಗಾಸಕ್ತರು ಮಧ್ಯ ಪ್ರವೇಶಿಸಿ ಅಭಿವೃದ್ಧಿಗೆ ಕೈಜೋಡಿಸುವಂತೆ ಮನವಿ ಮಾಡಿದರು. ಈ ವೇಳೆ ಸಂಚಲನ ಸಂಸ್ಥೆಯ ದೀಪಕ್, ನಿರ್ದೇಶಕ ಜೀವನ್‌ಕುಮಾರ್ ಬಿ.ಹೆಗ್ಗೋಡು ಉಪಸ್ಥಿತರಿದ್ದರು. ತದನಂತರ ಸಂಚಲನ ಮೈಸೂರು ರಂಗತಂಡ ಕಲಾವಿದರು ಅಭಿನಯದ 'ಕಂಚುಗನ್ನಡಿ' ನಾಟಕ ಪ್ರದರ್ಶನಗೊಂಡಿತು.




ಮೈಸೂರು ಕಿರುರಂಗ ಮಂದಿರದಲ್ಲಿ ಸಂಚಲನ ಯುವ ರಂಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಮಾತನಾಡಿದರು.

> "ಮೈಸೂರಿನ ಕಲಾಮಂದಿರ ಮತ್ತು ಕಿರು ಮಂದಿರ ಹಾಗೂ ರಂಗಾಯಣ ಒಂದೇ ಆವರಣದಲ್ಲಿರುವುದರಿಂದ ಈ 3 ರಂಗಮಂದಿರಗಳ ವಿದ್ಯುತ್ ಬಿಲ್ ಒಟ್ಟಿಗೆ ಬರಲಿದೆ. ಕಲಾಮಂದಿರದಿಂದ ವಿದ್ಯುತ್ ಬಿಲ್ ಸರಿಯಾಗಿ ಪಾವತಿಯಾಗದಿದ್ದರೆ, ನಮಗೂ ಇದರ ಬಿಸಿ ತಟ್ಟಲಿದೆ. ಕಳೆದ ಆರು ತಿಂಗಳ ಹಿಂದೆ ಕಲಾಮಂದಿರ ಕರೆಂಟ್ ಬಿಲ್ ಕಟ್ಟಲು ದುಡ್ಡು ಇಲ್ಲದ ವೇಳೆ ರಂಗಾಯಣಕ್ಕೂ ಇದರ ಬಿಸಿ ತಟ್ಟಿತ್ತು. ಆಗ ಬೆಂಗಳೂರಿನಲ್ಲಿ ಸಂಬಂಧಪಟ್ಟ ಸಚಿವರ ಮುಂದೆ ಧರಣಿ ಕುಳಿತು 5.5 ಲಕ್ಷ ಅನುದಾನ ಬಿಡುಗಡೆ ಮಾಡಿಸಿ ಸಮಸ್ಯೆ ಬಗೆಹರಿಸಲಾಗಿತ್ತು. ಹಾಗಾಗಿ ರಂಗಾಸಕ್ತರು ಕಲಾಮಂದಿರ, ಕಿರು ರಂಗಮಂದಿರ ನಿರ್ವಹಣೆ, ಅಭಿವೃದ್ಧಿ ಕುರಿತು ದನಿಯೆತ್ತಲು ಹಿಂಜರಿಯಬಾರದು. –ಅಡ್ಡಂಡ ಸಿ.ಕಾರ್ಯಪ್ಪ, ನಿರ್ದೇಶಕರು, ರಂಗಾಯಣ

ನಿಮ್ಮ ಪತ್ರಗಳು

ಗೌರಿ–ಗಣೇಶನ ನೆರವಿಗೆ ಬಂದ 'ಮೈಸೂರು ಮಿತ್ರ'ನಿಗೆ ಧನ್ಯವಾದ!

ಮಾನ್ಯರೆ,



ವಿಘ್ನ ವಿನಾಶಕ ಮತ್ತು ಆತನ ತಾಯಿ ಗೌರಮ್ಮನಿಗೆ ಬಂದ ದುಸ್ಥಿತಿಯನ್ನು ಬಹಳ ಮಾರ್ಮಿಕವಾಗಿ ಚಿತ್ರ ಸಹಿತ ಪ್ರಕಟಿಸಿದ 'ಮೈಸೂರುಮಿತ್ರ' ನಿಗೆ ಉಘೇ ಉಘೇ ಎನ್ನಬೇಕು. ನಮ್ಮ ಜನ ಆ ದೇವರನ್ನು ಪೂಜಿಸದಿದ್ದರೆ ಯಾರೂ ಅವರನ್ನು ನಿಂದಿಸುತ್ತಿರಲಿಲ್ಲ. ಆದರೆ, ಆ ದೇವರು ಬೇಕಾಬಿಟ್ಟಿ ಎಲ್ಲೋ ಗುಂಡಿಗಳಲ್ಲಿ ನಿಂತಿದ್ದ ನೀರಿನಲ್ಲಿ ವಿಸರ್ಜಿಸಿ, ಆ ಹಬ್ಬಕ್ಕೆ ಆ ದೇವರಿಗೆ ಮಾಡಿರುವ ಅಪಚಾರ ಅಕ್ಷಮ್ಯ. ಇನ್ನು ತಾವು ಹೇಳಿರುವಂತೆ ಹಿಂದೂಗಳ ಏಕತೆ ಮತ್ತು ಐಕ್ಯತೆಗಾಗಿ ಗಣೇಶನ ಹಬ್ಬವನ್ನು ಪ್ರತಿಯೊಬ್ಬರೂ ಆಚರಿಸಬೇಕೆಂದು ಆಗ್ರಹಿಸುವ, ನಮ್ಮ ಹಿಂದೂ ಸಂಘಟನೆಗಳು ಈ ವಿಪರೀತವನ್ನು ಇನ್ನೂ ನೋಡಿಲ್ಲವೇ? ಅಥವಾ ಜಾಣ ಮೌನ ವಹಿಸಿವೆಯೇ? ಇದನ್ನು ನೀವು ಹೇಳಿದಂತೆ ಕಾದು ನೋಡಬೇಕು. ಪತ್ರಿಕೆಯಲ್ಲಿ ಚಿತ್ರಗಳನ್ನು ನೋಡಿದಾಗ ಮತ್ತೊಂದು ಅಂಶ ಮನದಟ್ಟಾಗುತ್ತದೆ. ಎಲ್ಲಾ ಮೂರ್ತಿಗಳು ಬಣ್ಣದಿಂದ ಅಲಂಕೃತಗೊಂಡ ಪಿಓಪಿ ಮೂರ್ತಿಗಳೆಂದು ತಿಳಿಯುತ್ತದೆ. ಪರಿಸರವಾದಿಗಳು, ಸರ್ಕಾರ, ಮಣ್ಣಿನ ಮೂರ್ತಿಯನ್ನು ಮಾತ್ರ ಪೂಜಿಸಿ ನಂತರ ಅವುಗಳನ್ನು ನೀರಿನಲ್ಲಿ ವಿಸರ್ಜಿಸಿದರೆ, ಜಲಚರಗಳಿಗೆ ಮತ್ತು ಪರಿಸರಕ್ಕೆ ಹಾನಿಯಾಗುವುದಿಲ್ಲವೆಂದು ಹೇಳುತ್ತಾ ಬಂದಿದ್ದರೂ ಮೂರ್ಖರಂತೆ ವರ್ತಿಸುವ ನಮ್ಮ ಜನರಿಗೆ ಬುದ್ಧಿ ಹೇಳಲು ಬ್ರಹ್ಮನೇ ಬರಬೇಕು. ದೇವರನ್ನು ಪೂಜಿಸಿ ಎಲ್ಲೋ ವಿಸರ್ಜಿಸಿ ತಮ್ಮ ಕರ್ತವ್ಯ ಮುಗಿಯಿತು ಎನ್ನುವವರಿಗೂ ಮತ್ತು ಹಿಂದೂ ಧರ್ಮವನ್ನು ಪ್ರತಿಪಾದಿಸುವ ಹಿಂದೂ ಸಂಘಟನೆಗಳಿಗೂ ಚಾಟಿ ಬೀಸಿರುವ 'ಮೈಸೂರು ಮಿತ್ರ'ನಿಗೆ ಧನ್ಯವಾದಗಳು. **–ಬ್ಯಾಂಕ್ ಶಿವಕುಮಾರ್, ಜೆಪಿ ನಗರ, ಮೈಸೂರು.**

ವೇದ ವಿಜ್ಞಾನ ಕೇಂದ್ರ ಸ್ಥಾಪಿಸಲಿ

ಮಾನ್ಯರೆ,

ವೇದೋ ನಾಮ ಜ್ಞಾನಮ್ ಎಂಬ ಮಾತಿನಂತೆ ವೇದವೆಂದರೆ ಜ್ಞಾನವೆಂದರ್ಥ. ವಿಜ್ಞಾನವು ಬ್ರಹ್ಮಾಂಡದ ಬಗ್ಗೆ ಪರೀಕ್ಷಣೀಯ ವಿವರಗಳು ಮತ್ತು ಭವಿಷ್ಯವಾಣಿಗಳ ರೂಪದಲ್ಲಿ ಜ್ಞಾನವನ್ನು ನಿರ್ಮಿಸುವ ಮತ್ತು ಪಸರಿಸುವ ಒಂದು ವ್ಯವಸ್ಥಿತ ಯೋಜನೆಯಾಗಿದೆ. ಮಾನವನಿಂದ ತಿಳಿಯಬಲ್ಲ ವಿಶ್ವದ ಬಗೆಗಿನ ಜ್ಞಾನದ ಸಮೂಹವೇ ವಿಜ್ಞಾನ. ಒಂದು ಹಳೆಯ ಮತ್ತು ನಿಕಟವಾಗಿ ಸಂಬಂಧಿತ ಅರ್ಥದಲ್ಲಿ 'ವಿಜ್ಞಾನ'ವು ತಾರ್ಕಿಕವಾಗಿ ವಿವರಿಸಬಲ್ಲ ಮತ್ತು ವಿಶ್ವಾಸಾರ್ಹವಾಗಿ ಅನ್ವಯಿಸಬಲ್ಲ ಪ್ರಕಾರದ, ಜ್ಞಾನದ ಮಂಡಲವನ್ನೇ ನಿರ್ದೇಶಿಸುತ್ತದೆ. ಈ ಜ್ಞಾನವು ಮಾನವ ತನ್ನ ಇಂದ್ರಿಯಗಳಿಂದ ತಿಳಿಯುವಂತಿರಬೇಕು, ತರ್ಕಬದ್ಧವಾಗಿರಬೇಕು ಮತ್ತು ಪರಿಶೋಧನೆಗೆ ವಿಧೇಯವಾಗಿರಬೇಕು. ಈ ಜ್ಞಾನ ಸಂಪಾದನೆಯ ವಿಧಿಯನ್ನು ವೈಜ್ಞಾನಿಕ ವಿಧಿಯೆಂದು ಪರಿಗಣಿಸಲಾಗುತ್ತದೆ. ವೇದವು ಜ್ಞಾನ ಹಾಗೂ ವಿಜ್ಞಾನವೂ ಆಗಿದೆ. ವಿಜ್ಞಾನದ ಮೂಲ ವೇದವೇ ಆಗಿದೆ. ಭೂಮಂಡಲದ ಸಕಲ ವಿಷಯವೂ ವೇದಗಳಲ್ಲಿ ಅಡಗಿದೆ. ನಮ್ಮ ಭಾರತೀಯ ಸನಾತನ ಪರಂಪರೆಯ ಅರಿವಿಗೆ ವೇದ ವಿಜ್ಞಾನವು ಸಹಕಾರಿಯಾಗಿದ್ದು, ಇದರ ಅಧ್ಯಯನ ಹೆಚ್ಚು ಪ್ರಸ್ತುತವೂ, ಅವಶ್ಯಕವೂ ಆಗಿದೆ.

ವಿಜ್ಞಾನದ ಆಳ ಅಗಲ ಇರುವುದೇ ವೇದಗಳಲ್ಲಿ. ವಿಜ್ಞಾನವನ್ನು ವಿಸ್ತಾರಗೊಳಿಸಿದಂತೆ ಅಭಿವೃದ್ಧಿ ಸಾಧ್ಯ. ಇಂದು ಅಭಿವೃದ್ಧಿಯೇ ಬದುಕಿನ ತಾರಕ ಮಂತ್ರ. ಅಭಿವೃದ್ಧಿಯ ವೇಗ ವಿಜ್ಞಾನದ ಬಳಕೆಯ ಮೇಲಿದೆ. ವಿಜ್ಞಾನದ ಅರಿವು ಮೂಡಿ ಸಾಧನೆ ಮಾಡಿದಂತೆಲ್ಲಾ ವಿಶ್ವದ ಪ್ರಗತಿ ಸಾಧ್ಯ. ಹಾಗಾಗಿ ಇಂದು ವಿಜ್ಞಾನ ಎಲ್ಲೆಡೆ ಅನಿವಾರ್ಯವಾಗಿದೆ. ಎಲ್ಲಾ ಹಂತಗಳಲ್ಲೂ ಪಾಶ್ಚಿಮಾತ್ಯರು ಪ್ರತಿಪಾದನೆ ಮಾಡಿರುವ ವಿಜ್ಞಾನದ ಹಲವಾರು ಪ್ರಸಂಗಗಳು ವೇದಗಳಲ್ಲಿನ ಮೂಲವೇ ಆಗಿದೆ. ಖಗೋಳಶಾಸ್ತ್ರ, ಅರ್ಥಶಾಸ್ತ್ರ, ಗಣಿತ, ಆಯುರ್ವೇದವು ವಿಜ್ಞಾನದ ಆವಿಷ್ಕಾರವಾಗಿದ್ದು, ಇವೆಲ್ಲದರ ಮೂಲಸಿದ್ಧಾಂತ ವೇದಗಳಲ್ಲಿ ಕಾಣಬಹುದಾಗಿದೆ. ಆದರೆ ಇಂದು ಪಾಶ್ಚಿಮಾತ್ಯರು ಹೇಳಿದ್ದೇ ಅಂತಿಮ ಎಂಬ ಭ್ರಮೆಯಲ್ಲಿರುವುದನ್ನು ಎಲ್ಲೆಡೆ ಕಾಣಬಹುದು. ಇನ್ನಾದರೂ ನಮ್ಮ ಪ್ರಸ್ತುತ ಹಾಗೂ ಮುಂದಿನ ಪೀಳಿಗೆಗೆ ಅನುಕೂಲವಾಗಲಿರುವ ವೇದವಿಜ್ಞಾನದ ಅವಶ್ಯಕತೆಯನ್ನರಿತು ನಮ್ಮ ವಿಶ್ವ ವಿದ್ಯಾನಿಲಯಗಳು ವೇದ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಿ ಹೆಚ್ಚಿನ ಸಂಶೋಧನೆಯೊಂದಿಗೆ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಲಿ.
–ನಂ. ಶ್ರೀಕಂಠ ಕುಮಾರ್, ಮೈಸೂರು

ಸ್ವಚ್ಛತೆ ಕಾಣದ ಚರಂಡಿ, ರಸ್ತೆಗಳು

ಮಾನ್ಯರೆ,



ಮೈಸೂರಿನ ಕ್ಯಾತಮಾರನಹಳ್ಳಿಯ ಕಿತ್ತೂರು ಚೆನ್ನಮ್ಮ ಶಾಲೆಯ ಬಲ ಬದಿಯ ರಸ್ತೆಯಿಂದ ಗೆಳೆಯರ ಬಳಗದ ಸರ್ಕಲ್‌ವರೆಗೆ ಅಸ್ವಚ್ಛತೆ ತಾಂಡವವಾಡುತ್ತಿದೆ. ಬಿಸಾಡಿದ ಪ್ಲಾಸ್ಟಿಕ್ ಕವರ್ ರಸ್ತೆಯಲ್ಲೇ ಇರುತ್ತದೆ. ರಸ್ತೆ ಪಕ್ಕದಲ್ಲಿ ಬೆಳೆದಿರುವ ಪಾರ್ಥೇನಿಯಂ ಗಿಡಗಳು, ಚರಂಡಿ ತುಂಬಿರುವುದು, ಚರಂಡಿ ಮೇಲೆ ಸರಿಯಾಗಿ ಮುಚ್ಚದ ಸ್ಲ್ಯಾಬ್‌ಗಳು, ಮೂರ್ನಾಲ್ಕು ದಿನಕ್ಕೊಮ್ಮೆ ರಸ್ತೆ ಸ್ವಚ್ಛ ಮಾಡುವ ಪೌರ ಕಾರ್ಮಿಕರು. ಇದಕ್ಕೆ ಸಂಬಂಧಪಟ್ಟವರು ಸ್ಪಂದಿಸಿ ಪರಿಹರಿಸಿ. **– ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು**

ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನ ಜಾರಿಯಾಗಲಿ

ಮಾನ್ಯರೆ,

ಅತಿಥಿ ಉಪನ್ಯಾಸಕರು ಒಂದು ರೀತಿ ಮಧ್ಯಮ ವರ್ಗದವರಂತೆ ಆರಕ್ಕೆ ಏರದೆ, ಮೂರಕ್ಕೆ ಇಳಿಯದ ಪರಿಸ್ಥಿತಿಯಲ್ಲಿ ಜೀವನ ನಡೆಸಬೇಕಾಗಿದೆ. ಓದಿದ ಓದಿಗೆ ಬೆಲೆಯಿಲ್ಲದೆ ಸರ್ಕಾರಿ ನೌಕರಿ ಸಿಗದೆ, ಸಿಕ್ಕ ಅತಿಥಿ ಉಪನ್ಯಾಸಕ ವೇತನ ಸಾಲದೆ ತ್ರಿಶಂಕು ಸ್ಥಿತಿ ಪ್ರಸ್ತುತ ಅತಿಥಿ ಉಪನ್ಯಾಸಕರದ್ದಾಗಿದೆ.

ಪ್ರಸ್ತುತ ರಾಜ್ಯ ಸರ್ಕಾರದ ವೇತನದಂತೆ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೆ ಪಿಜಿ ಮುಗಿಸಿದವರಿಗೆ ಹದಿನಾರು ಗಂಟೆಯ ಕೆಲಸಕ್ಕೆ (ವರ್ಕ್ ಲೋಡ್‌ಗೆ) ಒಂದು ತರಗತಿಗೆ 280 ರೂಗಳಿದ್ದು, ತಿಂಗಳಿಗೆ 17,920 ವೇತನವಾಗುತ್ತದೆ. ಯುಜಿಸಿ ನಿಯಮದಂತೆ ನೆಟ್, ಕೆಸೆಟ್, ಪಿಹೆಚ್‌ಡಿ, ಎಂಫಿಲ್ ಮಾಡಿದವರಿಗೂ ವೇತನ ಸ್ವಲ್ಪ ಹೆಚ್ಚಾಗಿರುತ್ತದೆ. ಈ ಬರುವ ಅಲ್ಪ ವೇತನದಲ್ಲಿ ಐಟಿ ಮತ್ತು ಪಿಟಿ ಕೂಡ ಕಡಿತಗೊಳ್ಳುವುದರಿಂದ ವೇತನದ ಮೊತ್ತ ಕಡಿಮೆಯಾಗುತ್ತದೆ. ಪ್ರಸ್ತುತ ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರ ವೇತನ ಹೆಚ್ಚಳವನ್ನು ಜಾರಿಗೊಳಿಸಿದ್ದು, ಕನಿಷ್ಠ 31000 ಹೆಚ್ಚಾಗಿದೆ ಅನುಭವದ ಆಧಾರದ ಮೇಲೆ 45000 ಸಾವಿರದವರೆಗೆ ವೇತನ ಪಡೆಯಬಹುದಾಗಿದೆ. ಈ ವೇತನ ಶ್ರೇಣಿಯನ್ನು ಶೀಘ್ರವಾಗಿ ಜಾರಿಗೊಳಿಸಬೇಕು.

ಇದರಿಂದ ಪ್ರತಿಭಾವಂತ ಅತಿಥಿ ಉಪನ್ಯಾಸಕರು ಎಲ್ಲಾ ಅರ್ಹತೆಗಳನ್ನು ಹೊಂದಿದ್ದರೂ ಖಾಯಂ ಉದ್ಯೋಗ ದೊರಕದೆ ವಯಸ್ಸಿನ ಮಿತಿಯನ್ನು ದಾಟಿದವರಿಗೆ ಅನುಕೂಲವಾಗುತ್ತದೆ. ಇದರಿಂದಾಗಿ ಅತಿಥಿ ಉಪನ್ಯಾಸಕರ ಜೀವನ ಮಟ್ಟವು ಸುಧಾರಿಸಿದಂತಾಗುತ್ತದೆ. **–ರಾಸುಮ ಭಟ್, ಚಿಕ್ಕಮಗಳೂರು.**

ಮೈಸೂರು ಸಂತೆಗೆ ನೀವೂ ಬನ್ನಿ...!




ಮೈಸೂರು,ಸೆ.10(ಎಂಟಿವೈ)– ಸಮಾಜ ಸೇವೆಗಾಗಿ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಮಹಾರಾಜ ಕಾಲೇಜು ಮೈದಾನದಲ್ಲಿ ಇಂದಿನಿಂದ ಎರಡು ದಿನಗಳ 'ಮೈಸೂರು ಸಂತೆ' ಹೆಸರಲ್ಲಿ ಅಲಂಕಾರಿಕ ವಸ್ತು, ಉಡುಪುಗಳ ಮಾರಾಟ ಹಾಗೂ ಪ್ರದರ್ಶನ ಮೇಳ ಆರಂಭವಾಯಿತು.

ಮೈಸೂರು ಸಂತೆ ತಂಡದ ವತಿಯಿಂದ ಆಯೋಜಿಸಿದ್ದ ಈ ಸಂತೆಯಲ್ಲಿ 70 ಮಳಿಗೆಗಳಿದ್ದು, ಅಲಂಕಾರಿಕಾ ಬಟ್ಟೆ, ಪಾದರಕ್ಷೆ, ಆಭರಣ, ಕಲಾಕೃತಿ, ಕರಕುಶಲ ವಸ್ತುಗಳು, ಕೈಮಗ್ಗ, ಪೀಠೋಪಕರಣ, ವಿಂಟೇಜ್ ಗೃಹೋಪಯೋಗಿ ವಸ್ತುಗಳು, ಉದ್ಯಾನ ಸಾಮಗ್ರಿ, ಆಟಿಕೆಗಳ ಮಾರಾಟ ಹಾಗೂ ಪ್ರದರ್ಶನವಿದೆ. ಇದರೊಂದಿಗೆ 10 ಮಳಿಗೆಗಳಲ್ಲಿ ತಿಂಡಿ–ತಿನಿಸು, ಐಸ್‌ಕ್ರೀಮ್, ಪಾನೀಯ ಸೇರಿದಂತೆ ಬಗೆ ಬಗೆಯ ತಿಂಡಿ–ತಿನಿಸುಗಳ ಮಾರಾಟವೂ ಇದೆ.

ಮೇಳದಲ್ಲಿ ಪರಿಸರ ಸಂರಕ್ಷಣೆ ಹಾಗೂ ಇಂಧನ ಮಿತ ಬಳಕೆ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಬ್ಯಾಟರಿ ಚಾಲಿತ ವಾಹನಗಳ ಬಳಕೆಗಾಗಿ ವಿವಿಧ ಕಂಪನಿಗಳ ವಾಹನಗಳ ಪ್ರದರ್ಶನವೂ ಇದ್ದು, ಆ ವಾಹನಗಳ ಬಳಕೆಯಿಂದಾಗುವ ಪ್ರಯೋಜನದ ಬಗ್ಗೆ ವೀಕ್ಷಕರಿಗೆ ಮಾಹಿತಿ ನೀಡಲಾಗುತ್ತಿದೆ. ಮೈಸೂರು ಸಂತೆಗೆ ಬರುವವರಿಗೆ ಹಬ್ಬದ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಪ್ರದರ್ಶನ ಆವರಣವನ್ನು ಸಿಂಗರಿಸಲಾಗಿದ್ದು, ದಸರಾ ಮಹೋತ್ಸವದ ಮೆರಗು ನೀಡುವುದಕ್ಕಾಗಿ ಆನೆಯೊಂದರ ಗೊಂಬೆ ನಿಲ್ಲಿಸಿ, ಅದನ್ನು ಸೆಲ್ಫಿ ಪಾಯಿಂಟ್ ಆಗಿ ಪರಿವರ್ತಿಸಲಾಗಿದೆ. ಸಂಜೆ ವೇಳೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅರಮನೆಯ ದರ್ಬಾರ್ ಹಾಲ್ ಮಾದರಿಯಲ್ಲಿ ವೇದಿಕೆ ವಿನ್ಯಾಸಗೊಳಿಸಲಾಗಿದೆ.

ಸಮಾಜ ಸೇವೆಗಾಗಿ: ಮೈಸೂರು ಸಂತೆ ತಂಡದ ಸದಸ್ಯ ಭರತ್ ಮಾತನಾಡಿ, ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣ ಹಾಗೂ ನಾನಾ ರೀತಿಯ ಸಮಾಜ ಸೇವಾ ಕಾರ್ಯಗಳಿಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು 'ಮೈಸೂರು ಸಂತೆ' ಪ್ರದರ್ಶನ ಮೇಳವನ್ನು ಆಯೋಜಿಸಲಾಗಿದೆ. ಎರಡು ದಿನಗಳ ಈ ಮೇಳದಲ್ಲಿ ಮೈಸೂರಿನ ಜನತೆಯ ಅಭಿರುಚಿಗೆ ಅನುಗುಣವಾಗಿ ಅಲಂಕಾರಿಕ ವಸ್ತುಗಳು, ನೂತನ ವಿನ್ಯಾಸದ ಉಡುಪುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ 50 ರೂ. ಪ್ರವೇಶ ದರ ನಿಗದಿ ಮಾಡಿದ್ದು, ಸಂಗ್ರಹವಾದ ಮೊತ್ತದಲ್ಲಿ ಒಂದು ಭಾಗವನ್ನು ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳಿಗೆ ಪಠ್ಯ ಸಾಮಗ್ರಿ ಹಾಗೂ ಅಗತ್ಯ ವಸ್ತುಗಳ ಕೊಡುಗೆ ನೀಡಲು ಬಳಸಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಮೈಸೂರು ಸಂತೆ ತಂಡದ ಸ್ನೇಹಲ್, ಸ್ಮಿತಾಬಾಲು, ನಿಖಿಲೇಶ್, ಗಮ್ಯ, ಕಾರ್ತಿಕ್, ಚೈತ್ರ ಇನ್ನಿತರರು ಉಪಸ್ಥಿತರಿದ್ದರು.

ಮಂತ್ರಿ ಗ್ರೂಪ್ ಸಿಎಂಡಿ ಸುಶೀಲ್ ಪಾಂಡುರಂಗ ಬಂಧನ



ಬೆಂಗಳೂರು: ಮಂತ್ರಿ ಗ್ರೂಪ್‌ನ ಸಿಎಂಡಿ ಸುಶೀಲ್ ಪಾಂಡುರಂಗ ಮಂತ್ರಿ ಅವರನ್ನು ಸಿಐಡಿ ವಿಶೇಷ ತನಿಖಾ ತಂಡ ಬಂಧಿಸಿದೆ.

ಸುಶೀಲ್ ಪಾಂಡುರಂಗ ತಮ್ಮ ಗ್ರಾಹಕರಿಗೆ ವಂಚನೆ ಮಾಡಿದ್ದಾರೆ. ಜೊತೆಗೆ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಗ್ರಾಹಕರಿಂದ ಸಂಗ್ರಹಿಸಿದ್ದ ಹಣವನ್ನು ದುರ್ಬಳಕೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಸಿಐಡಿ ಎಸ್‌ಪಿ ರವಿ ಡಿ.ಚನ್ನಣ್ಣನವರ್ ತಂಡ ಸುಶೀಲ್ ಮಂತ್ರಿಯವರನ್ನು ಬಂಧಿಸಿದೆ. ಕಳೆದ ಜೂನ್ 25ರಂದು ಇ.ಡಿ ಅರೆಸ್ಟ್ ಮಾಡಿ ತನಿಖೆ ನಡೆಸಿತ್ತು. ಅದಾದ ಬಳಿಕ ಜಾಮೀನಿನ ಮೇಲೆ ಸುಶೀಲ್ ಪಾಂಡುರಂಗ ಹೊರ ಬಂದಿದ್ದರು. ಇದೀಗ ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. 7ರಿಂದ 10 ವರ್ಷಗಳಲ್ಲಿ ಮನೆ ನೀಡುವುದಾಗಿ ಭರವಸೆ ನೀಡಿ, ಸಾವಿರಾರು ಗ್ರಾಹಕರಿಂದ ಸುಮಾರು 1000 ಕೋಟಿ ಸಂಗ್ರಹಿಸಿದ್ದರು. ಸುಳ್ಳು ದಾಖಲೆಗಳನ್ನು ತೋರಿಸಿ ವಂಚಿಸಿದ್ದಾರೆ. ಗ್ರಾಹಕರಿಂದ ಸಂಗ್ರಹಿಸಿದ ಹಣವನ್ನು ದುರ್ಬಳಕೆ ಮಾಡಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಈ ಕುರಿತು ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿವೆ.

ಖಾತೆಯಲ್ಲಿ ಕಡಿತವಾಗಿದ್ದನ್ನು ಪ್ರಶ್ನಿಸಿದ ಪ್ರಾಧ್ಯಾಪಕರಿಗೆ 82 ಸಾವಿರ ವಂಚನೆ

ಮೈಸೂರು, ಸೆ.10–ಬ್ಯಾಂಕ್ ಖಾತೆಯಿಂದ ಅನಧಿಕೃತವಾಗಿ ಕಡಿತವಾಗಿದ್ದ ಹಣ ಹಿಂತಿರುಗಿಸುವುದಾಗಿ ನಂಬಿಸಿ ಪ್ರಾಧ್ಯಾಪಕರೊಬ್ಬರಿಂದ 82,792 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಮೈಸೂರಿನ ಜಲದರ್ಶಿನಿ ನ್ಯೂ ಗೆಸ್ಟ್‌ಹೌಸ್‌ನಲ್ಲಿ ವಾಸವಿರುವ ಪ್ರೊ.ಪಿ.ವಿ.ನಾಗರಾಜ ಹಣ ಕಳೆದುಕೊಂಡವರಾಗಿದ್ದು, ಮೊದಲಿಗೆ ಇವರ ಖಾತೆಯಿಂದ 1,772 ರೂ. ಕಡಿತವಾಗಿದ್ದು, ಈ ಹಣ ಬಜಾಜ್ ಲೈಫ್ ಇನ್ಶೂರೆನ್ಸ್ ಹೆಸರಿಗೆ ಕಡಿತವಾಗಿರುವುದಾಗಿ ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಅವರು ಬಜಾಜ್ ಕಚೇರಿಗೆ ಹೋಗಿ ದೂರು ನೀಡಿದಾಗ, ಹಣ ವಾಪಸ್ ಬರಬೇಕಾದರೆ ಸರಸ್ವತಿಪುರಂನಲ್ಲಿರುವ ಕಚೇರಿಗೆ ಹೋಗಬೇಕು. ಅಥವಾ ದೂರವಾಣಿ ಸಂಖ್ಯೆಯನ್ನು ಪಡೆದು ಮಾಹಿತಿ ನೀಡಿ ಎಂದು ಅಲ್ಲಿನವರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರೊ. ನಾಗರಾಜ ಆನ್‌ಲೈನ್‌ನಲ್ಲಿ ಹುಡುಕಿದಾಗ 8809047878 ಸಂಖ್ಯೆ ದೊರೆತಿದೆ. ಆ ಸಂಖ್ಯೆಗೆ ಅವರು ಕರೆ ಮಾಡಿದ ನಂತರ 7042199646 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿಯು ಪ್ರಾಧ್ಯಾಪಕರಿಂದ ಬ್ಯಾಂಕ್ ಖಾತೆಯೊಂದಕ್ಕೆ 81,020 ರೂ. ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಒಟ್ಟಾರೆ ಇವರು 82,792 ರೂ. ಕಳೆದುಕೊಂಡಿದ್ದು, ಅವರ ಖಾತೆಗೆ ಹಣ ವಾಪಸ್ ಜಮೆ ಆಗಿಲ್ಲ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

30 ಲಕ್ಷದ ಬಹುಮಾನ ಆಸೆ ಹುಟ್ಟಿಸಿ ಗೃಹಿಣಿಗೆ 3.15 ಲಕ್ಷ ರೂ. ವಂಚನೆ

ಮಂಡ್ಯ, ಸೆ.10–ಮೂವತ್ತು ಲಕ್ಷ ರೂ. ಬಹುಮಾನ ಬಂದಿದೆ ಎಂದು ನಂಬಿಸಿ ಗೃಹಿಣಿಯೋರ್ವರಿಂದ 3.15 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಕಲ್ಕುಣಿ ಗ್ರಾಮದ ಗೃಹಿಣಿ ಮಧು(28) ವಂಚನೆಗೊಳಗಾದವರು.

ಮಧು ಅವರ ಪತಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಅವರ ಬ್ಯಾಂಕ್ ಖಾತೆಯನ್ನು ಮಧು ಅವರೇ ನಿರ್ವಹಣೆ ಮಾಡುತ್ತಿದ್ದರು. ಜು.28ರಂದು ಬೆಳಗ್ಗೆ ಮಧು ಅವರ ಮೊಬೈಲ್‌ಗೆ 30 ಲಕ್ಷ ಮೌಲ್ಯದ ವಸ್ತುಗಳು ಬಹುಮಾನವಾಗಿ ಬಂದಿವೆ ಎಂದು ಮೆಸೇಜ್ ಬಂದಿದೆ. ಸ್ವಲ್ಪ ಸಮಯದ ನಂತರ 8798859550 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಬಹುಮಾನದ ವಸ್ತುಗಳನ್ನು ಪಡೆಯಲು ಪಾರ್ಸಲ್ ಚಾರ್ಜ್ 35 ಸಾವಿರ ರೂ. ಪಾವತಿಸಬೇಕೆಂದು ತಿಳಿಸಿ, ಖಾಸಗಿ ಬ್ಯಾಂಕ್‌ವೊಂದರ ಸಂಖ್ಯೆಯನ್ನು ನೀಡಿದ್ದಾನೆ. ಅವರು ಹಣ ವರ್ಗಾಯಿಸಿದ ನಂತರ ಆ.8ರವರೆಗೂ ಆಗಿಂದಾಗ್ಗೆ ಮಧು ಅವರಿಗೆ ಕರೆ ಮಾಡುತ್ತಿದ್ದ ವಂಚಕರು ವಿವಿಧ ಶುಲ್ಕಗಳು ಎಂದು ತಿಳಿಸಿ ಒಟ್ಟು 3.15 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದು, ನಂತರ ಅವರಿಗೆ ಬಹುಮಾನವೂ ಬರಲಿಲ್ಲ, ಹಣವೂ ಹಿಂತಿರುಗಿಸಲಿಲ್ಲ. ಈ ಸಂಬಂಧ ಮಂಡ್ಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.10–ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2022, ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅ.1ರಂದು ಕಲಾಮಂದಿರದಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ ಶಾಲಾ ಮಕ್ಕಳಿಗೆ ಪ್ರಾಣಿ, ಪಕ್ಷಿ ಪರಿಸರ ಎಂಬ ಶೀರ್ಷಿಕೆಯಡಿ (1ನೇ ತರಗತಿಯಿಂದ 4ನೇ ತರಗತಿಯ ಮಕ್ಕಳಿಗೆ), ನಮ್ಮ ಮೈಸೂರಿನ ಸುಂದರ ತಾಣಗಳು, ಸ್ಮಾರಕಗಳು, ಸಾಧಕರು ಎಂಬ ಶೀರ್ಷಿಕೆಯಡಿ (5ನೇ ತರಗತಿಯಿಂದ 7ನೇ ತರಗತಿ ಮಕ್ಕಳಿಗೆ) ಹಾಗೂ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಎಂಬ ಶೀರ್ಷಿಕೆಯಡಿ (8ನೇ ತರಗತಿಯಿಂದ 10ನೇ ತರಗತಿ ಮಕ್ಕಳಿಗೆ) 3 ವಿಭಾಗಗಳಲ್ಲಿ ಸ್ಥಳದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಏರ್ಪಡಿಸಿದ್ದು, ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಶಾಲಾ ಮಕ್ಕಳು ಸೆ.16ರಿಂದ ಕಚೇರಿ ದಿನಗಳಲ್ಲಿ ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರದಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಚಿತ್ರ ರಚನೆಗೆ ಬೇಕಾಗುವ ಬಣ್ಣ, ಬ್ರಶ್ ಇತ್ಯಾದಿ ಪರಿಕರಗಳನ್ನು ಶಾಲಾ ಮಕ್ಕಳೇ ತರುವುದು. ಡ್ರಾಯಿಂಗ್ ಶೀಟ್‌ಗಳನ್ನು ಮಾತ್ರ ಉಪಸಮಿತಿಯಿಂದ ಒದಗಿಸಲಾಗುವುದು. ಶಾಲಾ ಮಕ್ಕಳು ಪ್ರಸಕ್ತ ಸಾಲಿನ ಶಾಲಾ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗೆ ಮೊ. ಸಂಖ್ಯೆ 9449176407 ಸಂಪರ್ಕಿಸಬಹುದು.

ಲಿವಿಂಗ್ ಟುಗೆದರ್‌ನಲ್ಲಿದ್ದ ಜೋಡಿಗಳ ನಡುವೆ ಘರ್ಷಣೆ: ಮಹಿಳೆ ಸಾವು

ಜೊತೆಗಾರನ ಮೇಲೆ ಕೊಲೆ ಕೇಸ್ ದಾಖಲು

ಮೈಸೂರು, ಸೆ.10– ಲಿವಿಂಗ್ ಟುಗೆದರ್‌ನಲ್ಲಿದ್ದ ಜೋಡಿಗಳ ನಡುವೆ ಹಣಕಾಸಿನ ವಿಚಾರದಲ್ಲಿ ಗಲಾಟೆ ನಡೆದು ತೀವ್ರ ಹಲ್ಲೆಗೊಳಗಾಗಿದ್ದ ಮಹಿಳೆ ಮೃತಪಟ್ಟಿದ್ದಾರೆ. ಈ ಸಂಬಂಧ ಪ್ರಿಯಕರನ ವಿರುದ್ಧ ಕೊಲೆ ಕೇಸು ದಾಖಲಾಗಿದೆ.

ಮೈಸೂರಿನ ಗಿರಿದರ್ಶಿನಿ ಬಡಾವಣೆಯಲ್ಲಿ ಬಾಡಿಗೆ ಮನೆ ಪಡೆದು ವಾಸವಿದ್ದ ಭಾಗ್ಯ(42) ಮೃತ ದುರ್ದೈವಿ. ಈಕೆಯ ಜೊತೆಗಿದ್ದ ರಾಚಪ್ಪ(48) ಇದೀಗ ಪೊಲೀಸರ ಅತಿಥಿಯಾಗಿದ್ದಾನೆ. ಪತ್ನಿಯನ್ನು ಕಳೆದುಕೊಂಡಿದ್ದ ರಾಚಪ್ಪ ಕಳೆದ ಹತ್ತು ವರ್ಷಗಳಿಂದ ಪತಿಯಿಂದ ದೂರವಾಗಿದ್ದ ಭಾಗ್ಯ ಜೊತೆ ವಾಸವಿದ್ದ. ಮದುವೆ ಆಗದಿದ್ದರೂ ಇಬ್ಬರೂ ಲಿವಿಂಗ್ ಟುಗೆದರ್‌ನಲ್ಲಿದ್ದರು.

ದೇವರಾಜ ಮಾರುಕಟ್ಟೆಯ ಬಾಳೆಹಣ್ಣಿನ ಮಂಡಿಯಲ್ಲಿ ಕೆಲಸ ಮಾಡುತ್ತಿದ್ದ ರಾಚಪ್ಪ ಹಾಗೂ ಭಾಗ್ಯ ನಡುವೆ ಹಣಕಾಸಿನ ವಿಚಾರದಲ್ಲಿ ಗಲಾಟೆ ಆಗಿದೆ. ಸೆ.5 ರಂದು ಇದೇ ವಿಚಾರದಲ್ಲಿ ಗಲಾಟೆ ಶುರುವಾದಾಗ ಭಾಗ್ಯಳಿಗೆ ರಾಚಪ್ಪ ಬಲವಾಗಿ ಹೊಡೆದು, ಪರಾರಿಯಾಗಿದ್ದಾನೆ. ತೀವ್ರ ಅಸ್ವಸ್ಥಳಾದ ಭಾಗ್ಯಳನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಭಾಗ್ಯ ಮೃತಪಟ್ಟಿದ್ದಾಳೆ. ಈ ಸಂಬಂಧ ಕೊಲೆ ಪ್ರಕರಣ ದಾಖಲಿಸಿಕೊಂಡ ಆಲನಹಳ್ಳಿ ಠಾಣೆ ಪೊಲೀಸರು ಆರೋಪಿ ರಾಚಪ್ಪನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಒಗ್ಗಟ್ಟು ಕಾಯ್ದುಕೊಳ್ಳಲು ವಿಪ್ರ ಸಮುದಾಯಕ್ಕೆ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಸಲಹೆ



ಮೈಸೂರು, ಸೆ.10(ಎಂಟಿವೈ)– ಸಮುದಾಯದ ಹಿತದೃಷ್ಟಿಯಿಂದ ವಿಪ್ರ ಸಮುದಾಯ ಒಗ್ಗಟ್ಟಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಸಲಹೆ ನೀಡಿದ್ದಾರೆ.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಿಪ್ರ ಸಮುದಾಯ ವಿವಿಧ ಕಾರಣಗಳಿಂದ 3–4 ಗುಂಪುಗಳಾಗಿದೆ. ಇದು ಸಮುದಾಯದ ಏಳಿಗೆಗೆ ಮಾರಕವಾಗುತ್ತಿದೆ. ಸಮುದಾಯದ ಹಿತದೃಷ್ಟಿಯಿಂದ ವಿಪ್ರ ಸಮುದಾಯ ಒಗ್ಗಟ್ಟು ಕಾಪಾಡಿಕೊಳ್ಳಬೇಕು. ನಮ್ಮಲ್ಲಿರುವ ಎಲ್ಲಾ ಬಣಗಳು ಒಂದುಗೂಡಬೇಕು. ಸಮುದಾಯದ ಹಿತದೃಷ್ಟಿಯಿಂದ ನಾವೆಲ್ಲರೂ ಒಂದಾಗಲೇಬೇಕು ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಪದಾಧಿಕಾರಿಗಳ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ವಿವಿಧ ಬಣಗಳಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಿಗೆ ಸಮುದಾಯದವರು ಹಲವರು ಬೆಂಬಲ ನೀಡಿದ್ದಾರೆ. ಮೈಸೂರಿನ ಮುಖಂಡರು ಬೇರೆ ಬೇರೆ ಅಭ್ಯರ್ಥಿಗಳಿಗೆ ಬೆಂಬಲ ನೀಡಿದ್ದರು. ಆದರೂ ನಾನು ಗೆಲುವು ಸಾಧಿಸಿದ್ದೇನೆ. ಆದರೆ, ಸಮುದಾಯದ ಹಿತದೃಷ್ಟಿಯಿಂದ ನಾವೆಲ್ಲಾ ಸಂಘಟಿತರಾಗಬೇಕು. ಸಮುದಾಯದ ಒಳಿತಿಗಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ ಮಹತ್ವದ್ದಾಗಿದೆ. ನಮ್ಮಲ್ಲಿ ರಾಷ್ಟ್ರೀಯತೆಯ ಮನೋಭಾವ ಹೆಚ್ಚಿರಬೇಕು. ಮಠ, ಮಂದಿರಗಳು, ಬ್ರಾಹ್ಮಣ ಶಿಕ್ಷಣ ಸಹಕಾರಿ ಸಂಸ್ಥೆಗಳು ಉಳಿಯುವಿಕೆಗಾಗಿ ವಿಪ್ರ ಮುಖಂಡರು ಶ್ರಮಿಸಬೇಕು. ಅದಕ್ಕಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ ಮಾತನಾಡಿ, ವಿಪ್ರ ಸಮುದಾಯದ ಜನಪ್ರತಿನಿಧಿಗಳು ಕಾನೂನು ತಜ್ಞರು ಸಮುದಾಯದ ಮುಖಂಡರು ಒಳಗೊಂಡ ವಿಪ್ರನಿಯೋಗ ರಚಿಸಿ ಸರ್ಕಾರದ ಗಮನ ಸೆಳೆದು ಸಮುದಾಯಕ್ಕೆ ಸವಲತ್ತು ತಲುಪಿಸಲು ಶ್ರಮಿಸಬೇಕು ಎಂದರು. ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ ಸಿಂಹ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹೊಯ್ಸಳ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಆಧ್ಯಾತ್ಮಿಕ ಚಿಂತಕ ಭಾನುಪ್ರಕಾಶ್ ಶರ್ಮ, ಪಾಲಿಕೆ ಸದಸ್ಯ ಎಂ.ವಿ. ರಾಂಪ್ರಸಾದ್, ಮೈಸೂರು ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಜಯಸಿಂಹ ಶ್ರೀಧರ್, ರಂಗನಾಥ್, ವಿಜಯ್ ಕುಮಾರ್, ಜಗದೀಶ್, ಪ್ರಶಾಂತ್, ಸುಚೀಂದ್ರ ಚಕ್ರಪಾಣಿ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಚಾಮರಾಜಕ್ಷೇತ್ರದ ಜನಪ್ರಿಯ ಶಾಸಕರಾದ
ಎಲ್.ನಾಗೇಂದ್ರ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಎಂ.ಎಂ ಎಂಟರ್‌ಪ್ರೈಸಸ್
ಹಾಗು ಸ್ನೇಹಿತರು, ಒಂಟಿಕೊಪ್ಪಲ್
ಚೇತನ್
ಹಾಗು ಸ್ನೇಹಿತರು
ಕೆ.ಜಿ.ಕೋಪ್ಪಲ್

ಸ್ವಾತಂತ್ರ್ಯ ಬಂದ ಆರಂಭದಲ್ಲಿ 33 ಕೋಟಿ ಜನರಿಗೆ ವಿದೇಶದಿಂದ ಆಹಾರ ಪಡೆಯುತ್ತಿದ್ದೆವು; ಈಗ 133 ಕೋಟಿ ಜನರಿಗೆ ನಮ್ಮಲ್ಲೇ ಆಹಾರ ಲಭ್ಯವಿದೆ: ಇದು ವಿಜ್ಞಾನದ ಫಲಶೃತಿ

ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ ಆಗಿದ್ದೇ ವಿಜ್ಞಾನದಿಂದ

ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅಭಿಮತ

ಮೈಸೂರು, ಸೆ.10(ಜಿಎ)–ಭಾರತಕ್ಕೆ ಸ್ವಾತಂತ್ರ್ಯ ದೊರೆತ ಆರಂಭದ ದಿನಗಳಲ್ಲಿ 33 ಕೋಟಿ ಮಂದಿಗೆ ವಿದೇಶಗಳಿಂದ ಆಹಾರ ಪಡೆಯುತ್ತಿದ್ದೆವು. ಕ್ರಮೇಣ ಕೃಷಿ ವಿಜ್ಞಾನಿಗಳು ಮಾಡಿದ ಸಾಧನೆಯಿಂದಾಗಿ ದೇಶದ 133 ಕೋಟಿ ಮಂದಿಗೂ ಆಹಾರ ಸಿಗುವಂತಾಗಿ ದೇಶದಲ್ಲಿ ಹಸಿರು ಕ್ರಾಂತಿ ಹಾಗೂ ಕ್ಷೀರ ಕ್ರಾಂತಿಯಾಗಿದ್ದು ವಿಜ್ಞಾನದಿಂದಲೇ ಎಂದು ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು (ಕೆಆರ್‌ವಿಪಿ) ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಜಿ.ಪಂ., ಜಿಲ್ಲಾಡಳಿತ, ಕೆಎಸ್‌ಒಯು ಹಾಗೂ ಮೈಸೂರು ವಿಶ್ವವಿದ್ಯಾಲಯ ಸಹಯೋಗದಲ್ಲಿ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಶನಿವಾರ ಆಯೋಜಿಸಿದ್ದ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೂಲ ವಿಜ್ಞಾನದ ಮೇಲೆ ಸಾಮಾಜಿಕ ಜಾಲತಾಣದ ಆಕ್ರಮಣ ನಡೆಯುತ್ತಿದ್ದು, ಮೂಲ ವಿಜ್ಞಾನ ಬಹಳ ಮುಖ್ಯ ಎನ್ನುವುದನ್ನು ಮರೆಯಬಾರದು. ರಾಜಕೀಯ ವಿಜ್ಞಾನವು ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಜಕೀಯ ಕ್ಷೇತ್ರ ಹಾಗೂ ರಾಜಕಾರಣಿಗಳನ್ನು ಮೈಲಿಗೆಯಾಗಿ ನೋಡುವುದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾಗುತ್ತದೆ. ಇದು ದೂರಾಗಬೇಕು ಎಂದು ಆಶಿಸಿದರು.

ಇತ್ತೀಚಿನ ಯುವ ಪೀಳಿಗೆಯವರು ಗೂಗಲ್‌ನ ಗುಲಾಮರಾಗಿದ್ದಾರೆ. ಈ ಸಂದರ್ಭದಲ್ಲಿ ವಿಜ್ಞಾನವು ಹಿಂದೆಂದಿಗಿಂತಲೂ ಬಹಳ ಪ್ರಸ್ತುತವಾಗಿದೆ. ಹೀಗಾಗಿ, ಶಿಕ್ಷಕರು ವೈಜ್ಞಾನಿಕ ವಿಚಾರಗಳನ್ನು ಮಕ್ಕಳಿಗೆ ತಿಳಿಸಬೇಕು. ಪ್ಲಾಸ್ಟಿಕ್‌ನಿಂದ ಆಗುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕಿದೆ ಎಂದು ಭಾರತ್ ಸ್ಕೌಟ್ ಅಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಸಲಹೆ ನೀಡಿದರು.

ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಮಾತನಾಡಿ, ಇಂದು ಪ್ರಪಂಚದಲ್ಲಿ ಶೀಘ್ರವಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಕ್ಷಿಪ್ರ ಬೆಳವಣಿಗೆ ಆಗುತ್ತಿದ್ದು, ಸುಸ್ಥಿರ ಅಭಿವೃದ್ಧಿಗೆ ಅದನ್ನು ಬಳಸಿಕೊಳ್ಳಬೇಕು. ಕೃತಕ ಬುದ್ಧಿ ಮತ್ತೆ ಹೇಳುವುದನ್ನೇ ಕೇಳುತ್ತಾ ಹೋದರೆ ದೊಡ್ಡ ಅನಾಹುತ ಎದುರಿಸಬೇಕಾಗುತ್ತದೆ. ಅದು ಒಳ್ಳೆಯ ಕೆಲಸಕ್ಕಷ್ಟೆ ಬಳಕೆಯಾಗಬೇಕು. ಈ ಬಗ್ಗೆ ಜಾಗೃತಿ ಮೂಡಿಸುವ ಬಗ್ಗೆ ಕೆಲಸಗಳು ನಡೆಯಬೇಕಿದೆ ಎಂದರು.



ಸಮ್ಮೇಳನದಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್, ಬೆಂಗಳೂರಿನ ವಿಜ್ಞಾನ ಸಂವಹನಕಾರ ಪ್ರೊ.ಎಂ.ಆರ್.ನಾಗರಾಜು, ವಿಜಯಪುರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆರ್.ಬಳೂರಗಿ ಮತ್ತು ಕುಲಬುರಗಿಯ ಶಿಕ್ಷಣ ತಜ್ಞ ಪ್ರೊ.ಬಿ.ಕೆ.ಚಳಗೇರಿ ಅವರಿಗೆ ಪರಿಷತ್ತಿನಿಂದ ಇದೇ ಮೊದಲಿಗೆ ರಾಜ್ಯಮಟ್ಟದ ಡಾ.ಎಚ್.ನರಸಿಂಹಯ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್, ಎಂಎಲ್‌ಸಿ ಹೆಚ್.ವಿಶ್ವನಾಥ್,ಪಿ.ಜಿ.ಆರ್.ಸಿಂಧ್ಯಾ ಹಾಗೂ ಪರಿಷತ್ತಿನ ಪದಾಧಿಕಾರಿಗಳಿದ್ದರು.

14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ ಸಮಾರೋಪದಲ್ಲಿ ರಾಜ್ಯದಲ್ಲಿ ಮೌಢ್ಯ ನಿಷೇಧ ಕಾನೂನನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಸೇರಿದಂತೆ 10 ನಿರ್ಣಯಗಳನ್ನು ಪರಿಷತ್ತಿನ ಖಜಾಂಚಿ ಈ.ಬಸವರಾಜು ಮಂಡಿಸಿದರು. ನೆರೆದಿದ್ದವರು ಚಪ್ಪಾಳೆಯ ಮೂಲಕ ಅನುಮೋದಿಸಿದರು.

ಇದೇ ವೇಳೆ ವಿಜ್ಞಾನ ಜನಪ್ರಿಯಗೊಳಿಸಲು ಶ್ರಮಿಸಿದ ಮೈಸೂರಿನ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್, ಬೆಂಗಳೂರಿನ ವಿಜ್ಞಾನ ಸಂವಹನಕಾರ ಪ್ರೊ.ಎಂ.ಆರ್.ನಾಗರಾಜು, ವಿಜಯಪುರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆರ್.ಬಳೂರಗಿ ಮತ್ತು ಕಲಬುರಗಿಯ ಶಿಕ್ಷಣ ತಜ್ಞ ಪ್ರೊ.ಬಿ.ಕೆ.ಚಳಗೇರಿ ಅವರಿಗೆ ಪರಿಷತ್ತಿನಿಂದ ಇದೇ ಮೊದಲಿಗೆ ರಾಜ್ಯಮಟ್ಟದ ಡಾ. ಎಚ್.ನರಸಿಂಹಯ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೆಆರ್‌ವಿಪಿ ಅಧ್ಯಕ್ಷ ಗಿರೀಶ್ ಕಡ್ಲೆವಾಡ ಅಧ್ಯಕ್ಷತೆ ವಹಿಸಿದ್ದರು. ಕೆಎಸ್‌ಒಯು ಕುಲಸಚಿವ ಡಾ.ಎ.ಖಾದರ್ ಪಾಷ, ಉಪಾಧ್ಯಕ್ಷರಾದ ಎಚ್.ಜಿ.ಹುದ್ದಾರ್, ದೊಡ್ಡಬಸಪ್ಪ, ಖಜಾಂಚಿ ಈ.ನಾಗರಾಜ್, ಜಂಟಿ ಕಾರ್ಯದರ್ಶಿ ಬಿ.ಎನ್.ಶ್ರೀನಾಥ್, ಗೌರವ ಕಾರ್ಯದರ್ಶಿ ಸಿ.ಕೃಷ್ಣೇಗೌಡ, ಸಮ್ಮೇಳನದ ರಾಜ್ಯ ಸಂಯೋಜಕ ಎ.ಎನ್.ಮಹೇಶ್, ಜಿಲ್ಲಾ ಸಮಿತಿಯ ಅಧ್ಯಕ್ಷ ಡಾ.ಶೇಖರ್ ನಾಯಕ್, ಕಾರ್ಯದರ್ಶಿ ಜಿ.ಬಿ.ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

ಮೃಗಾಲಯ ಪ್ರಾಣಿಗಳ ದತ್ತು ಸ್ವೀಕಾರ

ಮೈಸೂರು, ಸೆ.10– ಶ್ರೀ ಚಾಮರಾಜೇಂದ್ರ ಮೃಗಾಲಯದ ವತಿಯಿಂದ ನಾಗೇಂದ್ರ ಸುಬ್ಬಣ್ಣ ಅವರು ಭಾರತೀಯ ಚಿರತೆ, ಮಚ್ಚೆಯುಳ್ಳ ಜಿಂಕೆ, ನಕ್ಷತ್ರದ ಆಮೆ ಮತ್ತು ಎಕ್ಲೆಕ್ಟಸ್ ಗಿಳಿ ಪ್ರಾಣಿ–ಪಕ್ಷಿಗಳನ್ನು ಒಂದು ವರ್ಷದ ಅವಧಿಗೆ ದತ್ತು ಪಡೆದಿದ್ದಾರೆ ಎಂದು ಮೃಗಾಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

ಶಕ್ತಿಧಾಮದ ಮಕ್ಕಳೊಂದಿಗೆ ಸಂಭ್ರಮಿಸಿದ ತಮಿಳು ನಟ ವಿಶಾಲ್



ಮೈಸೂರು,ಸೆ.10(ಎಂಟಿವೈ)– ಮೈಸೂರಿನ ಶಕ್ತಿಧಾಮಕ್ಕೆ ತಮಿಳು ನಟ ವಿಶಾಲ್ ಶನಿವಾರ ಭೇಟಿ ನೀಡಿ, ಅಲ್ಲಿನ ಮಕ್ಕಳ ಕುಶಲೋಪರಿ ನಡೆಸಿದರು.

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಕಾಲಿಕ ನಿಧನದ ಸಂದರ್ಭದಲ್ಲಿ ಅವರು ನಿರ್ವಹಣೆ ಮಾಡುತ್ತಿದ್ದ ಮೈಸೂರಿನ ಶಕ್ತಿಧಾಮಕ್ಕೆ ತಾವು ನೆರವು ನೀಡುವುದಾಗಿ ಈ ಹಿಂದೆ ಘೋಷಿಸಿದ್ದರು. ಇಂದು ವಿಶಾಲ್ ಇಲ್ಲಿನ ಮಕ್ಕಳೊಂದಿಗೆ ನೃತ್ಯ ಮಾಡಿದರಲ್ಲದೆ, ಮಕ್ಕಳು ನಟ ಪುನೀತ್‌ರಾಜ್‌ಕುಮಾರ್ ಅವರ ಗೀತೆ ಹಾಡಿದಾಗ ಅದಕ್ಕೆ ಮನ ಸೋತರು. ಸುಮಾರು 45 ನಿಮಿಷಗಳ ಕಾಲ ಮಕ್ಕಳೊಂದಿಗೆ ಕಳೆದರಲ್ಲದೆ, ಶಕ್ತಿಧಾಮದ ಬಗ್ಗೆ ಪುನೀತ್‌ರಾಜ್‌ಕುಮಾರ್ ಅವರ ಕಳಕಳಿಯನ್ನು ಶ್ಲಾಘಿಸಿದರು.

ಶಕ್ತಿಧಾಮದ ಸ್ವಯಂ ಸೇವಕನಾಗಬೇಕೆಂಬ ಹಂಬಲವಿದೆ: ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ನಟ ವಿಶಾಲ್, ನಾನು ಯಾವಾಗಲೂ ಶಕ್ತಿಧಾಮದ ಸ್ವಯಂ ಸೇವಕನಾಗಿ ಕೆಲಸ ಮಾಡಲು ಬಯಸುತ್ತೇನೆ. ನನ್ನ ಸೇವೆಗೆ ಡಾ.ರಾಜ್‌ಕುಮಾರ್ ಕುಟುಂಬದವರು ಅನುಮತಿ ನೀಡಲಿ ಎಂದು ಮನವಿ ಮಾಡಿದರು. ಶಕ್ತಿಧಾಮಕ್ಕೆ ಭೇಟಿ ನೀಡಿದಾಗ ನನಗೆ ದೇವಾಲಯಕ್ಕೆ ಬಂದಂತಹ ಅನುಭವವಾಯಿತು. ದೇವಸ್ಥಾನಕ್ಕೆ ಹೋದರೆ ಒಂದು ದೇವರ ದರ್ಶನ ಪಡೆಯಬಹುದು. ಇಲ್ಲಿ ಒಂದೊಂದು ಮಕ್ಕಳಲ್ಲೂ ಒಂದೊಂದು ದೇವರನ್ನು ಕಂಡ ಅನುಭವವಾಯಿತು ಎಂದರು.

ಮಕ್ಕಳು ತುಂಬಾ ಲವಲವಿಕೆಯಿಂದ ಇದ್ದಾರೆ. ಪುನೀತ್‌ರಾಜ್‌ಕುಮಾರ್, ಗೀತಮ್ಮ ಅವರದ್ದು ಶ್ಲಾಘನೀಯ ಕೆಲಸವಾಗಿದೆ. ಈ ಬಗ್ಗೆ ಶಿವರಾಜ್‌ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ರಾಜ್‌ಕುಮಾರ್ ಕುಟುಂಬದ ಜತೆ ನಿರಂತರವಾಗಿ ಸಂಪರ್ಕದಲ್ಲಿದ್ದೇನೆ ಎಂದರು. ಮಕ್ಕಳ ಜತೆ ಮಾತನಾಡಿದೆ. ಅವರು ಡ್ಯಾನ್ಸ್ ಮಾಡಿದರು. ನಾನಾ ಆಟವಾಡಿದರು. ಇಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯ ಇದೆ ಎಂದು ಹೇಳಿದರು.

ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಚಾಲನೆ



ಮೈಸೂರು, ಸೆ.10(ಎಂಕೆ)– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಪ್ರೌಢಶಾಲೆ ಮೈದಾನದಲ್ಲಿ ಮಹಾರಾಜ ಬಾಲ್ ಬ್ಯಾಡ್ಮಿಂಟನ್ ಕ್ಲಬ್, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ಮೈಸೂರು ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ 'ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್ ಚಾಂಪಿಯನ್ ಶಿಪ್–2022'ಗೆ ಶನಿವಾರ ಚಾಲನೆ ನೀಡಲಾಯಿತು.


ಬಾಲ್ ಬ್ಯಾಡ್ಮಿಂಟನ್ ಆಟವಾಡುವ ಮೂಲಕ ಹಿರಿಯ ಕ್ರೀಡಾಪಟು ಎಂ.ಸುಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಗೋವಿಂದರಾಜು ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್‌ಗೆ ಚಾಲನೆ ನೀಡಿದರು. ಬಳಿಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಗೋವಿಂದರಾಜು ಮಾತನಾಡಿ, ಮೈಸೂರಿನಲ್ಲಿ ಮೊದಲ ಬಾರಿಗೆ ಬಾಲ್ ಬ್ಯಾಡ್ಮಿಂಟನ್ ಲೀಗ್ ಆಯೋಜಿಸಿರುವುದು ಶ್ಲಾಘನೀಯ. ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಬಾಲ್ ಬ್ಯಾಡ್ಮಿಂಟನ್ ತಂಡವನ್ನು ರಾಷ್ಟ್ರಮಟ್ಟದಲ್ಲಿ ಆಡಲು ಸಿದ್ಧಗೊಳಿಸುತ್ತಿದ್ದೇವೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಕೋಲಾರ ಜಿಲ್ಲಾಧ್ಯಕ್ಷ ಸುರೇಶ್ ಬಾಬು, ಮಹಾರಾಜ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಅಧ್ಯಕ್ಷ ಬಿ.ಟಿ.ಲಕ್ಷ್ಮೀಶ, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಏಷ್ಯಾ ಕಾರ್ಯದರ್ಶಿ ವೈ.ರಾಜರಾಮ್, ದಿನೇಶ್, ಸುರೇಶ್, ರಮೇಶ್, ಜಿ.ಗೌತಮ್ ಮತ್ತಿತರರು ಉಪಸ್ಥಿತರಿದ್ದರು.

10 ತಂಡ: ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ವಿವಿಧೆಡೆಯಿಂದ 10 ತಂಡಗಳು ಭಾಗವಹಿಸಿದ್ದು, ಮೊದಲ ಪಂದ್ಯದಲ್ಲಿ ಟ್ವಿನ್ ಬೀ ಸ್ಪೋರ್ಟ್ಸ್ ತಂಡ ತುಮಕೂರು ಟೈಟನ್ಸ್ ವಿರುದ್ಧ 35–31, 35–32 ರ ನೇರ ಸೆಟ್‌ಗಳ ಮೂಲಕ ಜಯ ಗಳಿಸಿತು.

ಬ್ರಿಟನ್ ರಾಜನಾಗಿ ಕಿಂಗ್ ಚಾರ್ಲ್ಸ್ ಅಧಿಕಾರ ಸ್ವೀಕಾರ

ಲಂಡನ್, ಸೆ.10– ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ದೂರದರ್ಶನದಲ್ಲಿ ಪ್ರಸಾರವಾದ ಬ್ರಿಟನ್ ಅರಮನೆಯ ಪ್ರವೇಶ ಮಂಡಳಿಯ ಐತಿಹಾಸಿಕ ಸಮಾರಂಭದಲ್ಲಿ ಕಿಂಗ್ ಚಾರ್ಲ್ಸ್III ಶನಿವಾರ ಹೊಸ ರಾಜ ಎಂದು ಘೋಷಿಸಲಾಯಿತು. 'ದೇವರೇ ರಾಜನನ್ನು ರಕ್ಷಿಸು' ಎಂದು ಸಭೆಯ ಮುಖ್ಯಸ್ಥರು ಮಾಡಿದ ಘೋಷಣೆ ಯನ್ನು ಸಭೆಯಲ್ಲಿ ಸೇರಿದ್ದ ಮಂಡಳಿಯ ಸದಸ್ಯರು ಪುನರುಚ್ಚರಿಸಿದರು.



ಗುರುವಾರ ಮತ್ತು ಶನಿವಾರ ಲಂಡನ್‌ನ ಸೇಂಟ್ ಜೇಮ್ಸ್ ಅರಮನೆಯಲ್ಲಿ ನಡೆದ ಔಪಚಾರಿಕ ಸಮಾರಂಭದಲ್ಲಿ ನೂತನ ರಾಜನಾಗಿ 73 ವರ್ಷ ವಯಸ್ಸಿನ ಚಾರ್ಲ್ಸ್ ಅವರ ಹೆಸರು ಘೋಷಣೆ ಮತ್ತು ಪ್ರಮಾಣ ವಚನ ಸ್ವೀಕಾರ ನಡೆಯಿತು.

ಚಾರ್ಲ್ಸ್ ಜೊತೆ ಅವರ ಪತ್ನಿ, ರಾಣಿ ಕಾನ್ಸರ್ಟ್ ಕ್ಯಾಮಿಲ್ಲಾ ಮತ್ತು ಮಗ ಪ್ರಿನ್ಸ್ ವಿಲಿಯಂ ಸಹ ಇದ್ದರು. ರಾಣಿಯ ನಿಧನದ ಶೋಕಾರ್ಥ ಅರಮನೆಯ ಮೇಲೆ ಧ್ವಜವನ್ನು ಅರ್ಧಕ್ಕೆ ಇಳಿಸಲಾಗಿತ್ತು. ಪ್ರವೇಶ ಮಂಡಳಿಯು ಹೊಸ ರಾಜನನ್ನು ಘೋಷಿಸಿದ ನಂತರ ಪೂರ್ಣ ಧ್ವಜಾರೋಹಣ ಮಾಡಲಾಗಿದೆ.

11ನೇ ವರ್ಷದ ಸವಿನೆನಪು



11 ವರ್ಷ ಕಳೆದರೂ ನಿನ್ನ ನೆನಪಿನಲ್ಲಿರುವ

ದುಃಖತಪ್ತರು: ತಾಯಿ, ಪತ್ನಿ, ಮಗ ಹಾಗೂ ಕುಟುಂಬ ವರ್ಗದವರು

ಗಿರೀಶ್.ಎಚ್.
ನಿಧನ: 11–09–2011

PUBLIC NOTICE
IN THE COURT OF THE HON'BLE XIII ADDL CIVIL JUDGE & J.M.F.C., AT MYSORE.

O.S.No.1418 OF 2021

Plaintiff: Sri. K.Janardhana Shetty, Son of late C.Krishna Murthy, Aged about 54 years, Residing at No; 722, 13th Cross, Anikethana Road, Kuvempunagar, Mysore - 570023

VS

Defendant: Sri. Guruprasad, Aged about 41 years, Father's name not known, Residing at Door No: 725/N,2nd West Road, C & D Block, Anikethana Road, Kuvempunagar, Mysore 570 023.
Also available at :Shop No: 631, E & F Block,Chitrabanu Road, Kuvempunagar, Mysore 570 023.

Take notice, that the Plaintiff has preferred the above original suit against the Defendant seeking for the relief of recovery of possession of the shop premises and for recovery of arrears of rent. This notice is caused to intimate the Defendant that the above suit is posted for appearance of the Defendant on 17-10-2022 at 11.00 A.M.In The event of failure of the Defendant to appear on the Said date the matter will be heard in your absence.

By the order of the Court
Sd/- Chief Ministerial officer ,
Civil Judge & JMFC, Mysore.

Sd/- J.M Aiyanna,
Adv for Plaintiff.
Date:

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ
#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017
ಮೊ: 8951471815 ದೂರವಾಣಿ: 0821-2415869

ನಮ್ಮ ಸಂಘದ 19ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 11–09–2022ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಮುಲಕನಾಡು ಭವನ, ಹುಣಸೂರು ಮುಖ್ಯರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಪಕ್ಕ ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಿಂಗರಾಜುರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕರ ಮಂಡಳಿ ತೀರ್ಮಾನಿಸಿದೆ. ಎಲ್ಲಾ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೆ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆಯೆಂದು ತಿಳಿದು ದಯವಿಟ್ಟು ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಆಡಳಿತ ಮಂಡಳಿ ಅಪ್ಪಣೆ ಮೇರೆಗೆ, ಸಹಿ/- ಶ್ರೀಮತಿ ನಂದಿನಿ ಎಂ. ಕಾರ್ಯದರ್ಶಿ

ಸ್ಥಾಪನೆ: 1919 ದೂರವಾಣಿ: 2520894 / 4259665

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,
ಎನ್.ಮಾಧವರಾವ್ ವೃತ್ತ, ಮೈಸೂರು–04

ಬ್ಯಾಂಕಿನ 97ನೇ ವಾರ್ಷಿಕ ಮಹಾಸಭೆಯನ್ನು ದಿ.11.09.2022ನೇ ಭಾನುವಾರ ಬೆ.11.00 ಘಂಟೆಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರತಿಧ್ವನಿ ಪ್ರಸಾದ್ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತದೆ. ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.

ಶ್ರೀ ಶ್ರೀ ಪ್ರತಿಧ್ವನಿಪ್ರಸಾದ್ ಅಧ್ಯಕ್ಷರು — **ಶ್ರೀ ಡಿ.ಬಸವರಾಜು** ಉಪಾಧ್ಯಕ್ಷರು — **ಶ್ರೀ ಡಿ.ಅನಂತವೀರಪ್ಪ** ಪ್ರ.ವ್ಯವಸ್ಥಾಪಕರು

ನಿರ್ದೇಶಕರುಗಳಾದ: ಶ್ರೀ ನಂಸಿದ್ದಪ್ಪ, ಶ್ರೀ ತಾಯೂರು ವಿಠಲಮೂರ್ತಿ, ಶ್ರೀ ಎಂ.ಡಿ. ಪಾರ್ಥಸಾರಥಿ, ಶ್ರೀ ಹೆಚ್.ವಿ.ಭಾಸ್ಕರ್, ಶ್ರೀ ಅರುಣ್ ಸಿದ್ದಪ್ಪ, ಶ್ರೀ ಕೆ.ಜಿ.ಶಂಕರನಾರಾಯಣಶಾಸ್ತ್ರಿ, ಶ್ರೀಮತಿ ಎಂ.ಪಾರ್ವತಮ್ಮ, ಶ್ರೀಮತಿ ಹೆಚ್.ಎನ್.ಸರ್ವ ಮಂಗಳ, ಶ್ರೀ ಎಂ.ಎನ್.ನವೀನ್ ಕುಮಾರ್, ಶ್ರೀ ಹೆಚ್.ವಾಸು, ಶ್ರೀ ಬಿ.ನಾಗರಾಜ್, ವೃತ್ತಿಪರ ನಿರ್ದೇಶಕರು, ಶ್ರೀ ಟಿ.ವಿ. ನಾರಾಯಣ ಪ್ರಸಾದ್.

ವಿಶೇಷ ಸೂಚನೆ: ಸಭೆಗೆ ಆಗಮಿಸುವ ಸದಸ್ಯರುಗಳು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು.

ನಾಗವಾಲ ಗ್ರಾಮ ಪಂಚಾಯತ್ ಕಾರ್ಯಾಲಯ

ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ – 571130

ಕೆರೆ ಮೀನು ಪಾಶುವಾರು ಹಕ್ಕಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಾಗವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈ ಕೆಳಕಂಡ ಕೆರೆಗಳ ಮೀನು ಪಾಶುವಾರು ಹಕ್ಕನ್ನು ದಿನಾಂಕ: 12/09/2022 ರಿಂದ 30/06/2027 ರ ಅಂತ್ಯಕ್ಕೆ ನಿಗಧಿಮಾಡಿ ನಾಗವಾಲ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯು ದಿನಾಂಕ: 05/09/2022 ರಂದು ತೀರ್ಮಾನ ಕೈಗೊಂಡಿರುತ್ತದೆ. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಕೆರೆ ಮೀನು ಪಾಶುವಾರು ಹಕ್ಕನ್ನು ಪಡೆದು ಮತ್ಸ್ಯಪಾಲನೆ ಮೂಲಕ ಲಾಭವನ್ನು ಪಡೆಯಬಹುದಾಗಿದೆ.

ವಿಲೇವಾರಿ ಮಾಡಬೇಕಾದ ಕೆರೆಗಳ ವಿವರ

ಕ್ರ.ಸಂ	ಗ್ರಾಮ	ಕೆರೆಯ ಹೆಸರು	ಸರ್ವೆ ನಂ.	ವಿಸ್ತೀರ್ಣ		ಸರ್ಕಾರಿ ಸವಾಲು	ಠೇವಣಿ ಮೊತ್ತ
				ಎಕರೆ	ಗುಂಟೆ		
01	ನಾಗವಾಲ	ಸರ್ಕಾರಿ ಕೆರೆ (ದೊಡ್ಡಕೆರೆ)	6	26	07	130350	10000
02	ನಾಗವಾಲ	ಸರ್ಕಾರಿ ಕೆರೆ (ಐಯನಕೆರೆ)	201	09	30	48518	10000
03	ಸೀಗಹಳ್ಳಿ	ಸರ್ಕಾರಿ ಕೆರೆ	171	06	03	30229	10000
04	ಬೊಮ್ಮೇನಹಳ್ಳಿ	ಸರ್ಕಾರಿ ಕೆರೆ	51	18	14	90700	10000
05	ಹುಯಿಲಾಳು	ಸರ್ಕಾರಿ ದೊಡ್ಡೇಗೌಡನ ಕಟ್ಟೆ	190	36	11	180550	10000
06	ಹುಯಿಲಾಳು	ಸೂರಪ್ಪನ ಕೆರೆ	87	13	33	66650	10000

ಹರಾಜು ದಿನಾಂಕ: 12–09–2022, ಸೋಮವಾರ ಬೆಳಿಗ್ಗೆ 11.00 ಘಂಟೆಗೆ, ಸ್ಥಳ: ನಾಗವಾಲ ಗ್ರಾಮ ಪಂಚಾಯಿತಿ ಕಾರ್ಯಾಲಯ

ಸಹಿ/– **ಶ್ರೀ ಸಿ ನರೇಂದ್ರ**
ಅಧ್ಯಕ್ಷರು, ನಾಗವಾಲ ಗ್ರಾ.ಪಂ

ಸಹಿ/– **ಶ್ರೀಮತಿ ಡಾ.ಶೋಭರಾಣಿ**
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಾಗವಾಲ ಗ್ರಾ.ಪಂ

ಗ್ರಾಮ ಪಂಚಾಯಿತಿಯ ಸರ್ವ ಸದಸ್ಯರುಗಳು ಹಾಗೂ ಸಿಬ್ಬಂದಿವರ್ಗ
ಹರಾಜಿನ ಷರತ್ತುಗಳ ಬಗ್ಗೆ ಗ್ರಾಮ ಪಂಚಾಯತಿಯನ್ನು ಸಂಪರ್ಕಿಸುವುದು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 11 ಭಾನುವಾರ 2022

ಸಂಪುಟ: 43 | ಸಂಚಿಕೆ: 146 | ಪುಟಗಳು: 12+IV

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಈ ಬಾರಿ ದಾಖಲೆ ಪುಟ ಸೇರಲಿದೆ ನಮ್ಮ ನಾಡಹಬ್ಬ ದಸರಾ

ರಾಷ್ಟ್ರಪತಿ ದ್ರೌಪದಿ ಮುರ್ಮುರಿಂದ ದಸರಾ ಉದ್ಘಾಟನೆ

- ಮೈಸೂರಲ್ಲಿ ಹೆಚ್ಚು ಸಮಯ ಕಳೆಯಲಿರುವ ರಾಷ್ಟ್ರಪತಿ; ಅರಮನೆಗೂ ಭೇಟಿ
- ಮೈಸೂರಿಗೆ ವಿಶೇಷ ಮೆರುಗು ನೀಡಲು ಮುಖ್ಯಮಂತ್ರಿಗಳ ತೀರ್ಮಾನ
- ದಸರಾ ಅದ್ದೂರಿ ಆಚರಣೆಗೆ ಅಧಿಕ ಹಣ ಬಿಡುಗಡೆ ಸಂಬಂಧವೂ ನಿರ್ಧಾರ
- ಇನ್ನೆಲ್ಲಾ ಸಿದ್ಧತೆಗಳು ಮುಖ್ಯಮಂತ್ರಿಗಳ ಉಸ್ತುವಾರಿಯಲ್ಲೇ ನಡೆಯಲಿವೆ





ಬೆಂಗಳೂರು, ಸೆ.10(ಕೆಎಂಶಿ)– ಇದೇ ಮೊದಲ ಬಾರಿ ಭಾರತದ ರಾಷ್ಟ್ರಪತಿಗಳು ನಾಡಹಬ್ಬ ದಸರಾ ಉದ್ಘಾಟಿಸುವ ಮೂಲಕ ಮೈಸೂರು ದಸರಾ ದಾಖಲೆ ಪುಟ ಸೇರಲಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಡ ಹಬ್ಬ 'ಮೈಸೂರು ದಸರಾ' ಉದ್ಘಾಟನೆ ಮಾಡಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ತಿಳಿಸಿದರು.

ಸೆ.26ರಿಂದ ಅ.5ರ ವರೆಗೆ ವೈಭವಯುತವಾಗಿ ದಸರಾ ಆಚರಣೆಗೆ ಸಿದ್ಧತೆ ನಡೆದಿದೆ. ಸೆ.26ರಂದು ಬೆಳಗ್ಗೆ ಚಾಮುಂಡಿಬೆಟ್ಟದಲ್ಲಿ ದಸರಾಗೆ ಅಧಿಕೃತ ಚಾಲನೆ ದೊರೆಯಲಿದೆ. ದಸರಾ ಉದ್ಘಾಟನೆಗೆ ಸಂಬಂಧಿಸಿದಂತೆ ಸಭೆ ನಡೆಸಿ, ರಾಷ್ಟ್ರಪತಿ ಅವರಿಗೆ ಪತ್ರ ಬರೆಯಲಾಗಿತ್ತು. ನಮ್ಮ ಪತ್ರಕ್ಕೆ ಸಮ್ಮತಿಸಿ ಇಂದು ರಾಷ್ಟ್ರಪತಿ ಭವನದಿಂದ ಪತ್ರ ಬಂದಿದೆ. ಹೀಗಾಗಿ ಈ ಬಾರಿ ರಾಷ್ಟ್ರದ ಪ್ರಥಮ ಪ್ರಜೆ ದಸರಾ ಉದ್ಘಾಟನೆ ಮಾಡಲಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಜನ ಸಾಮಾನ್ಯರು ಹಾಗೂ ಪ್ರವಾಸಿಗರಿಗೆ ಮೈಸೂರಿನ ಇತಿಹಾಸ, ಪಾರಂಪರಿಕ ಕಟ್ಟಡಗಳ ಹಿನ್ನೆಲೆ, ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪ ಶೈಲಿಯ, ಮಹತ್ವದ ಬಗ್ಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸೆ.26ರಂದು ಬೆಳಗ್ಗೆ 10ಕ್ಕೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರ ಇಲಾಖೆ, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸ್ಮಾರಕಗಳ ಸಂರಕ್ಷಣಾ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ. ಸೆ.29ರಂದು ಬೆಳಗ್ಗೆ 7ಕ್ಕೆ ಮೈಸೂರು ಪುರಭವನದ ಆವರಣದಲ್ಲಿ ಪಾರಂಪರಿಕ ಸೈಕಲ್ ಸವಾರಿ (ಟ್ರಿಣ್ ಟ್ರಿಣ್), ಸೆ.30ರಂದು ಬೆಳಗ್ಗೆ 7ಕ್ಕೆ ಮೈಸೂರು ಪುರಭವನದ ▶ 8ನೇ ಪುಟಕ್ಕೆ



ಬ್ಯಾರಿಕೇಡ್ ಮೂಲಕ ಹಾರ್ಡಿಂಜ್ ಸರ್ಕಲ್‌ನಲ್ಲಿ ಅಪಘಾತಗಳಿಗೆ ಬ್ರೇಕ್ ಹಾಕಲೆತ್ನ

ಸುಗಮ ಸಂಚಾರಕ್ಕೆ ಅಡ್ಡಿ: ವಾಹನ ಚಾಲಕರ ಆಕ್ಷೇಪ

ಮೈಸೂರು, ಸೆ. 10(ಆರ್‌ಕೆ)– ಮೈಸೂರಿನ ಪ್ರಮುಖ ಹಾರ್ಡಿಂಜ್ ಸರ್ಕಲ್‌ನಲ್ಲಿ ಸಂಚಾರ ಪೊಲೀಸರು ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಇರಿಸಿ, ಅಪಘಾತ ತಡೆಗೆ ಕ್ರಮ ಕೈಗೊಂಡಿದ್ದಾರೆ. ಆದರೆ ಸುಗಮ ಸಂಚಾರಕ್ಕೆ ಇದರಿಂದ ಅಡ್ಡಿ ಆಗಿದೆ ಎಂದು ವಾಹನ ಚಾಲಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಆರು ಗೇಟ್ ಎಂದೇ ಕರೆಯಲ್ಪಡುವ ಈ ಜಯಚಾಮರಾಜ ಒಡೆಯರ್ ಸರ್ಕಲ್‌ನಲ್ಲಿ ಕಳೆದ 15 ದಿನಗಳಿಂದ ಬ್ಯಾರಿಕೇಡ್ ಇರಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಕೆಆರ್ ಸರ್ಕಲ್, ಗನ್‌ಹೌಸ್, ಇಟ್ಟಿಗೆಗೂಡು, ಸಿದ್ಧಾರ್ಥ ಹೋಟೆಲ್ ಕಡೆಯಿಂದ ವೇಗವಾಗಿ ಬರುವ ವಾಹನಗಳಿಂದ ದಿನಕ್ಕೆ ನಾಲ್ಕರಿಂದ ಐದು ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದ್ದವು. ಹಲವು ವಾಹನಗಳು ಜಖಂಗೊಳ್ಳುತ್ತಿದ್ದವು. ಕೆಲವು ರಜಾ, ವಾರಾಂತ್ಯ ದಿನಗಳಲ್ಲಿ ಸಂಜೆ ವೇಳೆ ವಾಹನ ದಟ್ಟಣೆ ಜಾಸ್ತಿಯಾಗಿದ್ದಾಗ ಆಗಿಂದಾಗ್ಗೆ ಟ್ರಾಫಿಕ್ ಜಾಮ್ ಆಗುತ್ತಿತ್ತು. ಹಾರ್ಡಿಂಜ್ ಸರ್ಕಲ್‌ನ ಈ ಸಮಸ್ಯೆ ತಪ್ಪಿಸುವ ಬಗ್ಗೆ ತಲೆಕೆಡಿಸಿಕೊಂಡಿದ್ದ ಸಂಚಾರ ಪೊಲೀಸರು, ಕೆಲ ದಿನ ಸಿಗ್ನಲ್ ಲೈಟ್ ಆನ್ ಮಾಡಿ ನೋಡಿದರು. ಆ ವೇಳೆ ಅರಮನೆ ಉತ್ತರ ದ್ವಾರದ ಚಾಮರಾಜೇಂದ್ರ ಒಡೆಯರ್ ಸರ್ಕಲ್‌ವರೆಗೆ, ಅತ್ತ ಗನ್‌ಹೌಸ್ ಸರ್ಕಲ್‌ವರೆಗೆ ಹಾಗೂ ನಜರ್‌ಬಾದ್‌ನ ಕೆನರಾ ಬ್ಯಾಂಕ್ ಸರ್ಕಲ್‌ವರೆಗೆ ಟ್ರಾಫಿಕ್ ಜಾಮ್ ಆಗುತ್ತಿತ್ತು. ಅಲ್ಲದೇ ಅಪಘಾತಗಳೂ ತಪ್ಪಲಿಲ್ಲ.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ತಾವೇ ಸ್ವತಃ ಸರ್ಕಲ್‌ನಲ್ಲಿ ಅರ್ಧ ಗಂಟೆ ನಿಂತು ಅಲ್ಲಿನ ವಾಹನ ಸಂಚಾರ ವೀಕ್ಷಿಸಿದರು. ಇಲ್ಲಿ ಅಪಘಾತಕ್ಕೆ ಅನಿಯಂತ್ರಿತ ವಾಹನ ಸಂಚಾರವೇ ಕಾರಣ ಎಂಬುದು ಮನವರಿಕೆ ಆಯಿತು. ವೇಗ ನಿಯಂತ್ರಿಸಲು ಜಯಚಾಮರಾಜ ▶ 8ನೇ ಪುಟಕ್ಕೆ







ಬೀದಿನಾಯಿ ದಾಳಿ ಮಾಡಿದರೆ ಆಹಾರ ನೀಡುವವರೇ ಹೊಣೆ



ನವದೆಹಲಿ: ಬೀದಿನಾಯಿಗಳು ಜನರ ಮೇಲೆ ದಾಳಿ ಮಾಡಿದರೆ, ಅವುಗಳಿಗೆ ಆಹಾರ ನೀಡುವವರೇ ಹೊಣೆ ಎಂದು ಸುಪ್ರೀಂಕೋರ್ಟ್ ಹೇಳಿದೆ.


ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಜೆಕೆ ಮಹೇಶ್ವರಿ ಅವರಿದ್ದ ದ್ವಿ ಸದಸ್ಯ ಪೀಠವೂ ಜನರ ಸುರಕ್ಷತೆ ಮತ್ತು ಪ್ರಾಣಿಗಳ ಹಕ್ಕುಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕು. ಜೊತೆಗೆ ಕೆಲವು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಹೇಳಿದ್ದು, ಬೀದಿನಾಯಿ ಸಮಸ್ಯೆಯನ್ನು ಪರಿಹರಿಸಲು ತರ್ಕಬದ್ಧ ಪರಿಹಾರವನ್ನು ಕಂಡು ಹಿಡಿಯಬೇಕು ಎಂದು ಹೇಳಿದೆ. ಒಂದು ವೇಳೆ ಬೀದಿನಾಯಿಗಳು ಜನರ ಮೇಲೆ ದಾಳಿ ಮಾಡಿದರೆ, ಅವುಗಳಿಗೆ ಆಹಾರ ಹಾಕುವವರನ್ನು ಹೊಣೆಗಾರರನ್ನಾಗಿ ಮಾಡಬಹುದು ಎಂದು ಮಹತ್ವದ ಆದೇಶ ನೀಡಿದೆ. ಈ ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 28ಕ್ಕೆ ಮುಂದೂಡಿದೆ.



ಬೀದಿನಾಯಿಗಳ ಹಾವಳಿಗೆ ಪರಿಹಾರ ಕಂಡುಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದ ಸುಪ್ರೀಂ ಕೋರ್ಟ್, ಬೀದಿನಾಯಿಗಳಿಗೆ ವಾಡಿಕೆಯಂತೆ ಆಹಾರ ನೀಡುವ ಜನರನ್ನು ಬೀದಿನಾಯಿಗಳಿಗೆ ಲಸಿಕೆ ಹಾಕಿಸಲು ಜವಾಬ್ದಾರರನ್ನಾಗಿ ಮಾಡಬಹುದು. ಜೊತೆಗೆ ನಾಯಿಗಳು ಜನರ ಮೇಲೆ ದಾಳಿ ಮಾಡಿದರೆ, ಅದರಿಂದ ಉಂಟಾಗುವ ವೈದ್ಯಕೀಯ ವೆಚ್ಚವನ್ನು ಕೂಡ ಈ ಆಹಾರ ಹಾಕುವವರು ಭರಿಸಬೇಕಾಗುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮೈಸೂರಲ್ಲಿ ಆಟೋ ಚಾಲಕರಿಂದ ರೈತರ ಮೇಲೆ ಹಲ್ಲೆ, ಸುಲಿಗೆ

ಒಬ್ಬ ರೈತನಿಂದ 1800 ರೂ. ನಗದು, ಮೊಬೈಲ್; ಮತ್ತೊಬ್ಬರಿಂದ 84 ಸಾವಿರ ನಗದು, ಎಟಿಎಂ, ಪಾನ್, ಆಧಾರ್ ಕಾರ್ಡ್, ಮೊಬೈಲ್ ಕಳವು



ಮೈಸೂರು, ಸೆ.10–ಮೈಸೂರು ನಗರದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಆಟೋ ಚಾಲಕರು ರೈತರ ಮೇಲೆ ಹಲ್ಲೆ ನಡೆಸಿ, ಹಣ ಹಾಗೂ ಮೊಬೈಲ್ ದೋಚಿರುವ ಬಗ್ಗೆ ವರದಿಯಾಗಿದೆ.

ಹೆಚ್.ಡಿ.ಕೋಟೆ ತಾಲೂಕು ಗೋಳೂರು ಗ್ರಾಮದ ರೈತ ಜಿ.ಎನ್.ಮಂಜು(31) ಅವರ ಅಕ್ಕನ ಮಗ ಅನಾರೋಗ್ಯದಿಂದ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಾಗಿದ್ದು, ಆಸ್ಪತ್ರೆಗೆ ಭೇಟಿ ನೀಡಿದ ನಂತರ ಮಂಜು ಅವರು ಊರಿಗೆ ತೆರಳಲು ಸೆ.8ರಂದು ಮುಂಜಾನೆ 2.30ರ ವೇಳೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ ವುಡ್‌ಲ್ಯಾಂಡ್ ಟಾಕೀಸ್ ಬಳಿ ಅವರ ಮುಂದೆ ಆಟೋವೊಂದು ಬಂದು ನಿಂತಿದೆ. ಮಂಜು ಅವರನ್ನು ಎಲ್ಲಿಗೆ ಹೋಗಬೇಕು, ಅಲ್ಲಿಗೆ ಬಿಡುತ್ತೇನೆ, ಬನ್ನಿ ಎಂದು ಚಾಲಕ ಕೇಳಿದಾಗ ಅವರು ಆಟೋ ಬೇಡ, ಹತ್ತಿರದಲ್ಲೇ ಬಸ್ ಸ್ಟ್ಯಾಂಡ್ ಇದೆ, ಹೋಗುತ್ತೇನೆ ಎಂದು ಹೇಳಿದ್ದಾರೆ. ಈ ವೇಳೆ ಆಟೋದಿಂದ ಇಳಿದ ಚಾಲಕ ರೈತನ ಮೇಲೆ ಹಲ್ಲೆ ನಡೆಸಿ, ಅವರ ಬಳಿ ಇದ್ದ 1,800 ರೂ. ನಗದು, ಮೊಬೈಲ್ ಕಸಿದಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಕೇರಳದ ವೈನಾಡು ಜಿಲ್ಲೆ ಸುಲ್ತಾನ್ ಬತ್ತೇರಿ ತಾಲೂಕು ಕೊಳಗಮುರ ಗ್ರಾಮದ ರೈತ ಅರುಣ್(29) ಕಾರ್ಯ ನಿಮಿತ್ತ ಸೆ.7ರಂದು ಮೈಸೂರಿಗೆ ಬಂದಿದ್ದು, ಅಂದು ಇರ್ವಿನ್ ರಸ್ತೆಯಲ್ಲಿರುವ ಸಂಕ್ರಾಂತಿ ಬಾರ್‌ನಲ್ಲಿ ಮದ್ಯಪಾನ ಮಾಡಿದ ನಂತರ ರಾತ್ರಿ 10 ಗಂಟೆ ಸುಮಾರಿನಲ್ಲಿ ▶ 8ನೇ ಪುಟಕ್ಕೆ

ಅ.13ರಿಂದ 11 ದಿನ ಹಾಸನಾಂಬೆ ದರ್ಶನ



ಹಾಸನ, ಸೆ.10–ವರ್ಷಕ್ಕೆ ನಿರ್ದಿಷ್ಟ ದಿನಗಳಲ್ಲಿ ಮಾತ್ರ ಸಾರ್ವಜನಿಕ ದರ್ಶನಕ್ಕೆ ಲಭ್ಯವಾಗುವ ಹಾಸನಾಂಬ ದೇವಾಲಯ ಈ ವರ್ಷ ಅ.13 ರಿಂದ 11 ದಿನಗಳ ಕಾಲ ತೆರೆಯಲಿದೆ.


ಚುನಾಯಿತ ಪ್ರತಿನಿಧಿಗಳು, ಮುಜರಾಯಿ ಅಧಿಕಾರಿಗಳು, ಅರ್ಚಕರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಅ.13ರಿಂದ ದೇವಾಲಯದ ಬಾಗಿಲು ತೆರೆಯಲಿದ್ದು, ದೇಗುವ ತೆರೆಯುವ ದಿನ ಹಾಗೂ ಮುಚ್ಚುವ ದಿನದಂದು ಭಕ್ತಾದಿಗಳಿಗೆ ದರ್ಶನ ಇರುವುದಿಲ್ಲ. ವರದಿಗಾರರೊಂದಿಗೆ ಮಾತನಾಡಿರುವ ಹಾಸನ ಶಾಸಕ ಪ್ರೀತಂ ಜೆ ಗೌಡ, ಭಕ್ತರ ಪ್ರವೇಶ ವ್ಯವಸ್ಥೆಯನ್ನು ಸುಗಮಗೊಳಿಸುವುದಕ್ಕೆ ಹಾಗೂ ಜನದಟ್ಟಣೆಯನ್ನು ನಿರ್ವಹಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ಸಂಬಂಧ ▶ 8ನೇ ಪುಟಕ್ಕೆ

ದೊಡ್ಡಬಳ್ಳಾಪುರ 'ಜನಸ್ಪಂದನ ಸಮಾವೇಶ'ದಲ್ಲಿ ಬಿಜೆಪಿ ಚುನಾವಣಾ ರಣಕಹಳೆ

ಮತ್ತೆ ಕಮಲ ಅರಳಿಸುತ್ತೇವೆ; ತಾಕತ್ತಿದ್ರೆ, ಧಮ್ಮಿದ್ರೆ ತಡೆಯಿರಿ


- ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಬೊಮ್ಮಾಯಿ ಸವಾಲು
- 'ಅಕ್ಕಿ ನಮ್ದು... ಚೀಲ ನಿಮ್ದು...!

ಜನಸ್ಪಂದನ ಅಲ್ಲ 'ಜನ ಮರ್ದನ'



ಬೆಂಗಳೂರು, ಸೆ.10– ರಾಜ್ಯದ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ವರ್ಷ ತುಂಬಿದ್ದಕ್ಕಾಗಿ ಜನಸ್ಪಂದನ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದಕ್ಕೆ 'ಜನಸ್ಪಂದನ' ಅಲ್ಲ 'ಜನ ಮರ್ದನ' ಎಂದು ಹೆಸರಿಡಬೇಕಾಗಿತ್ತು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಈ ಕುರಿತಾಗಿ ಪತ್ರಿಕಾ ಹೇಳಿಕೆಯನ್ನು ನೀಡಿರುವ ಅವರು, ಕಳೆದ ಮೂರು ವರ್ಷಗಳ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ ಮತ್ತು ಸುಳ್ಳು ಹೇಳಿಕೆಗಳಿಂದಾಗಿ ಜನ ನಲುಗಿಹೋಗಿದ್ದಾರೆ. ಸ್ಪಂದನ ಮಾಡಲು ಜನರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲಿದೆ, ವಿರೋಧ ಪಕ್ಷಗಳು ಇವರನ್ನು ಪ್ರಶ್ನೆ ಮಾಡಿದರೆ ಸಿಬಿಐ, ಇಡಿ, ಐಟಿ ದಾಳಿ ನಡೆಸಿ ಬೆದರಿಸುತ್ತಾರೆ. ನಾಗರಿಕರು ಪ್ರಶ್ನೆ ಮಾಡಿದರೆ ಸುಳ್ಳು ಕೇಸ್‌ಗಳನ್ನು ಹಾಕಿ ಜೈಲಿಗೆ ಹಾಕುತ್ತಾರೆ. ಜನ ಸ್ಪಂದಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ. ಜನತೆಗೆ ಮುಕ್ತವಾಗಿ ಮಾತನಾಡಲು ಅವಕಾಶ ಕೊಟ್ಟರೆ ಜನಾಕ್ರೋಶದಲ್ಲಿ ಇವರ ಜನಸ್ಪಂದನ ಕೊಚ್ಚಿಹೋಗಬಹುದು ಎಂದಿದ್ದಾರೆ.





ಬೆಂಗಳೂರು, ಸೆ.10– ದೊಡ್ಡಬಳ್ಳಾಪುರದಲ್ಲಿ ಪ್ರಾರಂಭ ಮಾಡಿರುವ ಜನಸ್ಪಂದನೆಯನ್ನು ಇಡೀ ಕರ್ನಾಟಕ ತುಂಬಾ ತೆಗೆದುಕೊಂಡು ಹೋಗಿ ಮತ್ತೊಮ್ಮೆ ಕಮಲವನ್ನು ಅರಳಿಸುವ ಪ್ರಯತ್ನ ಮಾಡುತ್ತೇವೆ. ತಾಕತ್ತಿದ್ದರೆ, ಧಮ್ಮಿದ್ದರೆ ನಿಲ್ಲಿಸುವ, ತಡೆಯುವ ಪ್ರಯತ್ನ ಮಾಡಿ ಎಂದು ಕಾಂಗ್ರೆಸ್ ನಾಯಕರಿಗೆ ಆಕ್ರೋಶಭರಿತರಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದ್ದಾರೆ.

ಬಿಜೆಪಿ ಸರ್ಕಾರದ 3 ವರ್ಷದ ಸಾಧನೆ ಹಾಗೂ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಒಂದು ವರ್ಷ ನಡೆಸಿದ ಆಡಳಿತದ ಬಗ್ಗೆ ರಾಜ್ಯದ ಜನತೆ ಮುಂದಿಡುವ ಸಮಾವೇಶವಾದ ಜನಸ್ಪಂದನೆಯಲ್ಲಿ ಇಂದು ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ನೇರಾನೇರವಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ವಿರುದ್ಧ ಹರಿಹಾಯ್ದರು. ಕಾಮನ್‌ಮ್ಯಾನ್ ಸಿಎಂ, ಸರಳ, ಮೃದು ಭಾಷಿ ಎಂದು ಕರೆಸಿಕೊಳ್ಳುವ ಬೊಮ್ಮಾಯಿಯವರು ಇಂದು ಜನೋತ್ಸವ ಸಮಾವೇಶದಲ್ಲಿ ಮಾತ್ರ ರೋಷಾವೇಷದ ಆವೇಶಭರಿತರಾಗಿ ರಾಜಕೀಯ ಭಾಷಣದಂತೆ ಮಾತನಾಡಿದರು. ಅವರ ಇಂದಿನ ಭಾಷಣ 2023ರ ಚುನಾವಣೆಗೆ ಮುನ್ನುಡಿ ಬರೆದಂತಿತ್ತು. ನಮ್ಮ ಸರ್ಕಾರವನ್ನು ಪರ್ಸೆಂಟೇಜ್ ಸರ್ಕಾರ ಎಂದು ಕರೆಯುತ್ತಿರುವ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನವರದ್ದು 100 ಪರ್ಸೆಂಟ್ ಕಮಿಷನ್ ಸರ್ಕಾರವಾಗಿತ್ತು. ಸಿದ್ದರಾಮಯ್ಯ ಆಡಳಿತದಲ್ಲಿ ಎಷ್ಟು ಹಗರಣಗಳು ಕೇಳಿಬಂದಿದ್ದವು, ಎಷ್ಟು ಅಧಿಕಾರಿಗಳು ಜೀವ ಕಳೆದುಕೊಂಡಿದ್ದರು, ಸಿದ್ದರಾಮಯ್ಯ ಅವಧಿಯಲ್ಲಿಯೇ ಹೆಚ್ಚು ಕೊಲೆಗಳು ಆದವು, ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುತ್ತೀರಿ ಎಂದು ಸಾಬೀತಾಗಿದೆ ಎಂದರು. ▶ 8ನೇ ಪುಟಕ್ಕೆ

> “ರಾಜ್ಯಾದ್ಯಂತ ಸಮಾವೇಶ ನಡೆಸಿ ಪಕ್ಷವನ್ನು ಸಂಘಟಿಸಿ ಡಬಲ್ ಎಂಜಿನ್ ಸರ್ಕಾರದ ಸಾಧನೆ ಜನರ ಮುಂದಿಟ್ಟು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತೇವೆ. ಕಳೆದ 3 ವರ್ಷಗಳ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಒಪ್ಪಿಕೊಂಡಿದ್ದಾರೆ ಎಂಬುದಕ್ಕೆ ಜನಸ್ಪಂದನ ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ದೊರೆತಿದೆ. –ಬಸವರಾಜ ಬೊಮ್ಮಾಯಿ, ಸಿಎಂ.

> “ಪಕ್ಷವನ್ನು ರಾಜ್ಯಾದ್ಯಂತ ಸಂಘಟಿಸಿ ಅಧಿಕಾರಕ್ಕೆ ತರುವ ಶಪಥ ಮಾಡಿದರು. 150ಕ್ಕೂ ಹೆಚ್ಚು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ನಾವು ಅಧಿಕಾರಕ್ಕೆ ಬರುತ್ತೇವೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ಮತ್ತು ಪ್ರಧಾನಿ ಮೋದಿಯವರ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ವಿಧಾನಸಭೆ ಅಧಿವೇಶನದಲ್ಲಿ ಅವರಿಗೆ ತಕ್ಕ ಉತ್ತರ ಕೊಡುತ್ತೇವೆ. –ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ.

> “ಸಿದ್ದರಾಮಯ್ಯ ಕಾಲದಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ ಹಗರಣ ಆಗಿದೆ. 24 ಹಿಂದೂ ಕಾರ್ಯಕರ್ತರ ಹತ್ಯೆ ಆಗಿದ್ದು, ಗೋಹತ್ಯೆ ನಿರಂತರವಾಗಿತ್ತು. ಆದರೆ, ಗೋಹತ್ಯಾ ನಿಷೇಧ, ಮತಾಂತರ ನಿಷೇಧವನ್ನು ಬಿಜೆಪಿ ಸರ್ಕಾರ ಜಾರಿಗೊಳಿಸಿದೆ 17 ಜನ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆ ಎದುರಿಸಿದರು. ಅವರೆಲ್ಲರೂ ವೀರರು. –ನಳೀನ್‌ಕುಮಾರ್ ಕಟೀಲ್, ರಾಜ್ಯಾಧ್ಯಕ್ಷ

> “ಕರ್ನಾಟಕದಲ್ಲಿ ಕಮಲ ಮತ್ತೊಮ್ಮೆ ಅರಳಲಿದೆ. ಬಿಜೆಪಿ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್ ಪಕ್ಷ ಯುವರಾಜ ಕುಮಾರನ ನೇತೃತ್ವದಲ್ಲಿ ನೆಲಕ್ಕೆ ಅಪ್ಪಳಿಸಲಿದೆ. ಕೇಂದ್ರ ಸರ್ಕಾರ ರಾಜ್ಯದಲ್ಲಿ ಯಾವುದೇ ಭೇದಭಾವ ಮಾಡಿಲ್ಲ. ಡಬಲ್ ಇಂಜಿನ್ ಸರ್ಕಾರವಾಗಿ ಬಿಜೆಪಿ ಕೆಲಸವನ್ನು ಮಾಡುತ್ತಿದೆ. –ಸ್ಮೃತಿ ಇರಾನಿ, ಕೇಂದ್ರ ಸಚಿವೆ.

ಏಳನೇ ಪುಟದಿಂದ

ದಸರಾ ಉದ್ಘಾಟನೆ

ಅವರಣದಲ್ಲಿ ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗೆ ಪಾರಂಪರಿಕ ಟಾಂಗಾ ಸವಾರಿ ಹಮ್ಮಿಕೊಳ್ಳಲಾಗಿದೆ. ಉನ್ನತ ಮೂಲಗಳ ಪ್ರಕಾರ, ದಸರಾ ಉದ್ಘಾಟನೆಗಾಗಿ ರಾಷ್ಟ್ರಪತಿಗಳು ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಬಹುತೇಕ ಸಮಯವನ್ನು ಮೈಸೂರಲ್ಲೇ ಕಳೆಯಲಿದ್ದಾರೆ. ಭೇಟಿಯ ಸಂದರ್ಭದಲ್ಲಿ ಮೈಸೂರು ಅರಮನೆಗೂ ಭೇಟಿ ನೀಡಿ, ರಾಜವಂಶಸ್ಥರ ಜೊತೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ. ರಾಷ್ಟ್ರಪತಿಯವರು ದಸರಾ ಉದ್ಘಾಟನೆಗೆ ಬರುತ್ತಿರುವುದರಿಂದ ಮೈಸೂರು ನಗರದ ಸ್ವಚ್ಛತೆ ಮತ್ತು ಅಂದಕ್ಕೆ ಹೆಚ್ಚು ಒತ್ತು ಕೊಡಲು ಸರ್ಕಾರ ನಿರ್ಧರಿಸಿದೆ. ದಸರಾದ ಪೂರ್ಣ ವೆಚ್ಚವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದಲೇ ಭರಿಸಲು ತೀರ್ಮಾನಿಸಲಾಗಿತ್ತು. ಆದರೆ ದಸರಾ ಮಹೋತ್ಸವಕ್ಕೆ ಮತ್ತಷ್ಟು ಮೆರುಗು ನೀಡಲು ಈಗ ಸರ್ಕಾರ ಹೆಚ್ಚು ಹಣ ಬಿಡುಗಡೆ ಮಾಡಲಿದೆ. ಈ ಬಗ್ಗೆ ಮುಖ್ಯಮಂತ್ರಿಯವರು ಒಂದೆರಡು ದಿನದಲ್ಲೇ ಜಿಲ್ಲಾಡಳಿತ ಮತ್ತು ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ, ತೀರ್ಮಾನಿಸಲಿದ್ದಾರೆ.

ದಸರಾ ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷರಾಗಿರುವ ಮುಖ್ಯಮಂತ್ರಿಯವರು, ಈ ಬಾರಿ ತಾವೇ ಇದರ ಉಸ್ತುವಾರಿಯನ್ನು ಪೂರ್ಣವಾಗಿ ನೋಡಿಕೊಳ್ಳುವುದಲ್ಲದೆ, ರಾಷ್ಟ್ರಪತಿಯವರು ಬಂದು ಹೋಗುವವರೆಗೂ ಎಲ್ಲಾ ಹಂತದಲ್ಲೂ ಯಾವುದೇ ಲೋಪಗಳು ಆಗದಂತೆ ನಿರಂತರ ಸಭೆಗಳನ್ನು ನಡೆಸಲು ತೀರ್ಮಾನಿಸಿದ್ದಾರೆ.

ಮುರ್ಮು ಅವರು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ನಂತರ ರಾಜ್ಯಕ್ಕೆ ಇದೇ ಮೊದಲು ಭೇಟಿಯಾಗಲಿದೆ. ಈ ಭೇಟಿಯನ್ನು ಅತ್ಯಂತ ಯಶಸ್ವಿಗೊಳಿಸಲು ಮತ್ತು ನಾಡಹಬ್ಬಕ್ಕೆ ಮೆರುಗು ನೀಡಲು ಸರ್ಕಾರ ಮುಂದಾಗಿದೆ.

ಅಪಘಾತಗಳಿಗೆ ಬ್ರೇಕ್ ಹಾಕಲೆತ್ನ

ಒಡೆಯರ್ ಪ್ರತಿಮೆ ಸುತ್ತ ತಾತ್ಕಾಲಿಕ ಬ್ಯಾರಿಕೇಡ್ ಅಳವಡಿಸಿ, ಪರಿಶೀಲಿಸುವಂತೆ ಡಾ. ಚಂದ್ರಗುಪ್ತ, ಸಂಚಾರ ಪೊಲೀಸರಿಗೆ ಸೂಚಿಸಿದ್ದರು. ಅದರಂತೆ ಕಳೆದ 15 ದಿನಗಳ ಹಿಂದೆ ಸರ್ಕಲ್‌ನ ಪ್ರತಿಮೆ ಸುತ್ತ ಬ್ಯಾರಿಕೇಡ್ ಅಳವಡಿಸಿ, ವಾಹನಗಳ ಸಂಚಾರ ಪರಿಶೀಲಿಸಲಾಗುತ್ತಿದೆ. ಎಲ್ಲಾ ಸಂಪರ್ಕ ರಸ್ತೆಗಳಿಂದ ಬರುವ ವಾಹನಗಳು, ಬ್ಯಾರಿಕೇಡ್ ಹಾಕಿರುವುದರಿಂದ ಹಾರ್ಡಿಂಜ್ ಸರ್ಕಲ್‌ನಲ್ಲಿ ನಿಧಾನವಾಗಿ ಬಳಸಿಕೊಂಡು ಮುಂದೆ ಸಾಗುತ್ತಿರುವುದರಿಂದ ಅಪಘಾತಗಳು ನಿಯಂತ್ರಣಕ್ಕೆ ಬರುತ್ತಿವೆ. ವಾಹನಗಳು ವೇಗವಾಗಿ ಸರ್ಕಲ್‌ನಲ್ಲಿ ಚಲಿಸುತ್ತಿದ್ದರಿಂದ ಅಪಘಾತಗಳು ಸಂಭವಿಸುತ್ತಿದ್ದವು ಎಂದು ಪೊಲೀಸ್ ಆಯುಕ್ತರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಿಗ್ನಲ್ ಲೈಟ್ ಆನ್ ಮಾಡಿದರೆ ಮೂರು ರಸ್ತೆಗಳಲ್ಲಿ ವಾಹನ ಸಾಲುಗಟ್ಟಿ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಅಪಘಾತ, ವಾಹನಗಳು ಆಗಿಂದಾಗ್ಗೆ ಡಿಕ್ಕಿಯಾಗಿ ಜಖಂಗೊಳ್ಳುತ್ತಿದ್ದವು. ಅದನ್ನು ತಪ್ಪಿಸಲೆಂದು ಜಯಚಾಮರಾಜ ಒಡೆಯರ್ ಪ್ರತಿಮೆ ಸುತ್ತ ಬ್ಯಾರಿಕೇಡ್ ಅಳವಡಿಸಿದ್ದೇವೆ. ಈಗ ಎಲ್ಲಾ ವಾಹನಗಳು ಹಾರ್ಡಿಂಜ್ ಸರ್ಕಲ್‌ನಲ್ಲಿ ನಿಧಾನವಾಗಿ ಸಾಗುತ್ತಿದ್ದು ಅಪಘಾತ, ಕಿರಿಕಿರಿ ನಿಯಂತ್ರಣಕ್ಕೆ ಬಂದಿದೆ ಎಂದು ಅವರು ತಿಳಿಸಿದರು.

ಬಸ್ ನಿಲುಗಡೆ ಬದಲು: ಗನ್‌ಹೌಸ್ ಸರ್ಕಲ್ ಹಾಗೂ ನಂಜನಗೂಡು ಕಡೆಯಿಂದ ಬರುವ ಕೆಎಸ್‌ಆರ್‌ಟಿಸಿ ನಗರ ಮತ್ತು ಗ್ರಾಮಾಂತರ ಸಾರಿಗೆ ಬಸ್ಸುಗಳು ಹಾರ್ಡಿಂಜ್ ಸರ್ಕಲ್‌ನಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸುತ್ತಿದ್ದುದರಿಂದ ಅಲ್ಲಿ ಆಗಿಂದಾಗ್ಗೆ ಟ್ರಾಫಿಕ್ ಜಾಮ್ ಆಗುತ್ತಿತ್ತು. ಅಲ್ಲಿ ನಿಲುಗಡೆ ಇಲ್ಲದಿದ್ದರೂ, ಪ್ರಯಾಣಿಕರ ಕೋರಿಕೆ ಮೇರೆಗೆ ಸರ್ಕಲ್‌ನಲ್ಲಿ ಸ್ಟಾಪ್ ಕೊಡುತ್ತಿರುವುದು ಸಮಸ್ಯೆಗೆ ಕಾರಣವಾಗುವುದರಿಂದ ಇನ್ನು ಬಸ್ಸುಗಳನ್ನು ನಿಲ್ಲಿಸದಂತೆ ಕ್ರಮ ವಹಿಸಲು ಕೋರಿ ಸಾರಿಗೆ ಸಂಸ್ಥೆ ವಿಭಾಗೀಯ ವ್ಯವಸ್ಥಾಪಕರಿಗೆ ಪತ್ರ ಬರೆಯಲಾಗಿದೆ ಎಂದು ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ಖಾಯಂ ವ್ಯವಸ್ಥೆ: ಒಂದು ವೇಳೆ ಬ್ಯಾರಿಕೇಡ್ ಹಾಕಿರುವುದರಿಂದ ಅಪಘಾತಗಳು ಕಡಿಮೆಯಾಗಿವೆ ಎಂಬುದು ಖಾತರಿಯಾದರೆ, ದಸರಾ ವೇಳೆ 9 ದಿನ ಹೊರತುಪಡಿಸಿ ಉಳಿದಂತೆ ವರ್ಷವಿಡೀ ಈ ವ್ಯವಸ್ಥೆಯನ್ನೇ ಹಾರ್ಡಿಂಜ್ ಸರ್ಕಲ್‌ನಲ್ಲಿ ಖಾಯಂ ಜಾರಿಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಅವೈಜ್ಞಾನಿಕ ಬ್ಯಾರಿಕೇಡಿಂಗ್: ಹಾರ್ಡಿಂಜ್ ಸರ್ಕಲ್‌ನಲ್ಲಿ ಪೊಲೀಸರು ಅಳವಡಿಸಿರುವ ಬ್ಯಾರಿಕೇಡ್ ಅವೈಜ್ಞಾನಿಕವಾಗಿದ್ದು, ಅದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ಕೆಲ ವಾಹನ ಸವಾರರು ದೂರಿದ್ದಾರೆ. ಈ ಮೊದಲು ಇದ್ದ ವ್ಯವಸ್ಥೆಯಲ್ಲಿ ವಾಹನಗಳು ತಡೆ ಇಲ್ಲದೇ ಚಲಿಸುತ್ತಿದ್ದವು ಎಂದು ಪ್ರದೀಪ್ ಶರ್ಮ ಅಭಿಪ್ರಾಯಪಟ್ಟಿದ್ದಾರೆ.

ಉತ್ತಮ ವ್ಯವಸ್ಥೆ: ವಾಹನಗಳು ಅತೀ ವೇಗವಾಗಿ ಚಲಿಸುತ್ತಿದ್ದರಿಂದ ಹಾರ್ಡಿಂಜ್ ಸರ್ಕಲ್‌ನಲ್ಲಿ ಅಪಘಾತಗಳು ಸಂಭವಿಸಿ, ನಿತ್ಯ ಕಿರಿಕಿರಿಯಾಗುತ್ತಿತ್ತು. ಇದೀಗ ಬ್ಯಾರಿಕೇಡ್ ಹಾಕಿರುವುದರಿಂದ ವಾಹನ ಸವಾರರು ನಿಧಾನವಾಗಿ ಚಲಿಸುತ್ತಿರುವ ಕಾರಣ ಸಂಚಾರ ಸುಗಮವಾಗಿದೆ. ಈ ವ್ಯವಸ್ಥೆಯನ್ನೇ ಮುಂದುವರೆಸುವುದು ಸೂಕ್ತ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡರು ಅಭಿಪ್ರಾಯಪಟ್ಟಿದ್ದಾರೆ.

ತಾಕತ್ತಿದ್ರೆ, ಧಮ್ಮಿದ್ರೆ ತಡೆಯಿರಿ

2019ರಲ್ಲೇ ಬಿ.ಎಸ್.ಯಡಿಯೂರಪ್ಪ ಸಿಎಂ ಆಗಬೇಕಿತ್ತು. ಆದರೆ ಕಾಂಗ್ರೆಸ್‌ನ ಹುನ್ನಾರದಿಂದ ಅದು ಕೈತಪ್ಪಿತ್ತು. ಕಾಂಗ್ರೆಸ್‌ನಿಂದ ಬಂದ ಎಲ್ಲ ಶಾಸಕರೂ ವೀರರು. ನಾವು ಸಮರ್ಥವಾಗಿ ಕೋವಿಡ್ ಎದುರಿಸಿದ್ದೇವೆ. ಜನರಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡಿದ್ದೇವೆ. ಕಾಂಗ್ರೆಸ್‌ನವರು ಕೇವಲ ಅಧಿಕಾರಕ್ಕಾಗಿ ರಾಜಕಾರಣ ಮಾಡುತ್ತಾರೆ. ಅನ್ನಭಾಗ್ಯ ಕೊಟ್ಟಿದ್ದೇವೆ ಎಂದು ಸಿದ್ದರಾಮಯ್ಯ ಹೇಳ್ತಾರೆ. ಚೀಲದಲ್ಲಿದ್ದ ಅಕ್ಕಿ ಮೋದಿಯ, ಚೀಲ ಮಾತ್ರ ನಿಮ್ಮದು. ಅನ್ನಭಾಗ್ಯದ ಅವ್ಯವಹಾರ ಆಯ್ತು. ಅನ್ನಭಾಗ್ಯ ಯೋಜನೆಯಲ್ಲಿ ದೊಡ್ಡ ದಂಧೆ ಮಾಡಿದ್ರಿ. ಲ್ಯಾಪ್‌ಟಾಪ್ ಕೊಡುವುದರಲ್ಲಿ ಹಗರಣ ಮಾಡಿದ್ರಿ. ನಿಮ್ಮ ಬಗ್ಗೆ ಹೇಳುತ್ತಾ ಹೋದರೆ ಒಂದೆರಡಲ್ಲ ಎಂದು ಆರೋಪ ಪಟ್ಟಿಯನ್ನೇ ಬಿಚ್ಚಿಟ್ಟರು.

ಅನ್ನಭಾಗ್ಯಕ್ಕೂ ಕನ್ನ ಹಾಕಿದ್ದು ಸಿದ್ದರಾಮಯ್ಯ: 'ಅನ್ನಭಾಗ್ಯದ ಅವ್ಯವಹಾರ ತನಿಖೆ ನಡೆಸುತ್ತಿದ್ದ ಅನುರಾಗ್ ತಿವಾರಿ ಅವರು ಉತ್ತರ ಪ್ರದೇಶದಲ್ಲಿ ಅನುಮಾನಾಸ್ಪದವಾಗಿ ಸಾವಿಗೀಡಾದರು. ಈ ರೀತಿಯ ಆಡಳಿತ ಪಾರದರ್ಶಕವೇ? ಬಡವರ ಅನ್ನಭಾಗ್ಯಕ್ಕೂ ಕನ್ನ ಹಾಕಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ದೊಡ್ಡಬಳ್ಳಾಪುರದಲ್ಲಿ ನಡೆಯುತ್ತಿರುವ 'ಜನಸ್ಪಂದನ' ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಮೂರು ವರ್ಷಗಳ ಸಾಧನೆಗಳನ್ನು ಜನರ ಮುಂದಿಟ್ಟಿದ್ದಾರೆ.

ಜನಸ್ಪಂದನಾ ಕಾರ್ಯಕ್ರಮಕ್ಕೆ ಅಭೂತಪೂರ್ವ ಜನಸ್ಪಂದನೆ ದೊರಕಿದೆ. ಇದು ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರು ಒಪ್ಪಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು. ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಕೋವಿಡ್ ಸಂದರ್ಭದಲ್ಲಿ ಅಲ್ಲಿನ ಪರಿಸ್ಥಿತಿ ಬಹಳ ಕೆಟ್ಟದಾಗಿತ್ತು. ಆದರೆ, ಕರ್ನಾಟಕದಲ್ಲಿ ಕೋವಿಡ್ ಪರಿಸ್ಥಿತಿಯನ್ನು ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಮರ್ಥವಾಗಿ ನಿಭಾಯಿಸಿದ್ದರು ಎಂದು ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರದ ಆಸೆಗಾಗಿ, ಬಹುಮತವಿಲ್ಲದಿದ್ದರೂ ಜೆಡಿಎಸ್ ಜೊತೆ ಕೈ ಜೋಡಿಸಿದ ಸಿದ್ದರಾಮಯ್ಯನವರಿಗೆ ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ ಎಂದು ಬೊಮ್ಮಾಯಿ ಪ್ರಶ್ನಿಸಿದರು. ಸಮಾಜದ ಎಲ್ಲಾ ವರ್ಗಗಳಿಗೂ ಅವಕಾಶ ನೀಡುವ ಮೂಲಕ ಎಲ್ಲರೂ ಅಭಿವೃದ್ಧಿಯಾಗಬೇಕೆಂಬುದೇ ನಮ್ಮ ಸರ್ಕಾರದ ಆಶಯವಾಗಿದೆ ಎಂದರು. ನಾವು (ಬಿಜೆಪಿ) ಜಾತಿ, ಧರ್ಮಗಳನ್ನು ನೋಡದೇ ಎಲ್ಲರ ಮಕ್ಕಳಿಗೂ 'ರೈತ ವಿದ್ಯಾ ನಿಧಿ' ಯೋಜನೆಯನ್ನು ವಿಸ್ತರಿಸಿದ್ದೇವೆ. 21ನೇ ಶತಮಾನ ಜ್ಞಾನದ ಶತಮಾನ. ನಮ್ಮ ಕರ್ನಾಟಕದ ಮಕ್ಕಳು ಇತರರಿಗೂ ಪ್ರೋತ್ಸಾಹ ನೀಡುವಂತಹ ವಾತಾವರಣ ಕಲ್ಪಿಸುತ್ತೇವೆ ಎಂದು ಬೊಮ್ಮಾಯಿ ತಿಳಿಸಿದರು.

ಡಬಲ್ ಇಂಜಿನ್ ಸರ್ಕಾರದಿಂದ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗುತ್ತಿದ್ದು, 2023ರ ಚುನಾವಣೆ ವೇಳೆಗೆ ನಾವು ನಮ್ಮ ರಿಪೋರ್ಟ್ ಕಾರ್ಡ್ ಅನ್ನು ನಿಮ್ಮ ಬಳಿ ನೀಡಿ, ಪುನಃ ನಿಮ್ಮ ಆಶೀರ್ವಾದವನ್ನು ಪಡೆಯುತ್ತೇವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಇದೇ ವೇಳೆ 2023ರ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಅಣಿಗೊಳಿಸುವ ಆಶಯದಿಂದ ಹೊಸ ಯೋಜನೆಗಳನ್ನು ಘೋಷಿಸಿದರು. ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿನಗರಗಳನ್ನು ಸ್ಯಾಟಲೈಟ್ ಟೌನ್‌ಗಳಾಗಿ ಅಭಿವೃದ್ಧಿಪಡಿಸಲಾಗುವುದು. ಹಾಲು ಉತ್ಪಾದಕರಿಗೆ ಕ್ಷೀರ ಅಭಿವೃದ್ಧಿ ಬ್ಯಾಂಕ್, ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ 75 ಯುನಿಟ್ ಉಚಿತ ವಿದ್ಯುತ್ ಯೋಜನೆ. ರೈತರ ವ್ಯವಸಾಯಕ್ಕೆ ಅನುಕೂಲವಾಗಲು, ಹಾಗೂ ವೆಚ್ಚ ಕಡಿತವಾಗಲು 'ರೈತ ಶಕ್ತಿ' ಯೋಜನೆ ಅನುಷ್ಠಾನ. ರಾಜ್ಯದ ಮಾವು ಬೆಳೆಗಾರರಿಗೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಮಾರಾಟಕ್ಕೆ ವ್ಯವಸ್ಥೆಯನ್ನು ಒದಗಿಸಲು ಅಗತ್ಯ ಕ್ರಮ. ವಿನೇಕಾರರಿಗೆಯನ್ನು ಉತ್ತೇಜಿಸಲು, ಮೀನುಗಾರಿಕಾ ಮಹಿಳೆಯರಿಗೆ ಅಲ್ಪಾವಧಿ ಸಾಲ ವಿತರಿಸಲು ಕ್ರಮ.

ರೈತರ ಮೇಲೆ ಹಲ್ಲೆ, ಸುಲಿಗೆ

ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ಗೆ ಹೋಗುವ ಸಲುವಾಗಿ ಬಿ.ಎನ್.ರಸ್ತೆಯಲ್ಲಿ ಆಟೋವೊಂದನ್ನು ಹತ್ತಿದ್ದಾರೆ. ಚಾಲಕ ಬೇರೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಅರುಣ್ ಪ್ರಶ್ನಿಸಿದ್ದಾರೆ. ಆಗ ಚಾಲಕ ಇದೇ ರಸ್ತೆ ರ್‍ಯಾಡಿಸನ್ ಬ್ಲ್ಯೂಗೆ ಹೋಗುತ್ತದೆ ಎಂದು ಹೇಳಿ, ಸ್ವಲ್ಪ ದೂರ ಹೋಗಿ ಮತ್ತೊಬ್ಬನ ಹತ್ತಿಸಿಕೊಂಡಿದ್ದಾನೆ. ಇಬ್ಬರು, ರೈತನನ್ನು ರಿಂಗ್ ರಸ್ತೆಗೆ ಕರೆದೊಯ್ದಿದ್ದು, ಅಲ್ಲಿ ಹಲ್ಲೆ ನಡೆಸಿ, ಅವರ ಬಳಿ ಇದ್ದ 84 ಸಾವಿರ ರೂ. ನಗದು, ಎಟಿಎಂ, ಪಾನ್ ಹಾಗೂ ಆಧಾರ್ ಕಾರ್ಡ್ ಮತ್ತು ಮೊಬೈಲ್ ದೋಚಿದ್ದಾರೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅ.13ರಿಂದ 11 ದಿನ ಹಾಸನಾಂಬೆ ದರ್ಶನ

ಜಿಲ್ಲಾಡಳಿತ ಪೊಲೀಸ್ ಇಲಾಖೆಯೊಂದಿಗೆ ಸಭೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದ್ದು, ವಿಶೇಷ ಪ್ರವೇಶಕ್ಕೆ ಶುಲ್ಕ ಹಾಗೂ ವಿಶೇಷ ಪಾಸ್‌ಗಳ ವಿಷಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ನೇತೃತ್ವದಲ್ಲಿ ನಡೆಯಲಿರುವ ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗುತ್ತದೆ ಎಂದು ಶಾಸಕರು ಮಾಹಿತಿ ನೀಡಿದ್ದಾರೆ.

ಅ.26 ವರೆಗೆ ದೇವಾಲಯ 24X7 ಸಾರ್ವಜನಿಕರಿಗೆ ಮುಕ್ತವಾಗಿರಲಿದೆ, ಅರ್ಚನೆ ಹಾಗೂ ಪ್ರಸಾದ ವಿತರಣೆ ಸಂದರ್ಭದಲ್ಲಿ ಮಾತ್ರ ಬಾಗಿಲು ಮುಚ್ಚಲಿದೆ.

ಮೈಸೂರಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ



ಮೈಸೂರು, ಸೆ.10(ಆರ್‌ಕೆ)–ಮೈಸೂರಿನ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಶನಿವಾರ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಯನ್ನು ಭಕ್ತಿ ಭಾವಗಳಿಂದ ಆಚರಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬ್ರಹ್ಮಶ್ರೀ ನಾರಾಯಣ ಗುರು ಜಯಂತ್ಯೋತ್ಸವ ಸಮಿತಿ ಆಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಅಸ್ಪೃಶ್ಯತೆ ನಿವಾರಣೆಗಾಗಿ ದೇವಸ್ಥಾನ ನಿರ್ಮಿಸುವ ಮೂಲಕ ಸರ್ವ ಜನಾಂಗಕ್ಕೂ ಸಮಾನ ಅವಕಾಶ ಕಲ್ಪಿಸಿಕೊಟ್ಟು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾರಿದವರು ಬ್ರಹ್ಮಶ್ರೀ ನಾರಾಯಣ ಗುರು ಎಂದರು.

ಕೇರಳದಲ್ಲಿ ಮತಭೇದ ಹೋಗಲಾಡಿಸಿ ಎಲ್ಲರೂ ಒಂದೇ ಎಂಬ ಭಾವನೆ ಮೂಡಿಸಲು ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದ ಅವರು, ತಪಸ್ಸು ಮಾಡಿ ಸಾಧನೆ ಮಾಡಿದ್ದಾರೆ. ಈಡಿಗ ಸಮಾಜದವರು ಒಗ್ಗಟ್ಟಾಗಿ ಹೋರಾಡಿ ಸೌಲಭ್ಯಗಳನ್ನು ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಸಲಹೆ ನೀಡಿದರು.

ಸಂತ ಫಿಲೋಮಿನಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಸಿ.ವಿ.ಶ್ರೀಧರ ಮೂರ್ತಿ ಮಾತನಾಡಿ, ಇಂದು ಯುವತಿಯರು, ಮಹಿಳೆಯರು ಗೌರವದಿಂದ ಬಾಳುವಂತಹ ವಾತಾವರಣ ನಿರ್ಮಾಣವಾಗಿದೆ ಎಂದರೆ ಅದಕ್ಕೆ ಬ್ರಹ್ಮಶ್ರೀ ನಾರಾಯಣ ಗುರು ಅವರ ಪರಿವರ್ತನೆ ಕಾರಣವಾಗಿದ್ದು, ಮಹಾನ್ ಮಾನವತಾವಾದಿ, ಸಾಮಾಜಿಕ ಹೋರಾಟಗಾರ, ಚಿಂತಕ, ಮಾರ್ಗದರ್ಶಕರಾಗಿ ಅವರ ಪರಿಕಲ್ಪನೆಯಲ್ಲಿ ನಾವು ಮುಂದುವರಿಯಬೇಕು ಎಂದರು.

ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ, ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್, ಉಪಾಧ್ಯಕ್ಷ ರಾಜಶೇಖರ ಕದಂಬ, ಕಾರ್ಯದರ್ಶಿ ಕೆ.ಎಸ್. ಕೃಷ್ಣಮೂರ್ತಿ, ಮುಖಂಡರಾದ ಜಯಣ್ಣ, ಎಸ್.ಪಿ.ಸೋಮಶೇಖರ್, ಶಿವಣ್ಣ, ವಿದ್ಯಾಸಾಗರ ಕದಂಬ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನೂತನ ಮೇಯರ್ ಶಿವಕುಮಾರ್ ಸೇರಿದಂತೆ ಪತ್ರಿಕಾ ವಿತರಕರಿಗೆ ಸನ್ಮಾನ

ಈ ಬಾರಿಯ ಜಂಬೂ ಸವಾರಿಯಲ್ಲಿ 'ಪತ್ರಿಕೆ ಉಳಿಸಿ' ಶೀರ್ಷಿಕೆಯ ಸ್ತಬ್ಧಚಿತ್ರಕ್ಕೆ ಅವಕಾಶ ಕೋರಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನೂತನ ಮೇಯರ್ ಶಿವಕುಮಾರ್ ಹಾಗೂ ಪತ್ರಿಕಾ ವಿತರಕರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.10(ಪಿಎಂ)– ಪರಿಶಿಷ್ಟ ಪಂಗಡದ ಸಮುದಾಯದಿಂದ ಪ್ರಥಮ ಬಾರಿಗೆ ಮೈಸೂರು ಮಹಾನಗರ ಪಾಲಿಕೆ ಮೇಯರ್ ಆಗಿ ಆಯ್ಕೆಯಾದ ಶಿವಕುಮಾರ್ ಹಾಗೂ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ 9 ಮಂದಿ ಪತ್ರಿಕಾ ವಿತರಕರನ್ನು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಶನಿವಾರ ಸನ್ಮಾನಿಸಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಪತ್ರಿಕಾ ವಿತರಕರಾದ ಜೆ.ಎಸ್.ಹೋಮದೇವ, ಬಿ.ಸುರೇಶ್, ಗಂಗಾಧರ್, ಜಯಚಂದ್ರ, ಶ್ರೀಕಾಂತ್, ಅಬ್ದುಲ್ ವಾಜೀದ್, ಈಶ್ವರ್ ಪ್ರಸಾದ್, ಮಹದೇವ ಮತ್ತು ದೀಪಕ್ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಇದೊಂದು ಒಳ್ಳೆಯ ಕಾರ್ಯಕ್ರಮ. ಕೋವಿಡ್ ಸಂದರ್ಭದಲ್ಲಿ ಪತ್ರಿಕಾ ವಿತರಕರು ಹಲವು ಅಡೆತಡೆಗಳ ನಡುವೆಯೂ ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸಿದ್ದಾರೆ. ಕೋವಿಡ್ ಹರಡುವ ಭೀತಿ ಇದ್ದರೂ ಅಂಜದೇ ಕೆಲಸ ಮಾಡಿದ್ದಾರೆ. ಸರ್ಕಾರ ಸೇರಿದಂತೆ ಸಂಘ–ಸಂಸ್ಥೆಗಳು ಕೊಡಮಾಡುವ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಪತ್ರಿಕಾ ವಿತರಕರನ್ನು ಪರಿಗಣಿಸುವ ಅಗತ್ಯವಿದೆ ಎಂದು ಹೇಳಿದರು.

ಸನ್ಮಾನಿತರ ಪರವಾಗಿ ಮಾತನಾಡಿದ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ, ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯಲ್ಲಿ ನಮ್ಮ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ, ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಜಂಟಿ ಆಶ್ರಯದಲ್ಲಿ 'ಪತ್ರಿಕೆ ಉಳಿಸಿ, ಪತ್ರಿಕೆ ಬೆಳೆಸಿ, ಪತ್ರಿಕಾ ವಿತರಕರನ್ನು ರಕ್ಷಿಸಿ' ಶೀರ್ಷಿಕೆಯಡಿ ಒಂದು ಸ್ತಬ್ಧಚಿತ್ರ ಸಾಗಲು ಅವಕಾಶ ಕಲ್ಪಿಸಬೇಕೆಂದು ಡಿಸಿಗೆ ಮನವಿ ಸಲ್ಲಿಸಿದ್ದು, ಮುಖ್ಯಮಂತ್ರಿಗಳಿಗೂ ಮನವಿ ಕಳುಹಿಸಲಾಗಿದೆ. ಸದರಿ ಸ್ತಬ್ಧಚಿತ್ರಕ್ಕೆ ತಗಲುವ ವೆಚ್ಚ ಕೂಡ ಸರ್ಕಾರವೇ ಭರಿಸಬೇಕೆಂದು ಮನವಿಯಲ್ಲಿ ಕೋರಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಸಂಚಾಲಕ ಪಿ.ರಾಜು, ಅಶೋಕಪುರಂ ಮುಖಂಡ ಪೈ.ಕೃಷ್ಣ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸವಿತ ಸಮಾಜದ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಗೌರವಾಧ್ಯಕ್ಷ ವಿ.ಮಂಜುನಾಥ್, ಡಿಎಸ್‌ಎಸ್ ಜಿಲ್ಲಾ ಸಂಘಟನಾ ಸಂಚಾಲಕ ಕೆ.ಶಿವಕುಮಾರ್, ಕ್ರೈಸ್ತ ಕ್ಷೇಮಾಭಿವೃದ್ಧಿ ಸಂಘದ ಅಂಥೋಣಿ ಜಾನ್‌ಸನ್ ಮತ್ತಿತರರು ಹಾಜರಿದ್ದರು.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಶಾಸಕ ಎಲ್.ನಾಗೇಂದ್ರ ಅವರನ್ನು ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮಹದೇವು, ಉಪಾಧ್ಯಕ್ಷ ಶ್ರೀನಿವಾಸಕುಮಾರ್, ಎನ್.ಕೃಷ್ಣ, ನಾಗರಾಜು, ಜಯರಾಮು, ರಮೇಶ್ ಇನ್ನಿತರರು ಭಾರೀ ಗಾತ್ರದ ಸೇಬಿನ ಹಾರ ಹಾಕಿ ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಕೆಆರ್‌ಎಸ್ ಸುತ್ತ ಗಣಿಗಾರಿಕೆ ನಿಷೇಧಿಸದಿದ್ದರೆ; ಕಬ್ಬಿಗೆ ಬೆಂಬಲ ಬೆಲೆ ನಿಗದಿಯಾಗದಿದ್ದರೆ ದಸರಾ ದಿನ ರಸ್ತೆ ತಡೆ; ರೈತ ಸಂಘ ಎಚ್ಚರಿಕೆ



ಮೈಸೂರು, ಸೆ.10(ಆರ್‌ಕೆ)–ಕೆಆರ್‌ಎಸ್ ಸುತ್ತ ಶಾಶ್ವತವಾಗಿ ಗಣಿಗಾರಿಕೆ ನಿಷೇಧಿಸಬೇಕು ಹಾಗೂ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡಬೇಕೆಂದು ಒತ್ತಾಯಿಸಿರುವ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ತಪ್ಪಿದಲ್ಲಿ ದಸರಾ ದಿನ ರಸ್ತೆ ತಡೆದು, ಸಂಚಾರ ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರವು ಈ ಎರಡೂ ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ವಿಜಯದಶಮಿಯಂದು ಎತ್ತಿನ ಗಾಡಿ, ಟ್ರ್ಯಾಕ್ಟರ್, ಕೃಷಿ ಪರಿಕರಗಳೊಂದಿಗೆ ಬೀದಿಗಿಳಿದು ಸಂಚಾರ ಬಂದ್ ಮಾಡಲಾಗುವುದು ಎಂದರು.

ಸೆಪ್ಟೆಂಬರ್ 19ರಂದು ಮಂಡ್ಯದ ಸಿಲ್ವರ್ ಜುಬಿಲಿ ಪಾರ್ಕ್‌ನಲ್ಲಿ ಬೃಹತ್ ರೈತ ಸಮಾವೇಶ ಆಯೋಜಿಸಲಾಗಿದ್ದು, ಕನ್ನಂಬಾಡಿ ಕಟ್ಟೆ ಸುತ್ತ 20 ಕಿ.ಮೀ. ವ್ಯಾಪ್ತಿಯಲ್ಲಿ ಶಾಶ್ವತವಾಗಿ ಗಣಿಗಾರಿಕೆಯನ್ನು ನಿಷೇಧಿಸಬೇಕೆಂಬುದರ ಕುರಿತು ಸಮಾಲೋಚನೆ ನಡೆಯಲಿದೆ. ವಿದ್ಯುತ್ ಖಾಸಗೀಕರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸುವ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಅತಿವೃಷ್ಟಿಯಿಂದಾಗಿ ಜನ ಜೀವನ ಅಸ್ತವ್ಯಸ್ತವಾಗಿದೆ. ರೈತರ ಬೆಳೆ, ಮನೆಗಳಿಗೆ ಹಾನಿಯಾಗಿ ಜನರು ಪರಿತಪಿಸುತ್ತಿರುವಾಗ ಅದ್ಧೂರಿ ದಸರಾ ಮೂಲಕ ದುಂದುವೆಚ್ಚ ಸರಿಯಲ್ಲ. ಸರಳವಾಗಿ ದಸರಾ ಆಚರಿಸಿ ಅನುದಾನವನ್ನು ಜಿಲ್ಲೆಯ ಅಭಿವೃದ್ಧಿಗೆ ಬಳಸಲಿ ಎಂದ ನಾಗೇಂದ್ರ, ಪ್ರವಾಹಕ್ಕೆ ಕಾರಣವಾಗಿರುವ ನಾಲೆಗಳ ಒತ್ತುವರಿ ತೆರವುಗೊಳಿಸುವಂತೆಯೂ ಒತ್ತಾಯಿಸಿದ್ದಾರೆ. ದುಬಾರಿ ಟೋಲ್ ಕೊಟ್ಟು ಬಡವರು, ರೈತರು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಓಡಾಡಲು ಸಾಧ್ಯವಿಲ್ಲವಾದ್ದರಿಂದ ಅದರ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ಅಗತ್ಯವಿರುವ ಜಿಲ್ಲಾ, ತಾಲೂಕು ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು. ರೈತರ ಸಾಲ ಮನ್ನಾ ಮಾಡಬೇಕು. ಬೆಳೆ ಹಾನಿಗೆ ಪರಿಹಾರ ಹಾಗೂ ಬೆಳೆಗಳಿಗೆ ಬೆಂಬಲ ಬೆಲೆ ನೀಡಬೇಕೆಂದು ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.



ಮಹಾಜನ ಕಾಲೇಜಿನ ಪ್ರಾಧ್ಯಾಪಕ ದಿವಂಗತ ವಾಸುದೇವ ಮೂರ್ತಿ ಅವರ ಹೆಸರನ್ನು ಒಂಟಿಕೊಪ್ಪಲು, ಪಡುವಾರಹಳ್ಳಿ ಅಥವಾ ಜಯಲಕ್ಷ್ಮೀಪುರಂನ ಯಾವುದಾದರೂ ವೃತ್ತಕ್ಕೆ ನಾಮಕರಣ ಮಾಡಬೇಕೆಂದು ಒತ್ತಾಯಿಸಿ ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯಿಂದ ಪಾಲಿಕೆ ಆಯುಕ್ತೆ (ಆಡಳಿತ) ಸವಿತಾ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ (ಮಿಲ್ಕ್ ಮಂಜು), ಮೋಹನ್, ಧನಶೇಖರ್, ನಾಗರಾಜು, ಮೆಸ್ ಬಾಬು, ಸರ್ದಾರ್ ಮಹೇಶ್, ಮಂಜು ಇದ್ದರು.

ಹೃದಯ, ಚರ್ಮ ಉಚಿತ ತಪಾಸಣೆ ಶಿಬಿರ

ಮೈಸೂರು,ಸೆ.10–ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ವೀರಶೈವ ಸಜ್ಜನ ಸಂಘದಿಂದ ಸೆ.13ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಹೃದಯ, ಚರ್ಮ ಉಚಿತ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾ ಮಾರಾಟ: ಇಬ್ಬರ ಬಂಧನ

ಬೆಳ್ಳೂರು,ಸೆ.10–ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾ ಮಾರುತ್ತಿದ್ದ ಇಬ್ಬರನ್ನು ಬಂಧಿಸುವಲ್ಲಿ ನಾಗಮಂಗಲ ತಾಲೂಕು ಬೆಳ್ಳೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಮೂಲತಃ ತುಮಕೂರು ಜಿಲ್ಲೆ ಮಾವನಹಳ್ಳಿ ಗ್ರಾಮದವನಾಗಿದ್ದು, ಬೆಂಗಳೂರಿನ ಜಾಲಹಳ್ಳಿ ಕ್ರಾಸ್‌ನಲ್ಲಿ ವಾಸವಾಗಿರುವ ಅಭಿಷೇಕ್(21) ಮತ್ತು ಮೂಲತಃ ಚಿತ್ರದುರ್ಗ ಜಿಲ್ಲೆ ಹಿರಿಯೂರು ಪಟ್ಟಣದವನಾಗಿದ್ದು, ಹಾಲಿ ಬೆಂಗಳೂರಿನ ಅಂಚೆಪಾಳ್ಯದಲ್ಲಿ ವಾಸವಿರುವ ಛಾಯಾಪುತ್ರ(20) ಬಂಧಿತ ಗಾಂಜಾ ಮಾರಾಟಗಾರರು.

ಬೆಳ್ಳೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಅವರು ಸೆ.8ರಂದು ಸಂಜೆ ತಮ್ಮ ಸಿಬ್ಬಂದಿಯೊಂದಿಗೆ ಗಸ್ತು ತಿರುಗುತ್ತಿದ್ದಾಗ ಬಿ.ಜಿ.ನಗರದಲ್ಲಿ ಪೊಲೀಸರನ್ನು ಕಂಡ ಈ ಇಬ್ಬರು ಯುವಕರು ಓಡಲಾರಂಭಿಸಿದ್ದಾರೆ. ಅವರನ್ನು ಹಿಡಿದು ತಪಾಸಣೆ ಮಾಡಿದಾಗ ಅವರ ಬಳಿ ತಲಾ 10 ಗ್ರಾಂ ತೂಕದ 13 ಪ್ಯಾಕೆಟ್ ಗಾಂಜಾ ದೊರೆತಿದೆ. ಇವರು 10 ಗ್ರಾಂಗೆ 500 ರೂ.ಗಳಂತೆ ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದುದಾಗಿ ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಬೆಳ್ಳೂರು ಠಾಣೆ ಪೊಲೀಸರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಇಂದು ನಾಡಪ್ರಭು ಕೆಂಪೇಗೌಡರ ಜಯಂತಿ

ಮೈಸೂರು, ಸೆ.10– ಹಿನಕಲ್–ವಿಜಯನಗರ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಹಿನಕಲ್ ಗ್ರಾಪಂ ರಸ್ತೆಯಲ್ಲಿರುವ ನಿಂಗಮಣಿ ನೀಲಕಂಠಪ್ಪ ಕಲ್ಯಾಣ ಮಂಟಪದಲ್ಲಿ ಸೆ.11ರಂದು ಬೆಳಗ್ಗೆ 11.30ಕ್ಕೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕೆಂಪೇಗೌಡರ ಜಯಂತಿ ಕಾರ್ಯಕ್ರಮ ನಡೆಯಲಿದೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸುವರು. ಸಂಘದ ಅಧ್ಯಕ್ಷ ನಾಗರಾಜು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಸಾ.ರಾ.ಮಹೇಶ್, ಎಲ್.ನಾಗೇಂದ್ರ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ವಾಸು, ಸಂದೇಶ್ ನಾಗರಾಜು, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ ಹಾಗೂ ಹಲವು ಜನಪ್ರತಿನಿಧಿಗಳು, ಸ್ಥಳೀಯ ಮುಖಂಡರು ಭಾಗವಹಿಸುವರು.

ಮೈಸೂರು ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ರಾಜ್ಯ ಒಕ್ಕಲಿಗರ ಸಂಘದ ಗಂಗಾಧರಗೌಡ, ನಿರ್ದೇಶಕ ಮಂಜೇಗೌಡ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ನಿರ್ದೇಶಕರಾದ ರವಿ ರಾಜಕೀಯ, ಪ್ರಶಾಂತ್‌ಗೌಡ, ರಾಜ್ಯ ಒಕ್ಕಲಿಗರ ವೇದಿಕೆ ಕಾರ್ಯಾಧ್ಯಕ್ಷ ನಾಗೇಂದ್ರ, ಸತೀಶ್‌ಗೌಡ ಇನ್ನಿತರರು ಉಪಸ್ಥಿತರಿರುವರು.

ಸೆ.12, 13ರಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಪ್ರಶಿಕ್ಷಣ ಶಿಬಿರ



ಮೈಸೂರು,ಸೆ.10(ಪಿಎಂ)–ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾದಿಂದ ಸೆ.12 ಮತ್ತು 13ರಂದು ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ 'ಪ್ರಶಿಕ್ಷಣ ಶಿಬಿರ' ಆಯೋಜಿಸಲಾಗಿದೆ ಎಂದು ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಅನಿಲ್ ಥಾಮಸ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.12ರಂದು ಬೆಳಗ್ಗೆ 9ಕ್ಕೆ ನೋಂದಣಿ ಆರಂಭವಾಗಲಿದ್ದು, ಬಳಿಕ ಬೆಳಗ್ಗೆ 10ಕ್ಕೆ ರಾಜ್ಯಾಧ್ಯಕ್ಷ ನಳೀನ್‌ಕುಮಾರ್‌ಕಟೀಲ್ ಶಿಬಿರ ಉದ್ಘಾಟಿಸಲಿದ್ದಾರೆ. ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಸೈಯದ್ ಸಲಾಂ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.


ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಎಂಎಲ್‌ಸಿ ಎ.ಹೆಚ್.ವಿಶ್ವನಾಥ್, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಬಿಜೆಪಿ ವಿಭಾಗೀಯ ಪ್ರಭಾರಿ ಮೈ.ವಿ.ರವಿಶಂಕರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಸೇರಿದಂತೆ ಇನ್ನಿತರ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ನಂತರ ವಿವಿಧ ವಿಷಯಾಧಾರಿತ ಗೋಷ್ಠಿಗಳು ನಡೆಯಲಿವೆ ಎಂದರು.

'ಭಾಜಪದ ಯಾತ್ರೆ' ಕುರಿತು ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಂ.ಬಿ.ಭಾನುಪ್ರಕಾಶ್, 'ಸಂಘಟನೆ–ಸಂಚಲನೆ ಮತ್ತು ಕಾರ್ಯ ವಿಸ್ತಾರ' ಕುರಿತು ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ವಿ.ರಾಜೇಶ್, 'ಸಾಮಾಜಿಕ ಜಾಲತಾಣದ ಮಹತ್ವ' ಕುರಿತು ಸಾಮಾಜಿಕ ಜಾಲತಾಣ ಸಂಚಾಲಕ ವಿಶ್ವನಾಥ ಭಟ್, 'ವ್ಯಕ್ತಿತ್ವ ವಿಕಸನ ಹಾಗೂ ಸಂಘಟಿತ ಕಾರ್ಯ' ಕುರಿತು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್, 'ಇಂದಿನ ರಾಜಕೀಯ ಸ್ಥಿತಿಗತಿ' ಕುರಿತು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ವಿಷಯ ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಸೆ.13ರಂದು ಬೆಳಗ್ಗೆ 10ಕ್ಕೆ 'ಸಾವರ್ಕರ್ ವಿಚಾರಧಾರೆ' ಬಗ್ಗೆ ತುಮಕೂರು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೆಚ್.ಎನ್.ಚಂದ್ರಶೇಖರ್ ಹಾಗೂ 'ಭಾರತೀಯ ಸಂವಿಧಾನ' ಕುರಿತು ಬಿಜೆಪಿ ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾನಂದೀಶ್ ವಿಚಾರ ಮಂಡಿಸಲಿದ್ದಾರೆ ಎಂದರು. ಮೋರ್ಚಾದ ಮುಖಂಡರಾದ ನಯಾರ್‌ಖ್ ಅಹಮ್ಮದ್, ಇಲಿಯಾಜ್ ಅಹಮ್ಮದ್, ಅನಿಷಾ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ನಿಧನ

ಜಾನ್ ಜೆ. ಪಿಂಟೋ



ಮೈಸೂರು,ಸೆ.10–ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಮಾಜಿ ಅಧ್ಯಕ್ಷರು ಹಾಗೂ ಮೈಸೂರಿನ ಶಕ್ತಿನಗರದ ನಿವಾಸಿಗಳಾದ ಜಾನ್ ಜೆ.ಪಿಂಟೋ (69) ಶನಿವಾರ ನಿಧನರಾದರು. ಮೃತರು ಪತ್ನಿ ಅಸುಂತಾ ಪಿಂಟೋ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ.11) ರಮ್ಮನಹಳ್ಳಿ ಕ್ರಿಶ್ಚಿಯನ್ ಸಿಮೆಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಬಿ.ಅನಂತಕುಮಾರ್



ನಿವೃತ್ತ ರೈಲ್ವೆ ನೌಕರ (ಎಸ್‌ಎಸ್‌ಇ/ಎಸ್‌ಎಂವೈ / ಸಿಡಬ್ಲ್ಯುಎಸ್/ಎಂವೈಎಸ್‌ಎಸ್) ಹಾಗೂ ಮೈಸೂರಿನ ಕೆ.ಆರ್. ಮೊಹಲ್ಲಾದ ವೀಣೆ ಶೇಷಣ್ಣ ರಸ್ತೆ ನಿವಾಸಿ ಕೆ.ಬಿ.ಅನಂತಕುಮಾರ್ (66) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕುವೆಂಪುನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೆ.ರುಕ್ಮಿ ಕುಮಾರಸ್ವಾಮಿ



ಮೈಸೂರಿನ ಅಶೋಕಪುರಂ 10ನೇ ಕ್ರಾಸ್‌ನ ಮಾಡೆಲ್ ಹೌಸ್‌ನ ವಿಕ್ರಾಂತ್ ಕಾರ್ಖಾನೆ (ಜೆ.ಕೆ. ಟೈರ್ಸ್) ನಿವೃತ್ತ ಉದ್ಯೋಗಿ ಜೆ.ರುಕ್ಮಿ ಕುಮಾರಸ್ವಾಮಿ (65) ಶುಕ್ರವಾರ ಸಂಜೆ ತೀವ್ರ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ತಾಯಿ ಮಾದಮ್ಮ, ಪತ್ನಿ ಶ್ರೀಮತಿ ಪುಷ್ಪಲತಾ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ಟರ್ಲಿಂಗ್ ಥಿಯೇಟರ್ ಪಕ್ಕದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೊಟ್ಟೆಯ ವಿವಿಧ ಭಾಗಗಳ ಕ್ಯಾನ್ಸರ್‌ಗೆ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ

ಸುಧಾರಿತ ಸಿಆರ್‌ಎಸ್, ಹೈಪೆಕ್ ಚಿಕಿತ್ಸಾ ವಿಧಾನ



ಸಾಮಾನ್ಯವಾಗಿ ಹೊಟ್ಟೆಯಲ್ಲಿನ ಕ್ಯಾನ್ಸರ್ ಚಿಕಿತ್ಸೆಗೆ ಇದೊಂದು ಸುಧಾರಿತ ವಿಧಾನ. ಕ್ಯಾನ್ಸರ್ ಹೊಟ್ಟೆ ಇತರ ಭಾಗಗಳಿಗೆ ಹರಡಿದಾಗ ಈ ವಿಧಾನ ಬಳಕೆ ಪರಿಣಾಮಕಾರಿಯಾಗಲಿದೆ. ಅಂಡಾಶಯ ಕ್ಯಾನ್ಸರ್, ಕರುಳಿನ ಕ್ಯಾನ್ಸರ್, ಅಪೆಂಡಿಸಿಯಲ್ ಕ್ಯಾನ್ಸರ್ ಮತ್ತು ಪ್ರಾಥಮಿಕ ಪೆರಿಟೋನಿಯಲ್ ಕ್ಯಾನ್ಸರ್‌ಗಳಿಗೆ ಈ ವಿಧಾನ ಬಳಸಲಾಗುವುದು. ಈ ವಿಧಾನದಲ್ಲಿ 2 ಹಂತಗಳಿದ್ದು, ಗೋಚರಿಸುವ ಕ್ಯಾನ್ಸರ್ ನಿಕ್ಷೇಪಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಲಾಗುತ್ತದೆ. ನಂತರ ಉಳಿದ ಸೂಕ್ಷ್ಮ ಕ್ಯಾನ್ಸರ್ ಕೋಶಗಳನ್ನು ತೊಡೆದು ಹಾಕಲು ಕಿಮೊಥೆರಪಿ ನೀಡಲಾಗುತ್ತದೆ. ಇದು ರೋಗಿಗಳಿಗೆ ದೀರ್ಘಾವಧಿ ಫಲಿತಾಂಶ ನೀಡಲಿದೆ.

–ಡಾ.ಎಂ.ಎನ್.ರವಿ, ಆಸ್ಪತ್ರೆ ವೈದ್ಯಕೀಯ ನಿರ್ದೇಶಕ.

ಮೈಸೂರು,ಸೆ.10(ಪಿಎಂ)–ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಕ್ಯಾನ್ಸರ್ ಚಿಕಿತ್ಸೆಯ ಸಮಗ್ರ ವ್ಯವಸ್ಥೆ ಹೊಂದಿದ್ದು, ಇದೀಗ ಹೊಟ್ಟೆಯಲ್ಲಿನ ಕ್ಯಾನ್ಸರ್ ಚಿಕಿತ್ಸೆಗೆ ಸಿಆರ್‌ಎಸ್ (ಸೈಟೋರೆಡಕ್ಟಿವ್ ಸರ್ಜರಿ) ಹಾಗೂ ಹೈಪೆಕ್ (ಹೈಪರ್ಥರ್ಮಿಕ್ ಇಂಟ್ರಾ ಪೆರಿಟೋನೀಯಲ್ ಕಿಮೊಥೆರಪಿ) ಸುಧಾರಿತ ವಿಧಾನದ ಮೂಲಕ ಅನೇಕ ರೋಗಿಗಳನ್ನು ಉಳಿಸುವಲ್ಲಿ ಯಶಸ್ವಿಯಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2021ರ ಆಗಸ್ಟ್‌ನಲ್ಲಿ ಈ ಚಿಕಿತ್ಸಾ ವಿಧಾನವನ್ನು ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಯಿತು. ಈ ವಿಧಾನದ ಮೂಲಕ ಅಂಡಾಶಯ ಮತ್ತು ಅಪೆಂಡಿಸಿಯಲ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 15ರಿಂದ 20 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಈ ಪೈಕಿ ಬಹುತೇಕರ ಆರೋಗ್ಯದಲ್ಲಿ ಉತ್ತಮ ಸುಧಾರಣೆ ಕಂಡಿದೆ ಎಂದು ಹೇಳಿದರು.

ಆಸ್ಪತ್ರೆಯ ಕನ್ಸಲ್ಟೆಂಟ್ ಆಂಕೋಲಜಿ ಸರ್ಜನ್ ಡಾ. ಕೆ.ಆರ್.ಸುಹಾಸ್ ಮಾತನಾಡಿ, ಸಿಆರ್‌ಎಸ್ ಎಂದರೆ ಹೊಟ್ಟೆಯ ಒಳಗಿನ ಒಳಪದರವನ್ನು (ಪೆರಿಟೋನಿಯಮ್) ಸಂಪೂರ್ಣವಾಗಿ ತೆಗೆದು ಹಾಕುವುದಾಗಿದೆ. ಸಾಮಾನ್ಯವಾಗಿ ಇದು 8ರಿಂದ 10 ಗಂಟೆಗಳ ಕಾಲ ನಡೆಯುವ ಸಂಕೀರ್ಣ ವಿಧಾನವಾಗಿದೆ ಎಂದರು. ಆಸ್ಪತ್ರೆಯ ಜಿಐ ಆಂಕೊಲಾಜಿ ಶಸ್ತ್ರಚಿಕಿತ್ಸಕ ಡಾ.ಲೋಕೇಶ್, ಮಾರ್ಕೇಟಿಂಗ್ ಮುಖ್ಯಸ್ಥ ಕೆ.ವಿ.ಕಾಮತ್ ಗೋಷ್ಠಿಯಲ್ಲಿದ್ದರು.


ಚಾಮರಾಜ ವಿಧಾನಸಭಾ ಕ್ಷೇತ್ರದ
ಜನಪ್ರಿಯ ಶಾಸಕರಾದ
ಎಲ್.ನಾಗೇಂದ್ರ
ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಶುಭಕೋರುವವರು:
ಬಿಜೆಪಿ ಕಾರ್ಯಕರ್ತರು
ವಾರ್ಡ್ ನಂ: 22, ಪಡುವಾರಹಳ್ಳಿ
ಎಸ್.ಬಿ.ಶಿವ
ಅಧ್ಯಕ್ಷರು, ದಿ.ಸಿಟಿ. ಕೊ. ಆಪರೇಟಿವ್ ಬ್ಯಾಂಕ್
ಹಾಗೂ ಬಿಜೆಪಿ ಯುವ ಮುಖಂಡರು
VISMAYA
ADVERTISER

ಗೌರಿ–ಗಣೇಶನಿಗೆ ಅಂತೂ ಮುಕ್ತಿ

'ಮೈಸೂರು ಮಿತ್ರ'ನ ವರದಿ ಫಲಶ್ರುತಿ


ವಿಘ್ನ ವಿನಾಶಕ, ಅವನ ತಾಯಿ ಗೌರಿಗೆ ಈ ಪರಿ ಸರಿಯೇ...!?

'ಮೈಸೂರು ಮಿತ್ರ'ನ ಸೆ.9ರ ಸಂಚಿಕೆಯ 12ನೇ ಪುಟದಲ್ಲಿ ಪ್ರಕಟವಾದ ವರದಿ.

ಪಂಪ್‌ಹೌಸ್ ಬಳಿ ಆರ್‌ಬಿಎಲ್ ನಾಲೆ ಸ್ವಚ್ಛ




ಶ್ರೀರಂಗಪಟ್ಟಣ, ಸೆ.10– ವಿಸರ್ಜನೆ ಹೆಸರಿನಲ್ಲಿ ತಾಲೂಕಿನ ಪಂಪ್‌ಹೌಸ್ ಬಳಿಯ ಆರ್‌ಬಿಎಲ್ ನಾಲೆಯಲ್ಲಿ ಅಷ್ಟವಸ್ತ್ಯವಾಗಿ ಬಿದ್ದಿದ್ದ ಗೌರಿ–ಗಣೇಶ ಮೂರ್ತಿಗಳನ್ನು ತೆರವುಗೊಳಿಸುವ ಮೂಲಕ ನಾಲೆಯನ್ನು ಸ್ವಚ್ಛಗೊಳಿಸಲಾಯಿತು.

ಗಣೇಶ ಚೌತಿಯಂದು ಪ್ರತಿಷ್ಠಾಪಿಸಿ, ಪೂಜಿಸಿದ್ದ ಗೌರಿ– ಗಣೇಶ ಮೂರ್ತಿಗಳನ್ನು ಮೈಸೂರು ಸೇರಿದಂತೆ ತಾಲೂಕಿನ ವಿವಿಧೆಡೆಯಿಂದ ತಾಲೂಕಿನ ಪಂಪ್‌ಹೌಸ್ ಬಳಿಯ ಆರ್‌ಬಿಎಲ್ ನಾಲೆಯಲ್ಲಿ ವಿಸರ್ಜಿಸಲಾಗಿತ್ತು. ಪರಿಸರ ಸ್ನೇಹಿ ಮೂರ್ತಿಗಳಿಗಿಂತ ಪಿಒಪಿ, ರಾಸಾಯನಿಕ ಬಣ್ಣ ಮಿಶ್ರಿತ ಗೌರಿ–ಗಣೇಶ ಮೂರ್ತಿಗಳೇ ಸಾಕಷ್ಟು ಸಂಖ್ಯೆಯಲ್ಲಿದ್ದು, ಗಣೇಶೋತ್ಸವ ಆಯೋಜಕರು, ಭಕ್ತರು ಮನ ಬಂದಂತೆ ನಾಲೆಯಲ್ಲಿ ಮೂರ್ತಿಗಳನ್ನು ವಿಸರ್ಜನೆ ಮಾಡಿ ಹೋಗಿದ್ದರು.

ನಾಲೆ ಎಲ್ಲೆಡೆ ಗೌರಿ–ಗಣೇಶ ಮೂರ್ತಿಗಳ ಅರೆಬರೆ ಕರಗಿದ ಅವಶೇಷಗಳೇ ಕಣ್ಣಿಗೆ ರಾಚುತ್ತಿತ್ತು. ತಾವೇ ಪೂಜಿಸಿ, ಆರಾಧಿಸಿದ ಮೂರ್ತಿಗಳ ಅವಸ್ಥೆ ಕಂಡು ಭಕ್ತರು ನೊಂದು ಕೊಳ್ಳುವಂತೆ ಮಾಡಿತ್ತು. ಈ ನಡುವೆ ಗಣೇಶ ಹಬ್ಬದ ಮುನ್ನವೇ ಸರ್ಕಾರದ ಆದೇಶದಂತೆ ಹಲವು ಮಾರ್ಗಸೂಚಿ ಹೊರಡಿಸಿದ್ದ ತಾಲೂಕು ಹಾಗೂ ಸ್ಥಳೀಯ ಆಡಳಿತ ಮೂರ್ತಿಗಳ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಕೈಗೊಳ್ಳದಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದ್ದರು.

ಈ ಕುರಿತು ಸೆ.9ರ ಶುಕ್ರವಾರದ 'ಮೈಸೂರು ಮಿತ್ರ' ಪತ್ರಿಕೆಯ 12ನೇ ಪುಟದಲ್ಲಿ '**ವಿಘ್ನ ವಿನಾಶಕ, ಅವನ ತಾಯಿ ಗೌರಿಗೆ ಈ ಪರಿ ಸರಿಯೇ...!?**' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟಿಸಲಾಗಿತ್ತು ಇದು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿತ್ತು. ಅಲ್ಲದೇ ಗೌರಿ– ಗಣೇಶ ಮೂರ್ತಿ ಬಿಸಾಡಿ ಹೋಗಿರುವುದರ ಬಗ್ಗೆ ಹಾಗೂ ಮೂರ್ತಿಗಳ ಸೂಕ್ತ ವಿಸರ್ಜನೆಗೆ ಅಗತ್ಯ ವ್ಯವಸ್ಥೆಯನ್ನು ಕೈಗೊಳ್ಳದ ಅಧಿಕಾರಿಗಳು ಹಾಗೂ ಸಂಘಟನೆಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಯಿತು.

ನಾಲೆ ಸ್ವಚ್ಛತೆ; 'ಮಿತ್ರ'ನ ವರದಿಯನ್ನು ಗಮನಿಸಿದ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಮಂಜುನಾಥ್ ಅವರ ಆದೇಶದ ಮೇರೆಗೆ ಶನಿವಾರ ಬೆಳಗ್ಗಿನಿಂದಲೇ ವಿರೂಪಗೊಂಡು ನಾಲೆಯಲ್ಲಿ ಬಿದ್ದಿದ್ದ ಗೌರಿ–ಗಣೇಶ ಮೂರ್ತಿಗಳನ್ನು ತೆರವುಗೊಳಿಸಲಾಯಿತು. ಅಲ್ಲದೆ ವಿಸರ್ಜನೆ ವೇಳೆಯಲ್ಲಿ ನಾಲೆಯ ಸುತ್ತ ಮುತ್ತ ತಿಂದು ಬಿಸಾಡಿದ ಪ್ರಸಾದ, ಪ್ಲಾಸ್ಟಿಕ್ ಸೇರಿದಂತೆ ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಿ, ನಾಲೆಯನ್ನು ಸ್ವಚ್ಛಗೊಳಿಸಲಾಯಿತು.

ಓಣಂ ಆಚರಣೆ



ವಿರಾಜಪೇಟೆ,ಸೆ.10– ವಿರಾಜಪೇಟೆ ಬಳಿಯ ಅಂಬಟ್ಟಿ ಗ್ರಾಮದ ಎನ್.ಸಿ.ವಿಜಯ್‌ಕುಮಾರ್ ಅವರ ನಿವಾಸದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೇರಳದ ಪದ್ಧತಿಯಂತೆ ಹತ್ತು ದಿನಗಳ ಕಾಲ ತಿರು ಓಣಂ ಹಬ್ಬವನ್ನು ಕುಟುಂಬದವರೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು.

ಉರೂಸ್ ಕಾರ್ಯಕ್ರಮ

ನಾಪೋಕ್ಲು, ಸೆ.10– ಇಲ್ಲಿಗೆ ಸಮೀಪದ ಇತಿಹಾಸ ಪ್ರಸಿದ್ಧ ಎಮ್ಮೆಮಾಡು ಹಝ್ರತ್ ಸೂಫಿ ಶಹೀದ್ ಮತ್ತು ಸಯ್ಯಿದ್ ಹಸನ್ ಸಖಾಫ್ ಅಲ್ ಹಳ್ರಮಿ ಹಾಗೂ ಇಲ್ಲಿ ವಿಶ್ರಾಂತಿ ಪಡೆಯುತ್ತಿರುವ ಔಲಿಯಾಗಳ ಹೆಸರಿನಲ್ಲಿ ಪ್ರತೀ ವರ್ಷವು ನಡೆಸಿಕೊಂಡು ಬರುತ್ತಿರುವ ಉರೂಸ್ ಮುಬಾರಕ್ ಕಾರ್ಯಕ್ರಮವನ್ನು 2023ನೇ ಫೆ.24 ರಿಂದ ಮಾ.3 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಸಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾರಾಯಣ ಗುರುಗಳ ಆದರ್ಶಗಳನ್ನು ಅರಿಯಿರಿ

ಸಿದ್ದಾಪುರದಲ್ಲಿ ಶಾಸಕ ಕೆ.ಜಿ.ಬೋಪಯ್ಯ ಕರೆ



ಮಡಿಕೇರಿ, ಸೆ.10– ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ ಬ್ರಹ್ಮಶ್ರೀ ನಾರಾಯಣ ಗುರು ಅವರ ಆದರ್ಶ ಮತ್ತು ಚಿಂತನೆಗಳನ್ನು ತಿಳಿದುಕೊಂಡು, ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸುವಂತೆ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಕರೆ ನೀಡಿದ್ದಾರೆ.

ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಕೊಡಗು ಯೂನಿಯನ್ ವತಿಯಿಂದ ಸಿದ್ದಾಪುರದ ನಾರಾಯಣ ಗುರು ಸಭಾಂಗಣದಲ್ಲಿ ಶನಿವಾರ ನಡೆದ 168ನೇ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಾರಾಯಣ ಗುರುಗಳು ಭಾರತೀಯರೆಲ್ಲರೂ ಒಂದು ಎಂಬುದನ್ನು ಸಾರಿದ ಮಹಾನ್ ಮಾನವತಾವಾದಿಯಾಗಿದ್ದಾರೆ. ಒಂದೇ ಕುಲ, ಒಂದೇ ಜಾತಿ ಎಂಬುದನ್ನು ನಾರಾಯಣ ಗುರು ಅವರು ಸಾರಿದ್ದಾರೆ. ನಾರಾಯಣ ಗುರು ಅವರು ಸಮಾಜಕ್ಕೆ ನೀಡಿರುವ ಸಂದೇಶಗಳು ಸಾರ್ವಕಾಲಿಕವಾಗಿದ್ದು, ಅವರು ಮನುಕುಲಕ್ಕೆ ಆದರ್ಶವಾಗಿದ್ದಾರೆ ಎಂದು ಕೆ.ಜಿ.ಬೋಪಯ್ಯ ತಿಳಿಸಿದರು.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ನಾರಾಯಣ ಗುರು ಅವರು ಮನುಕುಲದ ಕೆಡಕುಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ವಿಶ್ವ ಒಂದು ಹಳ್ಳಿಯಾಗಿದ್ದರೂ ಸಹ, ಸಮಾಜದ ಅಭಿವೃದ್ಧಿಯಲ್ಲಿ ಇನ್ನೂ ಸಾಕಷ್ಟು ಸುಧಾರಣೆಗಳು ಮತ್ತು ಬದಲಾವಣೆಗಳು ಆಗಬೇಕಿದೆ ಎಂದರು. ಸೋಮವಾರಪೇಟೆ ತಾಲೂಕಿನಲ್ಲಿ ಮಲೆಯಾಳಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಕಾಯ್ದಿರಿಸಿರುವ ಅನುದಾನವನ್ನು ಇನ್ನೂ ಬಳಸಿಕೊಂಡಿಲ್ಲ. ಶಾಸಕರ ಅನುದಾನದಿಂದ ಇನ್ನಷ್ಟು ಹೆಚ್ಚಿನ ಅನುದಾನ ನೀಡಿ ಭವನ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ಜಿಲ್ಲೆಯಲ್ಲಿ ಮಲೆಯಾಳ ಮಾತನಾಡುವ ಭಾಷಿಕರ ಸಂಖ್ಯೆ ಹೆಚ್ಚಿದ್ದು, ನಾರಾಯಣ ಗುರು ಭವನ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು ಎಂದರು.

ರಾಮನಗರ ಜಿಲ್ಲೆಯ ಸೋಲೂರು ಗ್ರಾಮದ ಆರ್ಯ ಈಡಿಗ ಮಹಾ ಸಂಸ್ಥಾನದ ಶ್ರೀ ರೇಣುಕಾ ಪೀಠ, ಶ್ರೀ ನಾರಾಯಣ ಗುರು ಮಠದ ವಿಖ್ಯಾತನಂದ ಸ್ವಾಮೀಜಿ ಆಶೀರ್ವಚನ ನೀಡಿ, ನಾರಾಯಣ ಗುರು ಅವರ ತತ್ವ ಸಂದೇಶಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿದೆ ಎಂದು ಹೇಳಿದರು. ಇಡೀ ದಕ್ಷಿಣ ಭಾರತದಲ್ಲಿ ಕೇರಳ ರಾಜ್ಯ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ನಾರಾಯಣ ಗುರು ಅವರ ಕೊಡುಗೆ ಅಪಾರ ಎಂಬುದನ್ನು ಮರೆಯುವಂತಿಲ್ಲ ಎಂದರು.

ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್ ಮಾತನಾಡಿ, ನಾರಾಯಣ ಗುರು ಅವರ ತತ್ವ ಸಿದ್ಧಾಂತಗಳು ಸಾಮಾಜಿಕ ಪರಿವರ್ತನೆಗೆ ಸಹಕಾರಿಯಾಗಿದೆ. ನಾರಾಯಣ ಗುರು ಅವರ ಸಂದೇಶಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ ಎಂದರು.


ಸಿದ್ದಾಪುರದ ಕೊಡಗು ಯೂನಿಯನ್ ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಅಧ್ಯಕ್ಷ ವಿ.ಕೆ ಲೋಕೇಶ್ ಮಾತನಾಡಿ, ಎಸ್‌ಎನ್‌ಡಿಪಿ ಸಂಸ್ಥೆಯು ಜಿಲ್ಲಾಡಳಿತ ಹಾಗೂ ಇತರರ ಸಹಕಾರದಿಂದ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಮಾಜದ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನ ಮಾಡಲಾಗಿದೆ ಎಂದರು.

ಎ.ಎಸ್.ಪೊನ್ನಣ್ಣ ಮಾತನಾಡಿ, ಪ್ರತಿಯೊಬ್ಬರೂ ಸಮಾನವಾಗಿ ಬದುಕುವಂತಾಗಬೇಕು. ಇದರಿಂದ ಸಮ ಸಮಾಜ ನಿರ್ಮಾಣ ಸಾಧ್ಯ ಎಂದರು. ಸಿದ್ದಾಪುರ ಗ್ರಾಪಂ ಅಧ್ಯಕ್ಷೆ ರೀನಾ ತುಳಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಸ್ವಾಮಿ, ಕೊಡಗು ಬಿಲ್ಲವ ಸಮಾಜದ ಜಿಲ್ಲಾಧ್ಯಕ್ಷ ರಘು ಆನಂದ್, ಹಿಂದೂ ಮಲೆಯಾಳಿ ಸಮಾಜದ ಕೊಡಗು ಜಿಲ್ಲಾ ಸಮಿತಿ ಅಧ್ಯಕ್ಷ ವಿ.ಎಂ.ವಿಜಯ, ಸಮಿತಿ ಅಧ್ಯಕ್ಷ ಆರ್.ಗಿರೀಶ್, ಕಾರ್ಯದರ್ಶಿ ರೀಶಾ ಸುರೇಂದ್ರ ಮತ್ತಿತ್ತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಪಡೆದ ವಿದ್ಯಾರ್ಥಿಗಳು ಹಾಗೂ ನಾರಾಯಣ ಗುರು ಅವರ ಕುರಿತು ಪುಸ್ತಕ ಬರೆದಿರುವ ಸಾಹಿತಿ ಡಾ. ಜೆ.ಸೋಮಣ್ಣ, ಸುನಿತಾ ಲೋಕೇಶ್, ರಾಣಿ ಅರುಣ ಅವರನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು.

ಮಳೆ ಹಾನಿಗೆ ತಕ್ಕ ಪರಿಹಾರಕ್ಕೆ ಒತ್ತಾಯ

ಚಾಮರಾಜನಗರ, ಸೆ.10–ರಾಜ್ಯ ಸರ್ಕಾರ ಮಳೆಹಾನಿಗೆ ತಕ್ಕ ಪರಿಹಾರ ನೀಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಒತ್ತಾಯಿಸಿದರು.



ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಮಹಾ ಮಳೆಯಿಂದಾಗಿ ಅಪಾರ ಪ್ರಮಾಣದ ಹಾನಿಯಾಗಿದೆ. ಸರ್ಕಾರ ಹಾನಿಗೆ ತಕ್ಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಮಳೆ, ಪ್ರವಾಹದಿಂದ ಜಿಲ್ಲೆಯಲ್ಲಿ ಹೆಚ್ಚು ಮನೆಗಳು ಹಾನಿಯಾಗಿದ್ದು, ಈಗಾಗಲೇ ಸರ್ಕಾರ ಪರಿಹಾರ ವಿತರಿಸುವ ಕಾರ್ಯ ಆರಂಭಿಸಿದೆ. ಆದರೆ ಪೂರ್ಣ ಪ್ರಮಾಣವಾಗಿ ಹಾನಿಯಾದ ಮನೆಗೆ 3 ಲಕ್ಷ ರೂ. ಪರಿಹಾರ ನೀಡುವುದು ಸಾಲುವುದಿಲ್ಲ. ಕನಿಷ್ಠ 5 ರಿಂದ 6 ಲಕ್ಷ ರೂ. ಪರಿಹಾರ ನೀಡಬೇಕು. 4 ಅಡಿಗಿಂತಲೂ ಹೆಚ್ಚು ನೀರು ನಿಂತಿರುವ ಮನೆಗಳ ಸಾಮಗ್ರಿಗಳು, ತಳಪಾಯ ಎಲ್ಲವೂ ಹಾಳಾಗಿದ್ದು, ಗೋಡೆಗಳು ಸಡಿಲವಾಗಿದೆ. ಅಂತಹ ಮನೆಗಳಿಗೆ 10 ಸಾವಿರ ಪರಿಹಾರ ನೀಡುವುದು ಸರಿಯಲ್ಲ. ಪೂರ್ಣ ಪ್ರಮಾಣದ ಪರಿಹಾರ ನೀಡಬೇಕು. ತೋಟಗಾರಿಕೆ ಬೆಳೆಗಳಿಗೆ ಹೆಕ್ಟೇರ್‌ಗೆ 16 ಸಾವಿರ ರೂ. ಪರಿಹಾರ ಅವೈಜ್ಞಾನಿಕ. ಇಂದು ಹೆಕ್ಟೇರ್ ಅರಿಶಿನ, ಶುಂಠಿ ಬೇಸಾಯಕ್ಕೆ 50 ರಿಂದ 60 ಸಾವಿರ ವೆಚ್ಚವಾಗುತ್ತದೆ. ಆದ್ದರಿಂದ ವೈಜ್ಞಾನಿಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಹೆದ್ದಾರಿ ಕಾಮಗಾರಿ ಆರಂಭಕ್ಕೆ ಮನವಿ: ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್–209) 2017ರಲ್ಲಿ ಪ್ರಾರಂಭವಾದರೂ ನೆನೆಗುದಿಗೆ ಬಿದ್ದಿದೆ. ಈ ಕಾಮಗಾರಿ 2019ಕ್ಕೆ ಪೂರ್ಣವಾಗಬೇಕಿತ್ತು. 2022 ಆದರೂ ಕಾಮಗಾರಿ ಆರಂಭವಾಗಿಲ್ಲ. ಈ ಹೆದ್ದಾರಿ ಬೆಂಗಳೂರು–ದಿಂಡಿಗಲ್–ಕನಕಪುರದಿಂದ ಹಾದು ಬರಲಿದ್ದು, ಕೂಡಲೇ ಕಾಮಗಾರಿ ಕೈಗೊಳ್ಳುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದ ಸಚಿವ ವಿ.ಸೋಮಣ್ಣ ಅವರು, ಚಾಮರಾಜನಗರ–ಕನಕಪುರ–ಮಳವಳ್ಳಿ–ಕೊಳ್ಳೇಗಾಲ–ಯಳಂದೂರು ರೈಲು ಮಾರ್ಗ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದು, ಇದರಿಂದ ಜಿಲ್ಲೆಗೆ ಬಹಳಷ್ಟು ಅನುಕೂಲವಾಗಲಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜ್, ಎಸ್.ಜಯಣ್ಣ, ಜಿಪಂ ಮಾಜಿ ಸದಸ್ಯ ಯೋಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ವಿ.ಚಂದ್ರು, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ವಕೀಲ ಅರುಣ್‌ಕುಮಾರ್ ಹಾಜರಿದ್ದರು.

ಆದರ್ಶ ಶಿಕ್ಷಕರು ದೇಶದ ಸಂಪತ್ತು: ಸೋಮಣ್ಣ



ಚಾಮರಾಜನಗರ, ಸೆ.10–ಮುಗ್ಧ ಮಕ್ಕಳಿಗೆ ನಿಷ್ಕಲ್ಮಷ ಮನಸ್ಸಿನಿಂದ ಅಕ್ಷರ ಬಿತ್ತುವ ಮೂಲಕ ಸಮಾಜದ ಸತ್ಪ್ರಜೆಗಳನ್ನು ರೂಪಿಸುತ್ತಿರುವ ಆದರ್ಶ ಶಿಕ್ಷಕರು ಈ ದೇಶದ ಸಂಪತ್ತು ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ಡಾ.ಎಸ್.ರಾಧಾಕೃಷ್ಣನ್ ಹಾಗೂ ಸಾವಿತ್ರಿ ಬಾಫುಲೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಶಿಕ್ಷಣ ಎನ್ನುವುದು ಕೇವಲ ಪದವಲ್ಲ, ಅದು ಜಗತ್ತನ್ನೇ ಬೆಳಗುವ ಅದಮ್ಯ ಶಕ್ತಿ. ಒಬ್ಬ ಶಿಕ್ಷಕ ಏನೂ ಬೇಕಾದರೂ ಆಗಬಹುದು ಎನ್ನುವುದಕ್ಕೆ ಸರ್ವಪಲ್ಲಿ ಡಾ.ಎಸ್.ರಾಧಾಕೃಷ್ಣನ್ ಅವರೇ ಸಾಕ್ಷಿ. ಅವರನ್ನು ಆದರ್ಶವಾಗಿಟ್ಟುಕೊಂಡು ಶಿಕ್ಷಕರು ತಮ್ಮ ಸೇವೆಯ ಜೊತೆಗೆ ದೇಶದ ಸತ್ಪ್ರಜೆಗಳನ್ನು ರೂಪಿಸುವ ಮೂಲಕ ದೇಶದ ಪ್ರಗತಿಗೆ ಅಪಾರ ಕೊಡುಗೆ ನೀಡುತ್ತಿದ್ದಾರೆ. ಭ್ರಷ್ಟಾಚಾರ ರಹಿತ ಹುದ್ದೆ ಎಂದರೇ ಅದು ಶಿಕ್ಷಕರದ್ದು ಮಾತ್ರ ಎಂದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ಶಾಲೆಗಳನ್ನು ಉನ್ನತೀಕರಣಗೊಳಿಸಲಾಗುತ್ತಿದೆ ಜಿಲ್ಲೆಯಲ್ಲಿ ಇಂಜಿನಿಯರಿಂಗ್, ಮೆಡಿಕಲ್. ಐಟಿಐ ಕಾಲೇಜುಗಳ ಪ್ರಾರಂಭವಾಗಿದೆ. ಅದಕ್ಕನುಗುಣವಾಗಿ ವಿದ್ಯಾರ್ಥಿನಿಲಯಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ಮೂಲಕ ಬುದ್ಧಿವಂತರ ಜಿಲ್ಲೆ ಎಂಬುದು ಸಾಬೀತಾಗಿದೆ. ಶೀಘ್ರವೇ ಜಿಲ್ಲಾ ಕೇಂದ್ರದಲ್ಲಿ ಐಎಎಸ್ ಕೋಚಿಂಗ್ (ಸ್ಟಡಿ ಸೆಂಟರ್) ಕೇಂದ್ರ ಆರಂಭವಾಗಲಿದೆ ಎಂದರು.

ಬೆಂಗಳೂರಿನ ಕ್ರೈಸ್ಟ್ ಕಾಲೇಜು ಪ್ರೊ.ಹ.ರಾ.ಮಹೇಶ್ ಮುಖ್ಯ ಭಾಷಣ ಮಾಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಶಾಸಕರಾದ ಎನ್.ಮಹೇಶ್, ಸಿ.ಎಸ್. ನಿರಂಜನಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕಾಡಾ ಅಧ್ಯಕ್ಷ ನಿಜಗುಣರಾಜು, ನಗರಸಭೆ ಅಧ್ಯಕ್ಷ ಆಶಾ ನಟರಾಜು, ಸದಸ್ಯರಾದ ಮಹೇಶ್, ಮನೋಜ್ ಪಟೇಲ್, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಒ ಕೆ.ಎಂ. ಗಾಯತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್. ಕಾತ್ಯಾಯಿನಿದೇವಿ, ಎಎಸ್ಪಿ ಸುಂದರರಾಜು, ಎಸಿ ಗೀತಾಹುಡೇದ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಸ್. ಎನ್.ಮಂಜುನಾಥ್, ಬಿಇಒ ಡಿ.ಸೋಮಣ್ಣೇಗೌಡ, ಡಯಟ್ ಪ್ರಾಂಶುಪಾಲ ಹೆಚ್.ಕೆ.ಪಾಂಡು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿದ್ದರು.

ಮಾಧವಗೆರೆ–ಮೇಗಳಾಪುರ ಡೈರಿ ಮಹಾಸಭೆ

ಮೈಸೂರು, ಸೆ.10– ತಾಲೂಕಿನ ಮಾಧವಗೆರೆ–ಮೇಗಳಾಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ 2021–22ನೇ ಸಾಲಿನಲ್ಲಿ 5,80,601 ರೂ. ನಿವ್ವಳ ಲಾಭ ಬಂದಿದೆ ಎಂದು ಸಂಘದ ಅಧ್ಯಕ್ಷ ಜಗದೀಶ್ ತಿಳಿಸಿದರು.



ಸಂಘದ ಆವರಣದಲ್ಲಿ ನಡೆದ ಸರ್ವ–ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೈನುಗಾರಿಕೆ ರೈತರ ಬಾಳಿನ ಜೀವಾಳವಾಗಿದೆ. ಹಾಲು ಉತ್ಪಾದಕರು ಡೈರಿಗೆ ಗುಣಮಟ್ಟದ ಹಾಲು ಪೂರೈಸುವ ಮೂಲಕ ಆರ್ಥಿಕವಾಗಿ ಸದೃಢರಾಗಬೇಕು ಎಂದರು. ಸಭೆಯಲ್ಲಿ ವಿಸ್ತರಣಾಧಿಕಾರಿ ವಿನುತಾ, ಉಪಾಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ರಾಜಶೇಖರ, ಎಂ.ಬಿ.ನಂಜುಂಡಸ್ವಾಮಿ, ಮಾದಪ್ಪ ಬಸವರಾಜು, ನಂಜುಂಡಸ್ವಾಮಿ, ರಾಜಣ್ಣ, ನೀಲಮ್ಮ, ಗೌರಮ್ಮ ಹಾಗೂ ಕಾರ್ಯ ನಿರ್ವಹಣಾಧಿಕಾರಿ ಎಂ.ಶಿವಣ್ಣ, ಹಾಲು ಪರೀಕ್ಷಕ ಚೇತನ್, ಸಹಾಯಕ ಸತೀಶ ಮತ್ತು ಹಾಲು ಉತ್ಪಾದಕರಿದ್ದರು.

ಇಂದಿನಿಂದ ನಾಟಕೋತ್ಸವ

ತಿ.ನರಸೀಪುರ, ಸೆ.10– ಬಿ.ಜಿ. ಗುರುಸ್ವಾಮಿ ಕಲಾ ಪ್ರತಿಷ್ಠಾನ ಮತ್ತು ಶ್ರೀ ಕುಂದೂರಮ್ಮ ಡ್ರಾಮಾ ಸೀನರಿ ಬೆನಕನಹಳ್ಳಿ ಸಂಯುಕ್ತಾಶ್ರಯದಲ್ಲಿ ಸೆ.11 ರಿಂದ ಮೈಸೂರಿನ ಕಲಾಮಂದಿರದಲ್ಲಿ ನಾಟಕೋತ್ಸವ ಕಾರ್ಯಕ್ರಮ ನಡೆಯಲಿದೆ.

ವಾಟಾಳು ಮಠದ ಪೀಠಾಧ್ಯಕ್ಷ ಡಾ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸೆ.11 ರಂದು ಭಕ್ತ ಕನಕದಾಸ ನಾಟಕ ಮಂಡಳಿಯಿಂದ ಕುರುಕ್ಷೇತ್ರ ನಾಟಕ, 12 ರಂದು ರಂಗಲೋಕ ಕಲಾ ತಂಡದಿಂದ ದಕ್ಷಯಜ್ಞ ಮತ್ತು 13 ರಂದು ಕಾಶಿ ವಿಶ್ವನಾಥ ಕೃಪಾ ಪೋಷಿತ ನಾಟಕ ಮಂಡಳಿಯಿಂದ ಕುರುಕ್ಷೇತ್ರ ಎಂಬ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದು ಡ್ರಾಮಾ ಸೀನರಿ ವ್ಯವಸ್ಥಾಪಕ ಪ್ರವೀಣ್ ತಿಳಿಸಿದ್ದಾರೆ.

ಸಾಮಾಜಿಕ ಸುಧಾರಣೆಯ ಹರಿಕಾರ ನಾರಾಯಣಗುರು



ಪಿರಿಯಾಪಟ್ಟಣ, ಸೆ.10– ಕೇರಳದಲ್ಲಿ ಜಾತಿ, ಮತ ಹೆಚ್ಚಾಗಿದ್ದ ಕಾಲದಲ್ಲಿ ಸಮಾಜದ ತಾರತಮ್ಯಗಳನ್ನು ಹೋಗಲಾಡಿಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟ ನಾರಾಯಣ ಗುರುಗಳು ಒಂದೇ ಜಾತಿ, ಒಂದೇ ಮತ ಹಾಗೂ ಒಂದೇ ದೇವರು ಎಂಬ ಸತ್ಯವಾಕ್ಯ ಬಿಟ್ಟುಹೋದ ಒಬ್ಬ ಮಹಾನ್ ಪುರುಷ ಎಂದು ಶಾಸಕ ಕೆ.ಮಹದೇವ್ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ನಡೆದ ಸಂತ ನಾರಾಯಣ ಗುರು ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಕೇರಳದಲ್ಲಿ ಜಾತಿ ಪದ್ಧತಿ ವಿರುದ್ಧ ಹೋರಾಡಿದ ನಾರಾಯಣ ಗುರುಗಳ ಬದುಕಿನ ಹೋರಾಟ ನಮ್ಮೆಲ್ಲರಿಗೂ ಆದರ್ಶವಾಗಬೇಕು. ಮತ್ತೊಮ್ಮೆ ನಾರಾಯಣಗುರುಗಳಂತಹ ಮಹಾನ್ ಸಂತರು ಈ ದೇಶದಲ್ಲಿ ಹುಟ್ಟಿ ಬರಬೇಕು ಎಂದು ಆಶಿಸಿದರು.

ಉಪನ್ಯಾಸಕ ಕಾಂತರಾಜ್ ಮಾತನಾಡಿ, ನಾರಾಯಣಗುರು ಹುಟ್ಟಿದ್ದು ಕೇರಳದ ತಿರುವನಂತಪುರ ಬಳಿಯ ಕುಗ್ರಾಮದಲ್ಲಿ. ಈಳವ ಜಾತಿಗೆ ಸೇರಿದ ತಂದೆ ಮಾದನ್ ಆಶಾನ್ ತಾಯಿ ಕುಟ್ಟಿಯಮ್ಮ ದಂಪತಿಗೆ ಹುಟ್ಟಿದ ಮಗುವಿಗೆ ನಾರಾಯಣ ಎಂಬ ಹೆಸರಿಟ್ಟು ಪ್ರೀತಿಯಿಂದ ನಾನು ಎಂದೂ ಕರೆದರು. ಅಂದಿನ ಬ್ರಿಟಿಷ್ ಅರಸೊತ್ತಿಗೆಯ ಆಡಂಬರದ ಕಾಲದಲ್ಲಿ ಮೂಢನಂಬಿಕೆ, ಜಾತೀಯತೆ, ಅಸ್ಪೃಶ್ಯತೆ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಬಾಲ್ಯವಿವಾಹ, ಗುಲಾಮಗಿರಿ, ಜೀತಪದ್ಧತಿ, ಜಮೀನ್ದಾರಿ ಪದ್ಧತಿ ಮೊದಲಾದ ಅನಿಷ್ಟ ಆಚರಣೆಗಳ ವಿರುದ್ಧ ಅತ್ಯಂತ ಪ್ರಬಲವಾಗಿ ಹೋರಾಡಿದ ನಾರಾಯಣಗುರುಗಳು, ಹೊರಾಟದ ಜೊತೆ ಜೊತೆಗೆ ಸಂಸ್ಕೃತ, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಧರ್ಮಗ್ರಂಥಗಳ ಜ್ಞಾನ ಪಡೆದು ಊಟ ನಿದ್ರೆಗಳ ಪರಿವೆಯಿಲ್ಲದೆ ಕಲಿತು ಆಧ್ಯಾತ್ಮ, ಆಯುರ್ವೇದ, ಜ್ಯೋತಿಷ್ಯ, ವೇದ, ಉಪನಿಷತ್ತು, ಪುರಾಣಗಳ ಕಲಿಕೆಯೊಂದಿಗೆ ತನ್ನ ಬದುಕಿನುದ್ದಕ್ಕೂ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿ ಆಧ್ಯಾತ್ಮಿಕ ಗುರುವಾದರೂ ಸಮಾಜದೊಂದಿಗೆ ಬದುಕಿನ ಪಾಠ ಕಲಿತು ಬ್ರಹ್ಮ ಜ್ಞಾನ ಪಡೆದು ನಾರಾಯಣ ಗುರುವಾದರು ಎಂದು ಅವರ ಬದುಕಿನ ಹೋರಾಟವನ್ನು ವಿವರವಾಗಿ ಪರಿಚಯಿಸಿದರು.

ಸಮಾರಂಭದಲ್ಲಿ ಆರ್ಯ ಈಡಿಗ ಸಮಾಜದ ಅಧ್ಯಕ್ಷ ಪಿ.ವೈ.ಮಲ್ಲೇಶ್, ಕಾರ್ಯದರ್ಶಿ ನಿಂಗರಾಜ್, ಖಜಾಂಚಿ ಕಾಂತರಾಜ್, ತಹಸೀಲ್ದಾರ್ ಚಂದ್ರಮೌಳಿ, ಪುರಸಭಾಧ್ಯಕ್ಷ ಮಹೇಶ್, ಪಶು ವೈದ್ಯಾಧಿಕಾರಿ ಸೋಮಣ್ಣ, ಬಿಇಒ ಬಸವರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ಮುಖಂಡರಾದ ತಿಮ್ಮಪ್ಪ, ಉಮೇಶ್ ಸೇರಿದಂತೆ ಅನೇಕರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಕ್ಯಾಪ್ಟನ್ (ತ): ಬೆ.10.40ಕ್ಕೆ, ಲಕ್ಕಿಮ್ಯಾನ್ (ಕ): ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 9 ಸುಳ್ಳು ಕಥೆಗಳು (ಕ): ರಾ.10.30ಕ್ಕೆ, ತಿರುಚಿಟ್ರಂಬಲಂ (ತ): ಮ.1.20ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4ಕ್ಕೆ, ಗಾಳಿಪಟ 2(ಕ): ರಾ.7.05ಕ್ಕೆ, ಒಟ್ಟು (ಮ): ರಾ.9.55ಕ್ಕೆ.
- ಸ್ಕ್ರೀನ್ 3 ಲಕ್ಕಿಮ್ಯಾನ್ (ಕ): ಬೆ.10.45ಕ್ಕೆ, ಕ್ಯಾಪ್ಟನ್ (ತ): ಮ.1.45ಕ್ಕೆ, ಅಬತಾರ ಮಾತೆರ್ನಾಳ (ತು): ಸಂ.4.15ಕ್ಕೆ, ಒರು ತೆಕ್ಕನ್ ತಾಲು ಕೇಸ್ (ಮ): ರಾ.7ಕ್ಕೆ, ಪಥೋಪಥಂ ನೋಟಂಡು (ಮ): ರಾ.9.55ಕ್ಕೆ.
- ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
- ಸ್ಕ್ರೀನ್ 2 ಒಕೇ ಒಕ ಜೀವಿತಂ (ತೆ): ಬೆ.10ಕ್ಕೆ, ಕ್ಯಾಪ್ಟನ್ (ಇಂ): ಮ.1.10ಕ್ಕೆ, ಲಕ್ಕಿ ಮ್ಯಾನ್ (ಕ): ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 3 ಲವ್ 360 (ಕ): ಬೆ.10.50ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4.40ಕ್ಕೆ, ಕ್ಯಾಪ್ಟನ್ (ತ): ರಾ.7.50ಕ್ಕೆ, ಪಥೋಪಥಂ ನೋಟಂಡು (ಮ): ರಾ.10.20ಕ್ಕೆ.
- ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.30ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಮ.2ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ
- ಸ್ಕ್ರೀನ್ 2 ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ
- ಸ್ಕ್ರೀನ್ 3 ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
- ಸ್ಕ್ರೀನ್ 4 ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಮ.2.55ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಫ್ಯಾಂಟಸಿ(ಕ): ಬೆ.11ಕ್ಕೆ, ಸರ್ವಸ್ಯ ನಾಟ್ಯಂ (ಕ): ಬೆ.10.10ಕ್ಕೆ, ತಾಜ್‌ಮಹಲ್ 2 (ಕ): ಮ.1.20ಕ್ಕೆ, ಕೋಬ್ರಾ (ತ): ಬೆ.11ಕ್ಕೆ, ಮ.2.40ಕ್ಕೆ, ಸಂ.6.20ಕ್ಕೆ, ರಾ.10ಕ್ಕೆ, ಕೋಬ್ರಾ (ತೆ): ಬೆ.11.15ಕ್ಕೆ, ಸಂ.6.05ಕ್ಕೆ, ಬೀಸ್ಟ್ (ಇಂ): ಬೆ.10.10ಕ್ಕೆ, ಮ.2.15ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಬೆ.10.45ಕ್ಕೆ, ಸಂ.4.30ಕ್ಕೆ, ಸೊಲೊಮಂಟೆ ತೇನೀಚಕಲ್ (ಮ): ರಾ.7.15ಕ್ಕೆ, ಸೀತಾರಾಮಂ (ಹಿಂ): ಮ.3.50ಕ್ಕೆ, ರಂಗ ರಂಗ ವೈಭವಂಗ (ತೆ): ಮ.3.15ಕ್ಕೆ, ರಾ.9.15ಕ್ಕೆ, ಪಲ್ತು ಜನ್ವರ್ (ಮ): ರಾ.9.45ಕ್ಕೆ, ಕಾರ್ತಿಕೇಯ–2 (ತೆ): ಬೆ.9.05ಕ್ಕೆ, ಮ.12.10ಕ್ಕೆ, ಲೈಗರ್ (ಹಿಂ): ಮ.3.20ಕ್ಕೆ, ತಿರುಚಿಟ್ರಂಬಲಂ (ತ): ಮ.12.25ಕ್ಕೆ, ಸಂ.6.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬ್ರಹ್ಮಾಸ್ತ್ರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಓಕೇ ಓಕ ಜೀವಿತಂ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಲಿಡೋ	
ಕ್ಯಾಪ್ಟನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು



ಮೈಸೂರು ಮಹಾನಗರ ಪಾಲಿಕೆ ನೂತನ ಮೇಯರ್ ಶಿವಕುಮಾರ್ ಅವರನ್ನು ತಿ.ನರಸೀಪುರ ತಾಲೂಕು ನಾಯಕ ಸಮುದಾಯದ ಮುಖಂಡರು ಸನ್ಮಾನಿಸಿದರು. ತಾಲೂಕು ಜೆಡಿಎಸ್ ಉಪಾಧ್ಯಕ್ಷ ನೀಲಸೋಗೆ ಮಹೇಶ್, ಮುಖಂಡರಾದ ಸುಂದರ ನಾಯಕ್, ಬೂದಹಳ್ಳಿ ಸಿದ್ದರಾಜು, ಕಾಡಿ ಮಹದೇವ್, ಕುಮಾರ್, ಮಲ್ಲು ಇತರರಿದ್ದರು.



ಮೂಗೂರಿನ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಮೂಗೂರು ಕೆಪಿಎಸ್ ಶಾಲೆಯ ವಿದ್ಯಾರ್ಥಿಗಳು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದು, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮಧುಸೂದನ್ ನಿಧನ



ಪಿರಿಯಾಪಟ್ಟಣ, ಸೆ.10– ಪಟ್ಟಣದ ನುಗ್ಗೇಹಳ್ಳಿ ಬೀದಿ ನಿವಾಸಿ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಮಧುಸೂದನ್(74) ಶನಿವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ರಾಜ್ಯ ಸಿದ್ದರಾಮಯ್ಯ ಅಭಿಮಾನಿಗಳ ಸಂಘದ ಉಪಾಧ್ಯಕ್ಷ ಮುರಳಿ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಜನಪ್ರಿಯ ಶಾಸಕರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಜನಸ್ನೇಹಿಗಳು ಹಾಗೂ ಯುವ ನಾಯಕರಾದ
ಸನ್ಮಾನ್ಯ ಶ್ರೀ ಎಲ್. ನಾಗೇಂದ್ರ ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
ಶುಭಕೋರುವವರು
ಶ್ರೀ ಎಲ್. ನಾಗೇಂದ್ರ
ಅಭಿಮಾನಿ ಬಳಗ

Promotional Feature

ಆಳಾಗಿ ದುಡಿದು ಅರಸನಾದ ನಾಗೇಂದ್ರ!



"ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ದಿಢೀರ್ ನಾಯಕರಾದವರಲ್ಲ. ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವಿತರವಾಗಿ ಶ್ರಮಿಸಿ ಹಂತ ಹಂತವಾಗಿ ಬೆಳೆದು ಬಂದವರು. ತಮ್ಮ ಪಯಣದಲ್ಲಿ ಸೋಲು–ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಅಂದುಕೊಂಡಂತೆ ಜನಸೇವೆಯ ಮೂಲಕವೇ ಕೊನೆಗೆ ಉನ್ನತ ಸ್ಥಾನಕ್ಕೇರಿದ ಛಲವಾದಿ. ತಮಗೆ ಸಿಕ್ಕ ಅಧಿಕಾರ ಬಳಸಿಕೊಂಡು ನಂಬಿದ ಜನರಿಗಾಗಿ ಅವಿರತ ದುಡಿಯುತ್ತಿರುವ ಜನಸೇವಕ. ಕ್ಷೇತ್ರದ ಪ್ರತಿಯೊಬ್ಬರಲ್ಲೂ 'ನಮ್ಮ ಮನೆ ಮಗ' ಎಂಬ ಭಾವನೆ ಅಚ್ಚೊತ್ತಿರುವ ಅಪರೂಪ ರಾಜಕಾರಣಿ. ಕನ್ನೇಗೌಡನ ಕೊಪ್ಪಲಿನ ಲಿಂಗಪ್ಪ ಹಾಗೂ ಪುಟ್ಟಲಿಂಗಮ್ಮ ದಂಪತಿ ಪುತ್ರನಾಗಿ 1964ರ ಸೆ.11ರಂದು ಜನಿಸಿದ ಎಲ್.ನಾಗೇಂದ್ರ ಅವರಿಗಿಂದು ಹುಟ್ಟುಹಬ್ಬದ ಸಂಭ್ರಮ.





ಒಂದೊಂದೇ ಮೆಟ್ಟಿಲೇರಿದ ಜನಸೇವಕ

ಕೆ.ಜಿ.ಕೊಪ್ಪಲಿನ ಗ್ರಾಮೀಣ ಸೊಗಡಲ್ಲಿ ಬೆಳೆದ ಎಲ್.ನಾಗೇಂದ್ರ ಅವರಿಗೆ ಸಹಜವಾಗಿಯೇ ಚಿಕ್ಕಂದಿನಿಂದಲೂ ಸಮಾಜ ಸೇವೆ ಬಗ್ಗೆ ಸೆಳೆತವಿತ್ತು. ಅದರಂತೆ ತಮ್ಮ ಕೈಲಾದ ರೀತಿಯಲ್ಲಿ ಸುತ್ತಮುತ್ತಲಿನ ಕಷ್ಟದಲ್ಲಿದ್ದ ಜನರಿಗೆ ನೆರವಾಗುವುದನ್ನು ರೂಢಿಸಿಕೊಂಡು ಬಂದವರು. ರಾಷ್ಟ್ರೀಯ ಸ್ವಯಂ ಸೇವಕರಾಗಿದ್ದ ಅವರು ನಂತರ ಬಿಜೆಪಿ ಸದಸ್ಯತ್ವ ಪಡೆಯುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಅಡಿಯಿಟ್ಟವರು. ಆರಂಭದಲ್ಲೇ ನಾಯಕನಾಗಿ ಬೆಳೆಯುವ ಹುಂಬತನಕ್ಕೆ ಒಳಗಾಗದೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಬಿಜೆಪಿ ಕೃಷ್ಣರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಯಾಗಿ, ಮೈಸೂರು ನಗರ ಕಾರ್ಯದರ್ಶಿಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ಸಂಘಟನೆ ಮಾಡಿದರು. ನಾಗೇಂದ್ರ ಅವರ ಬದ್ಧತೆಯನ್ನು ಗುರುತಿಸಿದ ಪಕ್ಷ ಇನ್ನೂ ಹೆಚ್ಚಿನ ಜವಾಬ್ದಾರಿ ನೀಡಿತು. ಪಕ್ಷ ಸ್ಲಂ ಮೋರ್ಚಾ ರಾಜ್ಯ ಕಾರ್ಯದರ್ಶಿಯಾದ ನಾಗೇಂದ್ರ ರಾಜ್ಯಾದ್ಯಂತ ನಿಗದಿತ ಘಟಕದ ಬಲವರ್ಧನೆಗೆ ಶ್ರಮಿಸಿದರು. ನಂತರ ಮೈಸೂರು ವಿಭಾಗದ ಸಂಚಾಲಕರಾಗಿಯೂ ಕಾರ್ಯ ನಿರ್ವಹಿಸಿದ್ದ ಇವರು, ಚುನಾವಣಾ ರಾಜಕೀಯದಲ್ಲಿ ಯಶಸ್ವಿ ಹೆಜ್ಜೆ ಇಟ್ಟರು. 1996ರಿಂದ ಸತತ ಮೂರು ಬಾರಿ ಮೈಸೂರು ಮಹಾನಗರ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗುವ ಮೂಲಕ ಹ್ಯಾಟ್ರಿಕ್ ಕಾರ್ಪೊರೇಟರ್ ಎನಿಸಿದರು. ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷನಾಗಿ, ವಿಪಕ್ಷ ನಾಯಕವಾಗಿ ಕೆಲಸ ಮಾಡಿದರು. 2011ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಮುಡಾ ವ್ಯಾಪ್ತಿಯ ಬಡಾವಣೆಗಳ ಅಭಿವೃದ್ಧಿ ಸೇರಿದಂತೆ ಸಾಕಷ್ಟು ಪರಿಣಾಮಕಾರಿ ಕ್ರಮಗಳ ಮೂಲಕ ಅಲ್ಲಿನ ಆಡಳಿತ ಯಂತ್ರದ ವೇಗ ಹೆಚ್ಚಿಸಿದರು. ನಾಗೇಂದ್ರ ಮುಡಾ ಅಧ್ಯಕ್ಷರಾಗಿದ್ದ ದಿನಗಳನ್ನು ಇಂದಿಗೂ ಸಾಕಷ್ಟು ಮಂದಿ ಸ್ಮರಿಸಿಕೊಳ್ಳುವುದು ಅವರ ಆಡಳಿತ ವೈಖರಿಗೆ ಸಾಕ್ಷಿಯಾಗಿದೆ. ಜನಾನುರಾಗಿ, ಅತ್ಯುತ್ತಮ ಸಂಘಟಕರಾಗಿದ್ದ ಎಲ್.ನಾಗೇಂದ್ರ ಅವರಿಗೆ 2013ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅವಕಾಶ ನೀಡಿತು. ಆ ಚುನಾವಣೆಯಲ್ಲಿ ಪರಾಭವಗೊಂಡರೂ ಅವರ ಆತ್ಮಸ್ಥೈರ್ಯ ಕುಗ್ಗಲಿಲ್ಲ. ಆ ಸಂದರ್ಭದ



ರಾಜಕೀಯ ಪರಿಸ್ಥಿತಿಯಿಂದಷ್ಟೇ ಸೋಲಾಗಿದೆ. ಜನ ತಮ್ಮ ಮನೆ ಮಗನನ್ನು ಕೈ ಬಿಡುವುದಿಲ್ಲ ಎಂಬ ಅಚಲ ನಂಬಿಕೆಯಿಂದ ಚಾಮರಾಜ ಕ್ಷೇತ್ರದ ಜನತೆ ಮುಂದೆ ಹೋಗಿ ಮತ್ತೆ ಅವಕಾಶ ಕೋರಿದರು. ಎಲ್.ನಾಗೇಂದ್ರ ಅವರ ಗೆಲುವಿನ ಸಾಧ್ಯತೆಯ ಬಗ್ಗೆ ವಿಶ್ವಾಸ ಹೊಂದಿದ್ದ ಬಿಜೆಪಿ 2018ರ ಸಾರ್ವತ್ರಿಕ ಚುನಾವಣೆಯಲ್ಲೂ ಅವರಿಗೇ ಟಿಕೆಟ್ ನೀಡಿ, ಪ್ರೋತ್ಸಾಹಿಸಿತು. ಅಂದಿನ ಜಿದ್ದಾಜಿದ್ದಿ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ಪಕ್ಷ ಹಾಗೂ ಜನರಲ್ಲಿದ್ದ ವಿಶ್ವಾಸವನ್ನು ನಿಜವಾಗಿಸಿದರು.



ಕೊರೊನಾ ವಾರಿಯರ್ ಆಗಿ ಸೇವೆ

ಕೊರೊನಾ ಎಲ್ಲರಲ್ಲೂ ಆತಂಕ ಮಡುಗಟ್ಟುವಂತೆ ಕಾಡಿತ್ತು. ಆ ಸಂದರ್ಭದಲ್ಲಿ ಮಾನವೀಯ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸಿದ ಜನಪ್ರತಿನಿಧಿಗಳಲ್ಲಿ ಎಲ್.ನಾಗೇಂದ್ರ ಅವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಜನರಿಗೆ ಧೈರ್ಯ ತುಂಬುವುದರ ಜೊತೆಗೆ ಅವರಿಗೆ ಅಗತ್ಯವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವಲ್ಲಿ ಅವಿರತವಾಗಿ ಶ್ರಮಿಸಿದರು. ಕ್ಷೇತ್ರದ 42 ಸಾವಿರ ಬಡ ಕುಟುಂಬಗಳಿಗೆ ತಾವು ವೈಯಕ್ತಿಕವಾಗಿ ಫುಡ್ ಕಿಟ್ ವಿತರಿಸುವ ಮೂಲಕ ಹಸಿವು ನೀಗಿದರು. ಆಸ್ಪತ್ರೆಗಳಿಗೆ ಅಗತ್ಯವಾಗಿದ್ದ ವೈದ್ಯಕೀಯ ಉಪಕರಣಗಳನ್ನು ಕಲ್ಪಿಸಿಕೊಟ್ಟರು. ಕೋವಿಡ್ ಕೇರ್ ಸೆಂಟರ್‌ಗಳನ್ನು ಹೆಚ್ಚಾಗಿ ಆರಂಭಿಸಿ ಜನರ ಜೀವ ರಕ್ಷಣೆಗೆ ಅವಿರತ ಶ್ರಮಿಸಿದರು. ನೂತನ ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಪಿಕೆಟಿಬಿ, ಜಯದೇವ ಹೃದ್ರೋಗ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ, ಇಎಸ್‌ಐ, ಕೆ.ಆರ್.ಆಸ್ಪತ್ರೆ ಹೀಗೆ ಬಹುತೇಕ ಎಲ್ಲಾ ಆಸ್ಪತ್ರೆಗಳೂ ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿದ್ದರೂ ಅವುಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಜರೂರಿತ್ತು. ಈ ಒಂದು ಹೆಚ್ಚಿನ ಜವಾಬ್ದಾರಿಯೂ ಹೆಗಲೇರಿತ್ತು. ಆದರೂ ವಿಚಲಿತರಾಗದೆ ಮೈಸೂರಿನ ಇತರೆ ಶಾಸಕರು ಹಾಗೂ ಸಂಸದರೊಡಗೂಡಿ ಜನರ ರಕ್ಷಣೆಗೆ ಟೊಂಕಕಟ್ಟಿ ಕೆಲಸ ಮಾಡಿದರು.

ಸಾಮೂಹಿಕ ಉಚಿತ ಲಸಿಕೆ ವ್ಯವಸ್ಥೆ

ಪಡುವಾರಹಳ್ಳಿಯ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಿಗೆ ಲಸಿಕೆ, ಕಾಳಿದಾಸ ರಸ್ತೆಯಲ್ಲಿರುವ ಬೃಂದಾವನ ಆಸ್ಪತ್ರೆಯಲ್ಲಿ ಸಾರ್ವನಿಕರಿಗೆ ಲಸಿಕೆ, ಜಯನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಹೆರಿಗೆ ಆಸ್ಪತ್ರೆಗೆ ಹಾಸಿಗೆಗಳನ್ನು ಕಲ್ಪಿಸುವುದು ಸೇರಿದಂತೆ ವಿವಿಧ ರೀತಿಯ ಸೌಕರ್ಯಗಳನ್ನು ಒದಗಿಸಿದರು. ಕೊರೊನಾ ಸೋಂಕಿನಿಂದಾಗಿ ಮೃತಪಟ್ಟ ಹಲವರ ಕುಟುಂಬದವರಿಗೆ ಸರ್ಕಾರದ ವತಿಯಿಂದ ಪರಿಹಾರ ಕೊಡಿಸಿ ಅವರ ಜೀವನಕ್ಕೆ ನೆರವಾದರು. ಜಿಲ್ಲಾ ಆಸ್ಪತ್ರೆಯ ವೈದ್ಯರ ಬೇಡಿಕೆಯಂತೆ ತಮ್ಮ ಅಭಿಮಾನಿಗಳ ಮೂಲಕ ಔಷಧಿಗಳು, ವೆಂಟಿಲೇಟರ್, ಆಕ್ಸಿಜನ್ ಕಾನ್ಸಂಟ್ರೇಟರ್, ಮಾಸ್ಕ್ ಮತ್ತಿತರ ಅಗತ್ಯ ವಸ್ತುಗಳನ್ನು ಹಸ್ತಾಂತರಿಸಿದರು. ಟಾಸ್ಕ್ ಫೋರ್ಸ್ ಕಮಿಟಿ ಮೂಲಕ ಸೋಂಕು ಪತ್ತೆಗೆ ಮನೆ ಮನೆಗೆ ತೆರಳಿ ಪರೀಕ್ಷೆ ಮಾಡುವ ಕಾರ್ಯಕ್ಕೆ ವೇಗ ನೀಡಿದರು. ಕ್ಷೇತ್ರದಲ್ಲಿ ಕೊರೊನಾದಿಂದ ಮೃತಪಟ್ಟ ಸುಮಾರು 85 ಜನರ ಅವಲಂಬಿತರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಧನಸಹಾಯ ಕಲ್ಪಿಸಿಕೊಟ್ಟರು. ಗೋಕುಲಂ ಬಡಾವಣೆಯ ಅಂತಾರಾಷ್ಟ್ರೀಯ ಯೂತ್ ಹಾಸ್ಟೆಲ್‌ನಲ್ಲಿ ರಾಜ್ಯದಲ್ಲಿಯೇ ಮಾದರಿ ಮಹಿಳಾ ಕೋವಿಡ್ ಕೇರ್ ಸೆಂಟರ್ ಆರಂಭಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಕೊಡಗು ಗೌಡ ಸಮಾಜ, ಭೈರವೇಶ್ವರ ಶಾಲೆ, ಕುಂಬಾರಕೊಪ್ಪಲು ಸರ್ಕಾರಿ ಪ್ರೌಢಶಾಲೆ ಸೇರಿದಂತೆ ಕ್ಷೇತ್ರದ ಹಲವೆಡೆ ಲಸಿಕೆ ಅಭಿಯಾನ ನಡೆಸುವ ಮೂಲಕ ಜನರ ಜೀವ ರಕ್ಷಣೆಗೆ ಶ್ರಮಿಸಿದರು. ಕ್ಷೇತ್ರದ ಪ್ರತಿ ರಸ್ತೆಗೂ ರಾಸಾಯನಿಕ ಔಷಧಿ ಸಿಂಪಡಣೆ, ಕಸದ ವಿಲೇವಾರಿ, ಸಾಂತ್ವನ ಕೇಂದ್ರಗಳನ್ನು ಸ್ಥಾಪಿಸುವುದು, ಕೊಳಗೇರಿಗಳ ಕುಟುಂಬಗಳಿಗೆ ಉಚಿತ ಹಾಲು ಸರಬರಾಜು, ಸಾವಿರಾರು ಮಾಸ್ಕ್ ವಿತರಣೆ ಹೀಗೆ ಕೊರೊನಾ ವೇಳೆ ಸೈನಿಕನಂತೆ ಕೆಲಸ ಮಾಡಿದರು. ಜೊತೆಗೆ ಕೊರೊನಾ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವೈದ್ಯರು, ಪೌರಕಾರ್ಮಿಕರು, ಸಿಬ್ಬಂದಿಯನ್ನು ಆತ್ಮೀಯವಾಗಿ ಅಭಿನಂದಿಸಿ, ಕೃತಜ್ಞತೆ ಸಲ್ಲಿಸಿದರು.



ಶಾಸಕ ನಾಗೇಂದ್ರರಿಂದ ಜನರ ಕುಶಲೋಪರಿ



ಶಾಸಕ ನಾಗೇಂದ್ರರಿಂದ ವೈದ್ಯಕೀಯ ನೆರವು



ಶಾಸಕ ನಾಗೇಂದ್ರರಿಂದ ಸಹಬಾಳ್ವೆಯ ದಿಟ್ಟ ಸಂದೇಶ



ಅಭಿವೃದ್ಧಿಗೆ ಟೊಂಕ ಕಟ್ಟಿದ ಜನಸೇವಕ

ಶಾಸಕರಾಗಿ ಆಯ್ಕೆಯಾದ ಎಲ್.ನಾಗೇಂದ್ರ ಅವರು, ಜನರಿಗೆ ನೀಡಿದ್ದ ಭರವಸೆ ಈಡೇರಿಸುವ ನಿಟ್ಟಿನಲ್ಲಿ ಟೊಂಕ ಕಟ್ಟಿ ನಿಲ್ಲುವ ಮೂಲಕ ಜನರ ವಿಶ್ವಾಸ ಹೆಚ್ಚಿಸಿದರು. ಆರಂಭದಲ್ಲಿ ಸರ್ಕಾರ ರಚನೆಯ ಪ್ರಹಸನದಿಂದ ಅನುದಾನ ಪಡೆದು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಕಷ್ಟಸಾಧ್ಯವಾಗಿತ್ತು. ನಂತರದಲ್ಲಿ ಬಿಜೆಪಿ ಸರ್ಕಾರ ರಚನೆಯಾದರೂ ಅದರ ಬೆನ್ನ ಹಿಂದೆಯೇ ಕೊರೊನಾ ವ್ಯಾಪಿಸಿತು. ಪರಿಣಾಮ ಕಳೆದೆರಡು ವರ್ಷವೂ ಅಭಿವೃದ್ಧಿ ಮರೀಚಿಕೆಯಾಯಿತು. ನಂತರದಲ್ಲಿ ಅತಿವೃಷ್ಟಿಯಿಂದ ಭಾರೀ ಅವಾಂತರವೇ ಸೃಷ್ಟಿಯಾಯಿತು. ಹೀಗೆ ಈವರೆಗೂ ಒಂದಿಲ್ಲೊಂದು ಸಮಸ್ಯೆಗಳು ಎದುರಾಗುತ್ತಿದ್ದರೂ ಚಾಮರಾಜ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿರುವುದು ವಿಶೇಷ. ಸಂದಿಗ್ಧತೆ ನಡುವೆಯೂ ಸರ್ಕಾರದಿಂದ ತಮಗೆ ಸಿಗುವ ಅನುದಾನ, ನಗರಪಾಲಿಕೆ ಮೂಲಕ ದಕ್ಕುವ ಅನುದಾನಗಳಲ್ಲಿ ಮೂಲಸೌಕರ್ಯದ ಅಭಿವೃದ್ಧಿಗೆ ಆದ್ಯತೆ ನೀಡಿ ಸಾಕಷ್ಟು ಕೆಲಸ ಮಾಡಿದ್ದಾರೆ. ಹಲವು ಕಾಮಗಾರಿಗಳು ಮುಗಿದಿದ್ದು, ಮತ್ತಷ್ಟು ಪ್ರಗತಿ ಹಂತದಲ್ಲಿವೆ. ಕ್ಷೇತ್ರದ ಬಹುತೇಕ ವಾರ್ಡ್‌ಗಳಲ್ಲೂ ಒಂದಿಲ್ಲೊಂದು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಅಗತ್ಯ ಅನುದಾನವೂ ಸಿದ್ಧವಿದೆ. ಮಳೆ ಬಿಡುವು ನೀಡಿದಾಕ್ಷಣ ಏಕಕಾಲಕ್ಕೆ ಹಲವು ಕಾಮಗಾರಿಗಳು ಆರಂಭವಾಗಲಿವೆ.



Promotional Feature

ಚಾಮರಾಜ ಕ್ಷೇತ್ರದಲ್ಲಿ ಅಭಿವೃದ್ಧಿಯ ಝುರಿ...

ಮೈಸೂರಿನ ಪ್ರತಿಷ್ಠಿತ ಚಾಮರಾಜ ವಿಧಾನಸಭಾ ಕ್ಷೇತ್ರವನ್ನು ಮಾಜಿ ಸಚಿವ ದಿ.ಕೆ.ಪುಟ್ಟಸ್ವಾಮಿ, ಬಿ.ಎನ್.ಕೆಂಗೇಗೌಡ. ಎಚ್.ಕೆಂಪೇಗೌಡ, ಪಿ.ಎಂ.ಚಿಕ್ಕಬೋರಯ್ಯ ಮತ್ತಿತರರು ಪ್ರತಿನಿಧಿಸಿದ್ದಾರೆ. ಜನತಾ ಪರಿವಾರದ ಒಡಕಿನಿಂದ ಬೇರೆ ಪಕ್ಷಗಳ ಅಭ್ಯರ್ಥಿಗಳು ಆಯ್ಕೆಯಾಗುತ್ತಿದ್ದ ಈ ಕ್ಷೇತ್ರದಲ್ಲಿ 1994ರಿಂದ ಸತತ ನಾಲ್ಕು ಬಾರಿ ಎಚ್.ಎಸ್.ಶಂಕರಲಿಂಗೇಗೌಡರ ಗೆಲುವಿನ ಮೂಲಕ ಇಲ್ಲಿ ಕಮಲ ಅರಳಿದೆ. ಈ ಕ್ಷೇತ್ರದಲ್ಲಿ ಒಕ್ಕಲಿಗರ ಪ್ರಾಬಲ್ಯ ಹೆಚ್ಚಿದ್ದು, ಬ್ರಾಹ್ಮಣರು, ವೀರಶೈವ–ಲಿಂಗಾಯತರು, ಕುರುಬರು, ಮುಸ್ಲಿಮರು, ದಲಿತರು, ಮುಸ್ಲಿಂ, ಕ್ರೈಸ್ತರು ಹೀಗೆ ಸರ್ವ ಜನಾಂಗದವರೂ ಇದ್ದಾರೆ. ಮಿಗಿಲಾಗಿ ಈ ಕ್ಷೇತ್ರವನ್ನು ಸುಶಿಕ್ಷಿತರ ಕ್ಷೇತ್ರ ಎಂದೂ ಗುರುತಿಸಲಾಗುತ್ತದೆ. ಇದೀಗ ಕ್ಷೇತ್ರದ ಪುತ್ರ ಎಲ್.ನಾಗೇಂದ್ರ ಶಾಸಕರಾಗಿ ಮತ್ತೆ ಬಿಜೆಪಿ ಭದ್ರಕೋಟೆ ಮಾಡಿಕೊಂಡಿದ್ದಲ್ಲದೆ ಅಭಿವೃದ್ಧಿಯ ಝುರಿ ಹರಿಸಿದ್ದಾರೆ. ಸುಮಾರು 30 ವರ್ಷಗಳಿಂದ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಾಗಿರುವ ಇವರು ನಾಯಕರಾಗಿ ಬೆಳೆದರೂ ತಳಹಂತದ ಕಾರ್ಯಕರ್ತರೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ. ಬೇರು ಮಟ್ಟದಿಂದಲೇ ಪಕ್ಷ ಸಂಘಟಿಸಿ, ಸಣ್ಣಪುಟ್ಟ ಒಡಕುಗಳನ್ನು ಅಳಿಸುವಲ್ಲಿ ಯಶಸ್ವಿಯಾಗಿದ್ದಾರೆ. 1972ರಿಂದಲೂ ಚಾಮರಾಜ ಕ್ಷೇತ್ರದಿಂದ ಆಯ್ಕೆಯಾದ ಯಾವ ಪಕ್ಷದ ಶಾಸಕರಿಗೂ ಸಚಿವ ಸ್ಥಾನ ಲಭಿಸಿಲ್ಲ. ಸದ್ಯ ಈ ಬಗ್ಗೆ ತಲೆಕೆಡಿಸಿಕೊಳ್ಳದೆ ಎಲ್.ನಾಗೇಂದ್ರ ಅವರು ಜನಸೇವೆಯಲ್ಲಿ ನಿರತರಾಗಿದ್ದಾರೆ.







ಮೈಸೂರಿನ ಚಾಮರಾಜ ಕ್ಷೇತ್ರದಾದ್ಯಂತ ಶುದ್ಧ ಕುಡಿಯುವ ನೀರಿನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಈಗ ಎಲ್ಲರಿಗೂ ಶುದ್ಧ ಜೀವಜಲ ಲಭ್ಯವಾಗಿದೆ.

ಚಾಮರಾಜ ಕ್ಷೇತ್ರದಾದ್ಯಂತ ಹಿಂದೆ ಕೇಳರಿಯದಂತಹ ಅಭಿವೃದ್ಧಿ ಕಾರ್ಯಗಳಾಗಿವೆ.ನೂರಾರು ಕೋಟಿ ಅನುದಾನದಡಿ ಆರಂಭಿಸಲಾಗಿರುವ ಯೋಜನೆಗಳು ಭರದಿಂದ ಸಾಗಿವೆ.

> ಶಾಸಕನಾಗಿ ಆಯ್ಕೆಯಾದ ದಿನವೇ ಜನಸೇವೆಗೆ ಕಂಕಣಕಟ್ಟಿದ್ದೇನೆ. ಪ್ರತಿನಿತ್ಯವೂ ಒಂದಲ್ಲಾ ಒಂದು ಜನಪರ ಕಾರ್ಯ ಮಾಡುವ ಶಪತ ಮಾಡಿದ್ದೇನೆ. ಚಾಮರಾಜ ಕ್ಷೇತ್ರದ ಜನ ಯಾವುದೇ ರೀತಿಯ ಸಮಸ್ಯೆಯಿಂದ ಬಳಲಬಾರದು ಎಂಬುದು ನನ್ನ ಉದ್ದೇಶವಾಗಿದ್ದು, ಜನರು ನನ್ನ ಎಲ್ಲಾ ಅಧಿಕಾರವನ್ನು ಅವರಿಗಾಗಿ ವಿನಿಯೋಗಿಸುವ ಕೆಲಸ ಸದಾ ಮಾಡುತ್ತೇನೆ.
>
> –ಎಲ್.ನಾಗೇಂದ್ರ
> ಚಾಮರಾಜ ಕ್ಷೇತ್ರದ ಶಾಸಕರು

ಪಾರಂಪರಿಕ ಮಾದರಿ ಮರು ನಿರ್ಮಾಣಕ್ಕೆ ಯತ್ನ

ಚಾಮರಾಜ ಕ್ಷೇತ್ರ ವ್ಯಾಪ್ತಿಯ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮಳಿಗೆಯ ಮೇಲ್ಛಾವಣಿ ಕುಸಿದು ಪ್ರಾಣಹಾನಿ ಆಗಿದ್ದು, ದೇವರಾಜ ಮಾರುಕಟ್ಟೆ ದ್ವಾರದ ಗೋಪುರ ಕುಸಿದ ದುರ್ಘಟನೆ ಜನರ ಮನಸ್ಸಿನಲ್ಲಿ ಮಾಸಿಲ್ಲ. ನಗರದ ಹೃದಯ ಭಾಗದಲ್ಲಿರುವ ಈ ಎರಡು ಕಟ್ಟಡಗಳು ವಿರೂಪಗೊಂಡು ವರ್ಷಗಳೇ ಕಳೆದಿವೆ. ಇವುಗಳ ಪುನರ್ ನಿರ್ಮಾಣಕ್ಕೆ ನಾಗೇಂದ್ರ ಭಗೀರಥ ಪ್ರಯತ್ನ ಹಾಕಿದ್ದಾರೆ. ಹಾಗೆಯೇ ಸುತ್ತಮುತ್ತಲ ಜಿಲ್ಲೆಗಳ ಬಡ ರೋಗಿಗಳಿಗೆ ಆರೋಗ್ಯ ಸೇವೆ ನೀಡುತ್ತಿರುವ ಕೃಷ್ಣರಾಜ ಆಸ್ಪತ್ರೆ ಕಟ್ಟಡವೂ ಸುಸ್ಥಿತಿಯಲ್ಲಿಲ್ಲ. ಈ ಬಗ್ಗೆ ಶಾಸಕ ಎಲ್.ನಾಗೇಂದ್ರ ಸರ್ಕಾರದ ಗಮನ ಸೆಳೆದಿದ್ದರು. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಸೇರಿದ ಆಸ್ಪತ್ರೆ ಕಟ್ಟಡಗಳ ದುರಸ್ತಿ ಹಾಗೂ ನವೀಕರಣಕ್ಕೆ 85.98 ಕೋಟಿ ರೂ., ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮಗೊಳಿಸಿ ಹೊಸದಾಗಿ ಪಾರಂಪರಿಕ ಶೈಲಿಯಲ್ಲಿ ಮರು ನಿರ್ಮಾಣ ಮಾಡಲು 37 ಕೋಟಿ ರೂ. ಹಾಗೂ ದೇವರಾಜ ಮಾರುಕಟ್ಟೆ ಮರು ನಿರ್ಮಾಣಕ್ಕೆ 98 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದರು. ಜನರ ಹಿತದೃಷ್ಟಿಯಿಂದ ಈ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ನಿಗದಿಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಆರೋಗ್ಯ ಸಚಿವ ಡಾ.ಕೆ.ಸುಧಾಕರ್‌ಗೆ ಮನವಿ ಸಲ್ಲಿಸಿದ್ದರು. ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಕೆ.ಆರ್.ಆಸ್ಪತ್ರೆ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿದ್ದಾರೆ.

ಜನರಿಗೆ ಶುದ್ಧ ಕುಡಿಯುವ ನೀರು

ಯಾದವಗಿರಿ ರಾಮಣ್ಣ ವೃತ್ತದಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ ವತಿಯಿಂದ 60 ಲಕ್ಷ ರೂ. ಮೊತ್ತದಲ್ಲಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕರು ಲೋಕಾರ್ಪಣೆಗೊಳಿಸಿದ್ದಾರೆ. ತಿಲಕ್‌ನಗರ ಫರೂಕಿಯಾ ಡೆಂಟಲ್ ಕಾಲೇಜು ಸಮೀಪ, ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನ ಆವರಣ, ಜಯಲಕ್ಷ್ಮಿಪುರಂ ಸರ್ಕಾರಿ ಪ್ರೌಢಶಾಲೆ ಸಮೀಪ, ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಪಕ್ಕ, ಮಂಚೇಗೌಡನಕೊಪ್ಪಲು ಸಂಗಂ ವೃತ್ತ, ಕುಂಬಾರಕೊಪ್ಪಲು ಕೊನೆ ಬಸ್ ನಿಲ್ದಾಣದ ಬಳಿ, ಮೇಟಗಳ್ಳಿ ಬಸ್ ನಿಲ್ದಾಣದ ಬಳಿ ಹೀಗೆ ಕ್ಷೇತ್ರದ ಹಲವೆಡೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಮೂಲಕ ಜನರ ಆರೋಗ್ಯದ ಮೇಲಿರುವ ತಮ್ಮ ಕಾಳಜಿ ಮೆರೆದಿದ್ದಾರೆ.



ಕೆ.ಆರ್.ವೃತ್ತಕ್ಕೆ ಪಾರಂಪರಿಕ ವಿದ್ಯುತ್ ದೀಪ ಅಳವಡಿಕೆ

ಜಟಿಲ ಸಮಸ್ಯೆಗೆ ಸೂಕ್ಷ್ಮ ಪರಿಹಾರ

ಮೈಸೂರು ನಗರದ ಪ್ರಮುಖ ರಸ್ತೆಗಳಲ್ಲಿ ಒಂದಾದ ಇರ್ವಿನ್ ರಸ್ತೆ ಅಗಲೀಕರಣ ಯೋಜನೆಯನ್ನು ಕೈಗೆತ್ತಿಕೊಂಡು ಪ್ರಕ್ರಿಯೆ ಆರಂಭಿಸಲಾಯಿತು. ಅದಕ್ಕೆ ಅಗತ್ಯವಾದ ಸ್ಥಳಾವಕಾಶಕ್ಕಾಗಿ ಇಕ್ಕೆಲಗಳಲ್ಲಿದ್ದ ಕಟ್ಟಡಗಳ ಒಂದಿಷ್ಟು ಭಾಗವನ್ನು ತೆರವು ಮಾಡಿ ಮಾಲೀಕರಿಗೆ ಪರಿಹಾರ ನೀಡಲಾಯಿತು. ಆದರೆ ಧಾರ್ಮಿಕ ಕಟ್ಟಡವೊಂದರ ತೆರವುಗೊಳಿಸುವುದು ಅತ್ಯಂತ ಸೂಕ್ಷ್ಮದ ಕೆಲಸವಾಗಿತ್ತು. ಧಾರ್ಮಿಕ ಕೇಂದ್ರದವರು ನ್ಯಾಯಾಲಯದ ಮೊರೆ ಹೋದ ಕಾರಣ ಸಮಸ್ಯೆ ಮತ್ತಷ್ಟು ಜಟಿಲವಾಗಿತ್ತು. ಪರಿಣಾಮ ವರ್ಷ ಕಾಲ ಕಾಮಗಾರಿ ಪೂರ್ಣವಾಗಲು ಸಾಧ್ಯವಾಗಿರಲಿಲ್ಲ. ಇದರಿಂದ ಸಂಚಾರಕ್ಕೂ ತೀವ್ರ ಅಡ್ಡಿಯುಂಟಾಗಿತ್ತು. ಈ ರಸ್ತೆಯೂ ಚಾಮರಾಜ ಕ್ಷೇತ್ರದ ವ್ಯಾಪ್ತಿಗೆ ಸೇರುವ ಹಿನ್ನೆಲೆಯಲ್ಲಿ ಶಾಸಕ ಎಲ್. ನಾಗೇಂದ್ರ ಸಮಸ್ಯೆ ಬಗೆಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಧಾರ್ಮಿಕ ಕೇಂದ್ರಕ್ಕೆ ಸಂಬಂಧಪಟ್ಟವರೊಂದಿಗೆ ಮಾತನಾಡಿ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್, ಇತರೆ ಶಾಸಕರ ಸಹಕಾರದಿಂದ ಸೂಕ್ತ ಪರಿಹಾರವನ್ನು ಕಲ್ಪಿಸಿಕೊಟ್ಟು ಧಾರ್ಮಿಕ ಕೇಂದ್ರದ ಗೋಡೆ ತೆರವುಗೊಳಿಸುವಲ್ಲಿ ಯಶಸ್ವಿಯಾದರು. ಸಂಬಂಧಪಟ್ಟವರೇ ಗೋಡೆಯನ್ನು ತೆರವುಗೊಳಿಸಿದರು. ಹಲವು ವರ್ಷಗಳ ಕಾಲ ಮುಂದುವರೆಯಬಹುದಾಗಿದ್ದ ಸಮಸ್ಯೆ ಸಣ್ಣ ಗದ್ದಲವೂ ಇಲ್ಲದೆ ಸೌಹಾರ್ದಯುತವಾಗಿ ಬಗೆಹರಿಯುವಲ್ಲಿ ಶಾಸಕ ಎಲ್.ನಾಗೇಂದ್ರ ಮುಖ್ಯರಾದರು. ಈ ರಸ್ತೆ ಅಗಲೀಕರಣಕ್ಕೆ ತನ್ನೂರು ಕೆ.ಜಿ.ಕೊಪ್ಪಲು–ಜಯನಗರ ಮೂಲಕ ಹಾದುಹೋಗುವ ರಸ್ತೆ ಅಭಿವೃದ್ಧಿಯೂ ಸ್ಫೂರ್ತಿಯಾಗಿದೆ. ಪ್ರತಿಷ್ಠಿತ ಬಡಾವಣೆಗೆ ಸಂಪರ್ಕ ಕಲ್ಪಿಸುವ ನ್ಯೂ ಕಾಂತರಾಜ ಅರಸ್ ರಸ್ತೆ ತಮ್ಮ ಗ್ರಾಮದಲ್ಲಿ ಕಿಷ್ಕಿಂಧೆಯಂತಿದ್ದು, ನಿತ್ಯವೂ ವಾಹನ ಚಾಲಕರು–ಸವಾರರು ಪರದಾಡುತ್ತಿದ್ದರು. ಇವರು ಕಾರ್ಪೊರೇಟರ್ ಆಗಿದ್ದಾಗ ವಿಶಾಲ ರಸ್ತೆಯಾಗಿ ಅಭಿವೃದ್ಧಿಪಡಿಸಿದ್ದರು.

ಫಲಾನುಭವಿಗಳಿಗೆ ಹಕ್ಕುಪತ್ರ

ಕರಕುಶಲನಗರದಲ್ಲಿರುವ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಒಡೆತನದ ಬಹುಕಲಾ ಸಂಕೀರ್ಣದಲ್ಲಿ ಡಿಎಪಿ ಯೋಜನೆಯಡಿ ಮನೆ ಪಡೆದಿರುವ 64 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಮೂಲಕ ಅವರ ನೆಲೆಗೆ ಭದ್ರತೆ ಕಲ್ಪಿಸಿದರು. ಆಶ್ರಯ ಯೋಜನೆ ಫಲಾನುಭವಿಗಳಿಗೆ ವಸತಿ ಸಮುಚ್ಛಯ ನಿರ್ಮಾಣಕ್ಕೆ ಸೂಕ್ತ ಜಾಗ ಗುರುತಿಸಿ ಪರಿಶೀಲನೆ ನಡೆಸಿದ್ದಾರೆ. ಮಂಜುನಾಥಪುರ ಹಾಗೂ ಕುಂಬಾರಕೊಪ್ಪಲು ಗ್ರಾಮದ ನಿಗದಿತ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ನಿಟ್ಟಿನಲ್ಲಿ ಆ ಭೂಮಿ ಒಡೆತನವನ್ನು ಸ್ಲಂ ಬೋರ್ಡ್‌ಗೆ ಹಸ್ತಾಂತರಿಸುವ ಕೆಲಸ ಮಾಡಿದ್ದಾರೆ. ಹೀಗೆ ಕ್ಷೇತ್ರದಲ್ಲಿರುವ ನಿರಾಶ್ರಿತರಿಗೆ ಸೂರು ಕಲ್ಪಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿರುವ ಶಾಸಕ ಎಲ್.ನಾಗೇಂದ್ರ ಅವರೆಂದರೆ ಬಡವರಿಗೆ ಇನ್ನಿಲ್ಲದ ಪ್ರೀತಿ.



ಅಶಕ್ತರಿಗೆ ಪಿಂಚಣಿ, ಶಿಕ್ಷಿತರಿಗೆ ಲ್ಯಾಪ್‌ಟಾಪ್

ಶಾಸಕ ಎಲ್.ನಾಗೇಂದ್ರ ಅವರು ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಪದವಿ ಕಾಲೇಜಿಗೆ ಸಾಕಷ್ಟು ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅಲ್ಲದೆ ಸರ್ಕಾರದ ವತಿಯಿಂದ ಉಚಿತವಾಗಿ 1,400 ವಿದ್ಯಾರ್ಥಿನಿಯರಿಗೆ ತಲಾ 26 ಸಾವಿರ ರೂ. ಮೌಲ್ಯದ ಲ್ಯಾಪ್‌ಟಾಪ್ ವಿತರಣೆ ಮಾಡಿದ್ದಾರೆ. ಕುಂಬಾರಕೊಪ್ಪಲು ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಸಾಮಾಜಿಕ ಭದ್ರತೆ ಯೋಜನೆಗಳಡಿ ಪಿಂಚಣಿ ವ್ಯವಸ್ಥೆ ಮಾಡಿಸಿದ್ದಾರೆ. ಸಂಧ್ಯಾ ಸುರಕ್ಷಾ, ಹಿರಿಯ ನಾಗರಿಕ ವೇತನ. ವಿಧವಾ ವೇತನ, ಮನಸ್ವಿನಿ, ವಿಶೇಷ ಚೇತನರ ಮಾಸಿಕ ಪಿಂಚಣಿ ಹೀಗೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವ ಮೂಲಕ ಅವರ ಸ್ವಾವಲಂಬನೆ ಬದುಕಿಗೆ ನೆರವಾಗಿದ್ದಾರೆ.

ಕ್ಷೇತ್ರಕ್ಕೆ ಹರಿದು ಬಂತು 566 ಕೋಟಿ ಅನುದಾನ

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಎಸ್.ಎಫ್.ಸಿ ಅನುದಾನದಲ್ಲಿ ರಸ್ತೆ ಅಭಿವೃದ್ಧಿ, ಚರಂಡಿ ಅಭಿವೃದ್ಧಿ, ಪುಟ್‌ಪಾತ್ ಅಭಿವೃದ್ಧಿ, ಬಸ್ ಶೆಲ್ಟರ್ ನಿರ್ಮಾಣ, ಸಮುದಾಯಭವನ ನಿರ್ಮಾಣ, ಆಟೋ ನಿಲ್ದಾಣಗಳ ನಿರ್ಮಾಣ, ಉದ್ಯಾನವನಗಳ ಅಭಿವೃದ್ದಿ, ಡೆಕ್ ಸ್ಲ್ಯಾಬ್ ನಿರ್ಮಾಣ, ಲೋಕೋಪಯೋಗಿ ಇಲಾಖೆಯ 2018–19 ನೇ ಸಾಲಿನ ಅನುದಾನದಲ್ಲಿ ಎಸ್.ಸಿ.ಪಿ ಟಿ.ಎಸ್.ಪಿ ಪರಿಶಿಷ್ಟ ಜಾತಿ ಹಾಗೂ ವರ್ಗದವರ ಕಾಲೋನಿಗಳಲ್ಲಿ ರಸ್ತೆ, ಚರಂಡಿ ಇನ್ನಿತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಸಮುದಾಯ ಭವನಗಳು, ಶಾಲಾ ಕೊಠಡಿಗಳು, ಕಾಂಪೌಂಡ್ ನಿರ್ಮಾಣ, ಅಂಗವಿಕಲರಿಗೆ ಅಗತ್ಯ ಉಪಕರಣಗಳ ವಿತರಣೆ, ಆಟದ ಮೈದಾನ, ಕ್ರೀಡಾಂಗಣ ಅಭಿವೃದ್ಧಿ, ಗ್ರಂಥಾಲಯ ಕಟ್ಟಡ ನಿರ್ಮಾಣ, ಬಸ್ ಶೆಲ್ಟರ್ ನಿರ್ಮಾಣ, ಆಟೋ ನಿಲ್ದಾಣಕ್ಕೆ ಶೆಲ್ಟರ್, ಜೆಎನ್‌ಎನ್‌ನರ್ಮ್ ಸರ್ವರಿಗೂ ಸೂರು ಯೋಜನೆಯಡಿ ಯಾದವಗಿರಿ, ನರ್ಸ್ ಕ್ವಾಟ್ರಸ್, ಸಾಮಿಲ್, ಮೇಟಗಳ್ಳಿ, ಕೊಳಚೆ ಪ್ರದೇಶಗಳಲ್ಲಿ 655 ಮನೆಗಳ ನಿರ್ಮಾಣ, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ನಗರಾಭಿವೃದ್ಧಿ ಇಲಾಖೆಯ ಅನುದಾನದಿಂದ ಗೋಕುಲಂ, ಬೃಂದಾವನ, ಮಂಡಿಮೊಹಲ್ಲ, ದೇವರಾಜ ಅರಸು ರಸ್ತೆ, ಸಂತೇಪೇಟೆ, ಚಿಕ್ಕಗಡಿಯಾರ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ದುರಸ್ತಿ, ಮರುನಿರ್ಮಾಣ ಕಾಮಗಾರಿ, ಲೋಕೋಪಯೋಗಿ ಇಲಾಖೆ ಅನುದಾನದಿಂದ ದೇವರಾಜ ಮೊಹಲ್ಲಾ, ಕ್ಷತ್ರಿಯ ಮೊಹಲ್ಲಾ ರಸ್ತೆಗಳು, ದೇವರಾಜ ಅರಸು ರಸ್ತೆ, ಶ್ರೀನಿವಾಸ ದೇವಸ್ಥಾನ ರಸ್ತೆ, ಸುಲ್ತಾನ ಪಾರ್ಕ್ ರಸ್ತೆ, ಬೆಂಕಿ ನವಾಬ್ ರಸ್ತೆಯಿಂದ ಮರಾಠ ಮಂದಿರ ರಸ್ತೆಗಳು ಸೇರಿದಂತೆ ವಿವಿಧ ಅನುದಾನಗಳ ಮೂಲಕ ಒಟ್ಟು 565.82 ಕೋಟಿ ರೂ. ವೆಚ್ಚದ ಹಲವು ಕಾಮಗಾರಿಗಳನ್ನು ನಡೆಸಲಾಗಿದೆ.







ಬನ್ನಿಮಂಟಪ ಸಿ-ಲೇಔಟ್‌ನಲ್ಲಿ ರಸ್ತೆ ಡಾಂಬರೀಕರಣ, ಪಾರ್ಕ್ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ಮೈಸೂರು, ಸೆ. 10– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ನಗರಪಾಲಿಕೆ ವಾರ್ಡ್ ನಂ.17 ರ ಬನ್ನಿಮಂಟಪ ಸಿ-ಲೇಔಟ್, 4ನೇ ಮೇನ್, 4ನೇ ಕ್ರಾಸ್ ಕೌಸರ್ ಮಸೀದಿ ಹಿಂಭಾಗದ ರಸ್ತೆ ಡಾಂಬರೀಕರಣ ಮತ್ತು ಪಾರ್ಕ್ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ವಾರ್ಡ್ ನಂ.17 ರ ನಗರಪಾಲಿಕೆ ಸದಸ್ಯೆ ಹಾಜಿಯ ರೇಷ್ಮಾಬಾನು, ರೆಹಮಾನ್, ನಾಸಿರ್, ಸಮಾಜ ಸೇವಕ ಹಾರೂನ್ ರಷೀದ್, ಪ್ರೊ ನಜಿಬಾನ್, ಮೊಹಮ್ಮದ್ ಮುಮ್ತಾಜ್ ಅಹಮದ್, ಮೊಹಮ್ಮದ್ ಖಲೀಲ್ ಉರ್ ರೆಹಮಾನ್ ಅಶ್ರಫಿ, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ರಿಯಾಜ್ ಅಹಮದ್, ಅಬ್ಬುಲ್ ಲತೀಫ್, ಇಮ್ರಾನ್ ಮತ್ತು ನಿವಾಸಿಗಳು, ನಗರಪಾಲಿಕೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರದ ಷಡ್ಯಂತರ ಆರೋಪ ಎಸ್‌ಡಿಪಿಐ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಸೆ.10(ಎಂಟಿವೈ)– ರಾಜ್ಯದ ಬಿಜೆಪಿ ಸರ್ಕಾರ ಎಸ್‌ಡಿಪಿಐ ವಿರುದ್ಧ ಷಡ್ಯಂತ್ರ ರೂಪಿಸುತ್ತಿದೆ ಎಂದು ಆರೋಪಿಸಿ ಎಸ್‌ಡಿಪಿಐ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು. ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಿಲಾದ್ ಪಾರ್ಕ್ ಬಳಿ ಪ್ರತಿಭಟನೆ ನಡೆಸಿದ ಎಸ್‌ಡಿಪಿಐ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಸರ್ಕಾರ ಎಸ್‌ಡಿಪಿಐ ಕಚೇರಿ ಹಾಗೂ ಕಾರ್ಯಕರ್ತರ ಮೇಲೆ ದಾಳಿ ಮಾಡುತ್ತಿದೆ. ಕೆಲ ದಿನಗಳ ಹಿಂದೆ ಎಸ್‌ಡಿಪಿಐ ಕಾರ್ಯದರ್ಶಿ ರಿಯಾಜ್ ಪಂಗಿಪೆಟೆ ಅವರ ಮನೆಯ ಮೇಲಿನ ದಾಳಿಯೂ ಕೂಡ ಉದ್ದೇಶಪೂರ್ವಕವಾಗಿದೆ. ಇಂತಹ ದಾಳಿಗಳು ರಾಜಕೀಯ ದ್ವೇಷ ಹಾಗೂ ಸರ್ಕಾರಿ ಪ್ರಾಯೋಜಕತ್ವದ ಸೇಡಿನ ರಾಜಕಾರಣವಾಗಿದೆ. ಪ್ರವೀಣ್ ನೆಟ್ಟಾರು ಹತ್ಯೆ ವಿಚಾರವಾಗಿ ಸರಕಾರ ಸೇಡಿನ ಹಾಗೂ ಕುತಂತ್ರದ ಸಂಚು ರೂಪಿಸುತ್ತಿದ್ದರೆ, ಕೆಲ ಮಾಧ್ಯಮಗಳು ಸುಳ್ಳು ಮಾಹಿತಿ ಪ್ರಸಾರ ಮಾಡುತ್ತಿವೆ. ಎನ್‌ಐಎ ನಡೆಸುತ್ತಿರುವ ದಾಳಿಗಳು ಸರ್ಕಾರಿ ಪ್ರಾಯೋಜಕತ್ವದ್ದಾಗಿದೆ. ಎನ್‌ಐಎಯ ಅಧಿಕೃತ ಹೇಳಿಕೆ ಹೊರಬರುವ ಮುನ್ನವೇ ಎಸ್‌ಡಿಪಿಐ ವಿರುದ್ಧ ಕಪೋಲಕಲ್ಪಿತ ವರದಿಗಳನ್ನು ಬಿತ್ತರಿಸಲಾಗುತ್ತಿದೆ. ಪ್ರವೀಣ್ ನೆಟ್ಟಾರು ಹತ್ಯೆಗೂ, ನಮಗೂ (ಎಸ್‌ಡಿಪಿಐ) ಯಾವುದೇ ಸಂಬಂಧವಿಲ್ಲ ಎಂದು ಪ್ರತಿಭಟನಾಕಾರರು ಸ್ಪಷ್ಟಪಡಿಸಿದರು. ಪ್ರತಿಭಟನೆಯಲ್ಲಿ ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ಎನ್.ದೇವನೂರು ಪುಟ್ಟನಂಜಯ್ಯ, ಜಿಲ್ಲಾಧ್ಯಕ್ಷ ರಫತ್ ಖಾನ್, ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಸಫಿವುಲ್ಲ, ರಾಜ್ಯ ಸಮಿತಿ ಸದಸ್ಯ ಅಜ್ಜದ್ ಖಾನ್, ಮುಖಂಡರಾದ ಎಸ್.ಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ರೋಟರಿ ಐವರಿ ಸಿಟಿ ವತಿಯಿಂದ ಸಾಧಕ ಶಿಕ್ಷಕರಿಗೆ ಗೌರವ ಸಮರ್ಪಣೆ



ಮೈಸೂರು, ಸೆ. 10– ಮೈಸೂರಿನ ರೋಟರಿ ಐವರಿ ಸಿಟಿ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ವನಿತಾ ಸದನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕ ಶಿಕ್ಷಕರನ್ನು ಸನ್ಮಾನಿಸಲಾಯಿತು. ಈ ವೇಳೆ ಶಿಕ್ಷಣ ತಜ್ಞ ವೆಂಕೋಬರಾವ್, ರೋಟರಿ ಐವರಿ ಸಿಟಿಯ ಅಧ್ಯಕ್ಷ ಎಂ.ಎನ್.ರಮೇಶ್, ರೊ. ಸುನೀಲ್ ಎಲ್ ಬಾಳಿಗ, ರೊ. ಮೋಹನ್ ಕುಂಟೆ, ರೊ. ಎಸ್.ಬಾಲಚಂದ್ರ, ಕಾರ್ಯದರ್ಶಿ ರೊ. ಮುತ್ತುಕುಮಾರನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮೈಸೂರು ನಗರದ ವಿವಿಧ ಶಾಲಾ ಕಾಲೇಜಿನಲ್ಲಿ ಸಾಧನೆಗೈದ ಶಿಕ್ಷಕರುಗಳಾದ ಶಿಕ್ಷಣ ತಜ್ಞ ವೆಂಕೋಬರಾವ್, ಜಯಚಾಮರಾಜೇಂದ್ರ ಇಂಜಿನಿಯರ್ ಕಾಲೇಜಿನ ಪ್ರಕಾಶ್, ಸತ್ಯಸಾಯಿ ಬಾಬಾ ಕಾಲೇಜಿನ ಉಪನ್ಯಾಸಕರಾದ ರಾಜೇಂದ್ರ, ಪೀಪಲ್ಸ್ ಪಾರ್ಕ್ ಸರ್ಕಾರಿ ಪ್ರೌಢಶಾಲೆಯ ಸಂಗೀತ ಶಿಕ್ಷಕರಾದ ಎಂ.ಬಿ.ನಾಗರಾಜು, ಮಾತೃಮಂಡಲಿ ಶಿಕ್ಷಣ ಸಂಸ್ಥೆಯ ನಿವೃತ್ತ ಶಿಕ್ಷಕರಾದ ಶುಭಮಣಿ, ನಿರ್ಮಲಾ ಕಾನ್ವೆಂಟ್‌ನ ಶಿಕ್ಷಕಿ ಸುಶೀಲ ಹಾಗೂ ಹೇಮಲತಾ, ವನಿತಾ ಸದನ ಶಾಲೆಯ ಶ್ರೀಮತಿ ಭಾರತಿ, ಹಾರ್ಡ್ವಿಕ್ ಪ್ರೌಢಶಾಲೆಯ ಸಬೀನ ಅವರನ್ನು ಸನ್ಮಾನಿಸಲಾಯಿತು.

ಕಲಿಕೆಗೆ ರಾಷ್ಟ್ರೀಯ ಶಿಕ್ಷಣ ನೀತಿ ನೆರವು

ಶಿಕ್ಷಣ ಸಲಹೆಗಾರರಾದ ಡಾ.ಎಲ್.ಸವಿತಾ ಅಭಿಮತ




ಮೈಸೂರು, ಸೆ.10(ಎಸ್‌ಬಿಡಿ)– ವಿದ್ಯಾರ್ಥಿಗಳ ಆಸಕ್ತಿ ಅನುಸಾರ ಕಲಿಕೆಗೆ ರಾಷ್ಟ್ರೀಯ ಶಿಕ್ಷಣ ನೀತಿ ನೆರವಾಗಲಿದೆ ಎಂದು ಶಿಕ್ಷಣ ಸಲಹೆಗಾರರಾದ ಡಾ.ಎಲ್.ಸವಿತಾ ಅಭಿಪ್ರಾಯಿಸಿದರು. ಮೈಸೂರಿನ ರಂಗರಾವ್ ಸ್ಮಾರಕ ವಿಶೇಷ ಚೇತನರ ಶಾಲೆ (ಆರ್‌ಎಂಎಸ್‌ಡಿ)ಯಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಕುರಿತ ವಿಶೇಷ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲರಿಗೂ ಸುಲಭವಾಗಿ ಸಮಾನ ರೀತಿಯ ಶಿಕ್ಷಣ ಲಭ್ಯವಾಗಲು ಎನ್‌ಇಪಿ ನೆರವಾಗಿದ್ದು, ಇದು ಸಮಗ್ರ ಶಿಕ್ಷಣದ ಚೌಕಟ್ಟು ಹೊಂದಿದೆ. ವಿದ್ಯಾರ್ಥಿಗಳ ಆಸಕ್ತಿಯನುಸಾರ ಅಧ್ಯಯನ ನಡೆಸಲು ಅವಕಾಶವಿದೆ. ಸೃಜನಶೀಲತೆ, ಕಲಿಕೆ, ಪ್ರಯೋಗಗಳು, ದೃಶ್ಯೀಕರಣ ಹಾಗೂ ಕಲೆಯನ್ನು ಶೈಕ್ಷಣಿಕವಾಗಿ ಅಳವಡಿಸಿರುವುದರಿಂದ ವಿದ್ಯಾರ್ಥಿಗಳ ಪರಿವರ್ತನೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಎನ್‌ಆರ್ ಪ್ರತಿಷ್ಠಾನದ ಅಧ್ಯಕ್ಷ ಗುರು ರಂಗ(ಆರ್.ಗುರು) ಮಾತನಾಡಿ, ಶಿಕ್ಷಕರು ಜಗತ್ತಿನ ಬೆಳಕಾಗಿದ್ದಾರೆ. ಕತ್ತಲಲ್ಲಿ ದಾರಿ ತೋರುವುದಲ್ಲದೆ ಬದುಕಿನ ಭರವಸೆ ಮೂಡಿಸಿ ಮುನ್ನಡೆಯಲು ಶಕ್ತಿ ತುಂಬುತ್ತಾರೆ. ಅದರಲ್ಲೂ ವಿಶೇಷ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಶಿಕ್ಷಕರ ಸೇವೆ ಅವಿಸ್ಮರಣೀಯ. ನಮ್ಮ ರಂಗರಾವ್ ಸ್ಮಾರಕ ಶಾಲೆ ಶಿಕ್ಷಕ ವೃಂದ, ವಿದ್ಯಾರ್ಥಿಗಳ ಜೀವನದಲ್ಲಿ ಸಮಗ್ರ ಪಾತ್ರ ವಹಿಸಿದೆ. ಇಲ್ಲಿನ ಮಕ್ಕಳ ಪಾಲಿಗೆ ನಿಜವಾದ ಬೆಳಕಾಗಿದ್ದಾರೆ ಎಂದು ಬಣ್ಣಿಸಿದರು. ತರಗತಿಯಲ್ಲಿ ಕಲಿಸುವುದಕ್ಕಷ್ಟೇ ಸೀಮಿತವಾಗದೆ ವಿದ್ಯಾರ್ಥಿಗಳ ಪ್ರತಿ ಹೆಜ್ಜೆಯನ್ನು ಗಮನಿಸಿ, ಅವರ ಉನ್ನತಿಗೆ ಅಗತ್ಯ ಮಾರ್ಗದರ್ಶನ ನೀಡುತ್ತಾರೆ. ಎಲ್ಲಾ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯುವಂತೆ ಪ್ರೇರಣೆ ನೀಡುತ್ತಾರೆ. ಜೀವನದಲ್ಲಿ ಸ್ವಾವಲಂಬಿಯಾಗಿ ಬದುಕುವಂತೆ ಸ್ಫೂರ್ತಿ ತುಂಬುತ್ತಾರೆ. ಇದೆಲ್ಲವೂ ವಿದ್ಯಾರ್ಥಿಗಳ ಮೇಲಿನ ಪ್ರೀತಿಯಿಂದಲೇ ಸಾಧ್ಯವಾಗಿದೆ. ಮಕ್ಕಳಿಗೆ ಶಿಕ್ಷಕರೇ ನಿಜವಾದ ಹೀರೋಗಳು. ಯಾವುದೇ ಷರತ್ತು ರಹಿತವಾದ ತಮ್ಮ ಸೇವೆಗೆ ನಮ್ಮ ಸಂಸ್ಥೆ ಕೃತಜ್ಞವಾಗಿದೆ ಎಂದು ಹೇಳಿದರು. ಇದೇ ವೇಳೆ ಶಾಲೆಯ ಶಿಕ್ಷಕ ವೃಂದವನ್ನು ಅಭಿನಂದಿಸಿ, ಗೌರವಿಸಲಾಯಿತು. ಅತಿಥಿಗಳಾಡಿದ ಮಾತುಗಳನ್ನು ಆಸಕ್ತಿಯಿಂದ ಆಲಿಸಿದ ಮಕ್ಕಳು ಚಪ್ಪಾಳೆ ಮೂಲಕ ಸಂತಸ ವ್ಯಕ್ತಪಡಿಸಿದರು.



ಪ್ರಮತಿ ಹಿಲ್ ವ್ಯೂ ಅಕಾಡೆಮಿ ಶಾಲೆಯಲ್ಲಿ ನಡೆದ ಸಂಸ್ಕೃತೋತ್ಸವ ಮತ್ತು ಆಚಾರ್ಯ ವಿದ್ಯಾಕುಲ ನಡೆಸಿದ ವಿವಿಧ ಸಂಸ್ಕೃತ ಸ್ಪರ್ಧೆಗಳಲ್ಲಿ ಮೈಸೂರಿನ ಮಹರ್ಷಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಗಳಿಸಿ ಪಾರಿತೋಷಕವನ್ನು ಪಡೆದಿದ್ದಾರೆ. ವಿಜೇತರೊಂದಿಗೆ ಮಹರ್ಷಿ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ.ಭವಾನಿಶಂಕರ್, ಸಂಯೋಜಕ ತೇಜಸ್ ಬಿ ಶಂಕರ್, ಪ್ರಾಚಾರ್ಯ ಗೋಪಾಲಸ್ವಾಮಿ, ಎ.ಕುಮಾರ್, ಶ್ರೀಮತಿ ವಾಣಿಶ್ರೀ ಮತ್ತಿತರರು ಹಾಜರಿದ್ದರು.

ಪೊಲೀಸರ ಡ್ಯೂಟಿ ಬದಲಾವಣೆ ವೇಳೆಯೇ ಸರ ಕಳವಿಗೆ ಖದೀಮರ ಸ್ಕೆಚ್!



ಮೈಸೂರು, ಸೆ. 10(ಆರ್‌ಕೆ)–ಪೊಲೀಸರ ಕರ್ತವ್ಯ ಬದಲಾವಣೆ ಸಮಯ ಸಾಧಿಸಿ ಖದೀಮರು ಸರಗಳವಿಗೆ ಮುಹೂರ್ತ ಫಿಕ್ಸ್ ಮಾಡಿಕೊಂಡಿದ್ದಾರೆ.

ಪ್ರತೀದಿನ ರಾತ್ರಿ 8ರಿಂದ 9 ಗಂಟೆವರೆಗೆ ಹಗಲಿನ ಪಾಳಿಯ ಕರ್ತವ್ಯ ನಿರ್ವಹಿಸಿದ ಪೊಲೀಸರು ರಿಲೀವ್ ಆಗಿ ರಾತ್ರಿ ಪಾಳಿಗೆ ಬರುವವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ. ರಾತ್ರಿ ಗಸ್ತು ಕರ್ತವ್ಯದಲ್ಲಿರುವವರಿಗೆ ಠಾಣೆಯಲ್ಲಿ ಇನ್ಸ್‌ಪೆಕ್ಟರ್‌ಗಳು ಯಾವ ಯಾವ ಪಾಯಿಂಟ್‌ನಲ್ಲಿ ಯಾರ್‍ಯಾರು ಕರ್ತವ್ಯ ನಿರ್ವಹಿಸಬೇಕು, ಯಾವ ರಸ್ತೆಯಲ್ಲಿ ಯಾವ ಸಮಯದಲ್ಲಿ ಗಸ್ತು ತಿರುಗಬೇಕು, ಎಲ್ಲೆಲ್ಲಿ ತೀವ್ರ ನಿಗಾ ವಹಿಸಬೇಕು ಎಂಬುದರ ಬಗ್ಗೆ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ವಿವರಿಸಿ, ಕರ್ತವ್ಯ ಹಂಚಿಕೆ ಮಾಡುತ್ತಾರೆ.

ಡ್ಯೂಟಿ ಪಡೆದು ರಸ್ತೆಗಿಳಿಯುವಷ್ಟರಲ್ಲಿ ರಾತ್ರಿ ಸುಮಾರು 9.15ರಿಂದ 9.30 ಗಂಟೆಯಾಗುತ್ತದೆ. ಅಂದರೆ ರಾತ್ರಿ 8ರಿಂದ 9.30 ಗಂಟೆವರೆಗೆ ಪೊಲೀಸರು ಠಾಣೆಗಳಲ್ಲೇ ಇರುತ್ತಾರೆ ಎಂಬುದನ್ನು ಖಚಿತಪಡಿಸಿಕೊಂಡು ಖದೀಮರು, ಆ ಸಮಯದಲ್ಲಿ ರಸ್ತೆಗಿಳಿದು ಮಹಿಳೆಯರ ಸರ ಕಳವು ಕಾರ್ಯಾಚರಣೆ ನಡೆಸಿ ಯಶಸ್ವಿಯಾಗುತ್ತಿದ್ದಾರೆ.

ಬುಧವಾರ ರಾತ್ರಿ ಎನ್‌ಆರ್ ಮೊಹಲ್ಲಾ, ವಿವಿ ಮೊಹಲ್ಲಾ, ವಿಜಯನಗರ 2ನೇ ಹಂತ ಹಾಗೂ ಸರಸ್ವತಿಪುರಂ ಬಡಾವಣೆಗಳ ಜನಸಂದಣಿ ಪ್ರದೇಶದಲ್ಲೇ ಖದೀಮರು ಬೈಕ್‌ನಲ್ಲಿ ಬಂದು ಮೂರು ಕಡೆ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರೆ, ಒಂದೆಡೆ ವಿಫಲ ಯತ್ನ ನಡೆಸಿದ್ದಾರೆ. ಆದರೆ ಈ ನಾಲ್ಕೂ ಕಡೆ ಕೃತ್ಯ ನಡೆದಿರುವುದು ರಾತ್ರಿ 7.30ರಿಂದ 9.30 ಗಂಟೆ ಸಮಯದಲ್ಲಿ ಎಂಬುದು ಗಮನಾರ್ಹ.

ಇದೀಗ ಡ್ಯೂಟಿ ಬದಲಾವಣೆ ಸಮಯವನ್ನು ಪೊಲೀಸರೇ ಬದಲಾಯಿಸಿಕೊಂಡಿದ್ದಾರೆ. ಆದರೆ ಆ ಸಮಯವನ್ನು ರಹಸ್ಯವಾಗಿರಿಸಲಾಗಿದೆ. ದಿನದ 24 ಗಂಟೆಯೂ ಠಾಣಾ ಸರಹದ್ದಿನಲ್ಲಿದ್ದು, ಕರ್ತವ್ಯ ನಿರ್ವಹಿಸಲಾರಂಭಿಸಿರುವ ಪೊಲೀಸರು ಸರಗಳ್ಳರ ಮೇಲೆ ತೀವ್ರ ನಿಗಾ ಇರಿಸಿದ್ದಾರೆ.

ಎನ್‌ಆರ್, ಕೆಆರ್ ಉಪವಿಭಾಗದ ಎಸಿಪಿಗಳು ಇಂದು ತಮ್ಮ ಉಪವಿಭಾಗಗಳ ಠಾಣಾ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಕ್ರೈಂ ಟೀಂ ಹಾಗೂ ಎಸಿಪಿ ಸ್ಕ್ವಾಡ್ ಪೊಲೀಸರೊಂದಿಗೆ ಸಭೆ ನಡೆಸಿ ರಾತ್ರಿ ಗಸ್ತು ತೀವ್ರಗೊಳಿಸಿ ಎಚ್ಚರ ವಹಿಸುವುದು ಹಾಗೂ ಸರಗಳ್ಳರ ಪತ್ತೆಗೆ ವ್ಯಾಪಕ ಶೋಧ ನಡೆಸಿ ಖದೀಮರನ್ನು ಬಂಧಿಸುವಂತೆ ತಾಕೀತು ಮಾಡಿದ್ದಾರೆ.

ಒಂದೇ ರಾತ್ರಿ 4 ಕಡೆಗಳಲ್ಲಿ ಕೃತ್ಯ ನಡೆದಿರುವುದು ಇದೀಗ ವ್ಯಾಪ್ತಿ ಪೊಲೀಸರ ನಿದ್ದೆಗೆಡಿಸಿದೆ. ಸರಗಳ್ಳರನ್ನು ಪತ್ತೆ ಮಾಡುವುದು ದೊಡ್ಡ ಕೆರೆಯಲ್ಲಿ ಬಿದ್ದಿರುವ ಸೂಜಿಯನ್ನು ಹುಡುಕಿ ತಂದಷ್ಟೇ ಕಷ್ಟವಾದರೂ ಆ ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಉಂಟಾಗಿದೆ

ಜಾಮೀನಿಗೆ ನಕಲಿ ಡಿಮ್ಯಾಂಡ್ ರಿಜಿಸ್ಟರ್: ಪ್ರಕರಣ ದಾಖಲು

ಮೈಸೂರು, ಸೆ.10–ಆರೋಪಿಯೋರ್ವನಿಗೆ ಜಾಮೀನು ನೀಡಲು ನ್ಯಾಯಾಲಯಕ್ಕೆ ನಕಲಿ ಡಿಮ್ಯಾಂಡ್ ರಿಜಿಸ್ಟರ್ ಸಲ್ಲಿಸಿದ ಬಗ್ಗೆ ವರದಿಯಾಗಿದೆ. ಮೈಸೂರಿನ ಟೀಚರ್ಸ್ ಲೇಔಟ್ ನಿವಾಸಿ ಕುಮಾರ್(50) ನಕಲಿ ಡಿಮ್ಯಾಂಡ್ ರಿಜಿಸ್ಟರ್ ನೀಡಿದವನಾಗಿದ್ದಾನೆ. ಮೈಸೂರಿನ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ಆರೋಪಿ ಬೆಂಗಳೂರಿನ ಕೆ.ಆರ್.ಪುರಂ ನಿವಾಸಿ ಮೊಹಮ್ಮದ್ ಷಾ(28) ಎಂಬಾತನಿಗೆ ಕುಮಾರ್ ಜಾಮೀನು ಪ್ರಮಾಣ ಪತ್ರ ಮತ್ತು ನಂಜನಗೂಡು ತಾಲೂಕು ಹುಲ್ಲಹಳ್ಳಿ ಗ್ರಾಮ ಪಂಚಾಯ್ತಿಯಿಂದ ನೀಡಿದ್ದ 2010–11ನೇ ಸಾಲಿನ ಡಿಮ್ಯಾಂಡ್ ರಿಜಿಸ್ಟರ್ ಅನ್ನು 2010ರ ಸೆಪ್ಟೆಂಬರ್ 4 ರಂದು ನ್ಯಾಯಾಲಯಕ್ಕೆ ಕೊಟ್ಟು, ಜಾಮೀನು ನೀಡಿದ್ದಾನೆ.

ಆರೋಪಿ ಮಹಮ್ಮದ್ ಷಾ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಜಾಮೀನುದಾರನಾದ ಕುಮಾರ್ ನೀಡಿದ್ದ ಜಾಮೀನು ಖಾತರಿ ಮೊತ್ತ 10 ಸಾವಿರ ರೂ.ಗಳ ವಸೂಲಾತಿಗಾಗಿ ನ್ಯಾಯಾಧೀಶರು ಹುಲ್ಲಹಳ್ಳಿ ಗ್ರಾಮ ಪಂಚಾಯ್ತಿಗೆ ನಿರ್ದೇಶನ ನೀಡಿದ್ದರು. ಆದರೆ ಕುಮಾರ್ ಸಲ್ಲಿಸಿದ್ದ ಡಿಮ್ಯಾಂಡ್ ರಿಜಿಸ್ಟರ್ ಹುಲ್ಲಹಳ್ಳಿ ಗ್ರಾಮ ಪಂಚಾಯ್ತಿಯಿಂದ ನೀಡಿದ್ದಲ್ಲ, ಅದೊಂದು ನಕಲಿ ಡಿಮ್ಯಾಂಡ್ ರಿಜಿಸ್ಟರ್ ಎಂಬುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮನೆ ಬಾಗಿಲು ಮೀಟಿ ಚಿನ್ನಾಭರಣ, ನಗದು ಕಳವು

ಕೊಳ್ಳೇಗಾಲ, ಸೆ.10–ಮನೆ ಬಾಗಿಲು ಮೀಟಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವುದಾಗಿ ಕೊಳ್ಳೇಗಾಲ ಪಟ್ಟಣದ ಬಸವೇಶ್ವರನಗರದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಮಹದೇವಮ್ಮ(50) ಅವರು ಸೆ.6 ರಂದು ಸಂಜೆ ಮನೆಗೆ ಬೀಗ ಹಾಕಿಕೊಂಡು ಪಟ್ಟಣದ ಸಂಕಷ್ಟಹರ ಗಣಪತಿ ದೇವಸ್ಥಾನದ ಬಳಿ ಇರುವ ಮಗಳ ಮನೆಗೆ ಹೋಗಿ ಉಳಿದುಕೊಂಡಿದ್ದಾರೆ. ಮರು ದಿನ ಸಂಜೆ ಹಿಂತಿರುಗಿದಾಗ ಮನೆಯ ಬಾಗಿಲು ಮೀಟಿ ಒಳ ನುಗ್ಗಿದ ಖದೀಮರು, ಬೀರುವನ್ನೂ ಕೂಡ ಮೀಟಿ, ಅದರಲ್ಲಿದ್ದ 1.52 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 48 ಸಾವಿರ ರೂ. ನಗದು ಕಳವು ಮಾಡಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಟೌನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

'ಮಿಡ್ ಬ್ರೇನ್ ಆಕ್ಟಿವೇಷನ್' ಒಂದು ಮೋಸ

- ಮಕ್ಕಳಲ್ಲಿ ಸುಳ್ಳು ಹೇಳುವ ಪ್ರವೃತ್ತಿ ಬೆಳೆಯಲು ಪ್ರಚೋದನೆ; ಈ ಕಲೆ ಸತ್ಯವೆಂದು ಸಾಬೀತುಪಡಿಸಿದರೆ 5 ಲಕ್ಷ ರೂ.
- ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಪ್ರತಿಪಾದನೆ



ಮೈಸೂರು,ಸೆ.10(ಪಿಎಂ)– 'ಮಿಡ್ ಬ್ರೇನ್ ಆಕ್ಟಿವೇಷನ್' ಎಂಬುದು ಮೋಸ. ನಾವು ವಿಧಿಸುವ ಷರತ್ತುಗಳ ಅನ್ವಯ ಇದನ್ನು ಸತ್ಯವೆಂದು ಸಾಬೀತು ಮಾಡಿದರೆ, ಅಂತಹ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಈ ವಿದ್ಯೆಯ ಮುಂದುವರೆದ ಸಂಶೋಧನೆಗಾಗಿ 5 ಲಕ್ಷ ರೂ. ಸಹಾಯಧನ ನೀಡುವುದಾಗಿ ಖ್ಯಾತ ವಿಚಾರವಾದಿಗಳೂ ಆದ ಅಖಿಲ ಭಾರತ ವಿಚಾರವಾದಿಗಳ ಸಂಘಗಳ ಒಕ್ಕೂಟದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್ ಸವಾಲು ಹಾಕಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಿಡ್ ಬ್ರೇನ್ ಆಕ್ಟಿವೇಷನ್' ವೈದ್ಯಕೀಯ ಶಬ್ದಕೋಶದಲ್ಲಿ ಇಲ್ಲದ ಒಂದು ಪದ ಬಳಸಿಕೊಂಡು ಅಸಂಬದ್ಧ ಚಟುವಟಿಕೆಗಳನ್ನು ಮಾಡಲಾಗುತ್ತಿದೆ. ಈ ಕಲೆ ಕರಗತ ಮಾಡಿಕೊಳ್ಳುವ ಮೂಲಕ ಮಕ್ಕಳು ಕಣ್ಣು ಮುಚ್ಚಿದ್ದರೂ ಓದುವ ಇಲ್ಲವೇ ವಸ್ತುಗಳು ಯಾವುದೆಂದು ಹೇಳುವ ಸಾಮರ್ಥ್ಯ ಗಳಿಸುತ್ತಾರೆ ಎಂಬುದು ಅವರ ವಾದ. ವೈಜ್ಞಾನಿಕವಾಗಿ ಇದು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಅದಾಗ್ಯೂ ಇವರು ನಾವು ವಿಧಿಸುವ ಷರತ್ತುಗಳಡಿ ಸಾಬೀತು ಮಾಡಿದರೆ ಅವರಿಗೆ ಇನ್ನು ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಸಹಾಯಧನ ನೀಡುತ್ತೇವೆ. ತಾವೇ ತಂದ ಚಂಡು ಅಥವಾ ಇನ್ನಾವುದೇ ವಸ್ತುವನ್ನು ಗುರುತಿಸುವ ಮೂಲಕ ಇದು ಸತ್ಯವೆಂದು ಹೇಳುವ ತಾಂತ್ರಗಾರಿಕೆಗೆ ನಮಗೆ ಬೇಡ. ಹಾಗಾಗಿ ನಾವು ಕೆಲ ಷರತ್ತುಗಳನ್ನು ವಿಧಿಸುತ್ತೇವೆ. ಅದರಂತೆ ಸಾಬೀತು ಮಾಡಲಿ ನೋಡೋಣ ಎಂದು ಸವಾಲೊಡ್ಡಿದ್ದರು. ಒಂದು ವೇಳೆ ಇವರು ಹೇಳುವುದು ಸತ್ಯವೆಂದರೆ ಅದು ಸಾಮಾನ್ಯ ಆವಿಷ್ಕಾರವಲ್ಲ. ಕಣ್ಣಿನ ರೆಟಿನಾ ಮೇಲೆ ಬೆಳಕು ಬೀಳದೇ ವಸ್ತು ಕಾಣುತ್ತೇವೆ ಎಂಬುದು ನೊಬೆಲ್ ಪ್ರಶಸ್ತಿಗೆ ಅರ್ಹವಾದ ಸಂಶೋಧನೆಯಾಗುತ್ತದೆ. ಹಾಗಾಗಿ ಇದು ಸುಳ್ಳು ಎಂಬುದಕ್ಕೆ ಹೆಚ್ಚಿನ ಸಾಕ್ಷ್ಯ ಬೇಕಿಲ್ಲ. ಈಗಾಗಲೇ ಈ ಮೋಸದ ಕಲೆಯ ಬಗ್ಗೆ ಜಿಲ್ಲಾ, ರಾಜ್ಯ, ದೇಶದಾದ್ಯಂತ ವಲ್ಲದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಣ್ಣಿಗೆ ಬಟ್ಟೆ ಕಟ್ಟಿ ಅಥವಾ ಮಾಸ್ಕ್ ಧರಿಸಿ ಓದುವುದು, ಬಣ್ಣಗಳನ್ನು ಗುರುತಿಸುವುದು ಇತ್ಯಾದಿಗಳನ್ನು ವಿಶೇಷ ಕಲೆ ಎಂದು ಬಿಂಬಿಸಲಾಗುತ್ತಿದೆ. ಮಕ್ಕಳಿಗೆ ಈ ಬಗ್ಗೆ ತರಬೇತಿ ನೀಡುವುದಾಗಿ ವಂಚಿಸಲಾಗುತ್ತಿದೆ. ಆ ಮೂಲಕ ಮಕ್ಕಳಲ್ಲಿ ಸುಳ್ಳು ಹೇಳುವ ಪರಿಪಾಠ ರೂಢಿಸಿಕೊಳ್ಳಲು ಇದು ಪ್ರಚೋದನೆಯಾಗುತ್ತಿದೆ. ಕಣ್ಣಿಗೆ ಕಟ್ಟಿದ ಪಟ್ಟಿಯ ಎಡೆಗಳು ಹಾಗೂ ಇತರ ಮೂಲಗಳಿಂದ ವಸ್ತುಗಳ ಬಣ್ಣ, ಗುಣ ಹಾಗೂ ಬರೆದ ವಿಷಯಗಳನ್ನು ಗುರುತಿಸುವ ತರಬೇತಿ ನೀಡುವ ಮೂಲಕ ಅದೊಂದು ಅತೀಂದ್ರಿಯ ಶಕ್ತಿ ಎಂದು ಪ್ರತಿಪಾದಿಸಿ, ವಂಚಿಸಲಾಗುತ್ತಿದೆ ಎಂದು ಕಿಡಿಕಾರಿದರು.

ಪೋಷಕರು ತಮ್ಮ ಮಕ್ಕಳ ಮೆದುಳು ಹೆಚ್ಚು ಕ್ರಿಯಾಶೀಲವಾಗಲಿ, ಬುದ್ಧಿಮತ್ತೆ ವೃದ್ಧಿಸಲಿ ಎನ್ನುವ ದೃಷ್ಟಿಯಿಂದ ಇಂತಹ ತರಬೇತಿಗಳಿಗೆ ಸಾವಿರಾರು ರೂ. ನೀಡಿ ದಾಖಲಿಸುತ್ತಾರೆ. ಆದರೆ ಇದರಲ್ಲಿ ನಿಜಕ್ಕೂ ಸತ್ಯವಿಲ್ಲ. ಈ ಬಗ್ಗೆ ಪೋಷಕರು ಎಚ್ಚರ ವಹಿಸಬೇಕು ಎಂದು ಹೇಳಿದರು. ಈ ಮೋಸದ ಕಲೆಯನ್ನು ದೇಶದ್ದೆಂದು ಸುಳ್ಳು ಹೇಳಲಾಗುತ್ತಿದೆ. ಇದನ್ನು ವಿದೇಶಗಳಲ್ಲಿ ಎರಡು ಕಡೆಗಳಲ್ಲಿ ಆರಂಭಿಸಲಾಗಿತ್ತು. ದೇಶದಲ್ಲಿ ಇದನ್ನು ಮಿಡ್ ಬ್ರೇನ್ ಆಕ್ಟಿವೇಷನ್ ಹೆಸರಿನಲ್ಲಿ ನಡೆಸಲಾಗುತ್ತಿದೆ. 2015ರಲ್ಲಿ ಕೇರಳದ ಕೋಝಿಕ್ಕೋಡಿನಲ್ಲಿ ಈ ಕಲೆಯ ಮೋಸವನ್ನು ಬಯಲಿಗೆಳೆದು ಜಗ್ಗಜಾಹೀರು ಮಾಡಿದ್ದೆ. ಈ ವಿಡಿಯೋ ಯೂಟ್ಯೂಬ್‌ನಲ್ಲಿ ಲಭ್ಯವಿದ್ದು, ಪೋಷಕರು ವೀಕ್ಷಿಸಬಹುದು ಎಂದು ಮಾಹಿತಿ ನೀಡಿದರು.

ಡಿಸಿಗೆ ದೂರು: 2017ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಇಂತಹ ಒಂದು ಸಂಸ್ಥೆ ಆರಂಭವಾದ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಯವರಿಗೆ ದೂರು ನೀಡಿದ್ದೆ. ಬಳಿಕ ಪರಿಶೀಲಿಸಿ ಸದರಿ ಸಂಸ್ಥೆಯ ಮಿಡ್ ಬ್ರೇನ್ ಆಕ್ಟಿವೇಷನ್ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಯಿತು. ಅದೇ ರೀತಿಯಲ್ಲಿ ಮೈಸೂರಿನಲ್ಲಿ ಇಂತಹ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಮೈಸೂರು ಜಿಲ್ಲಾಧಿಕಾರಿಯವರಿಗೆ ಎರಡು ವಾರಗಳ ಹಿಂದೆ ದೂರು ಸಲ್ಲಿಸಲಾಗಿದೆ. ಸದ್ಯ ಈವರೆಗೆ ಈ ಸಂಬಂಧ ಯಾವುದೇ ಕ್ರಮ ಕೈಗೊಂಡ ಮಾಹಿತಿ ಇಲ್ಲ ಎಂದು ಹೇಳಿದರು. ನಿವೃತ್ತ ಪ್ರಾಧ್ಯಾಪಕ ಡಾ.ಪಂಡಿತಾರಾಧ್ಯ, ನಿವೃತ್ತ ಮುಖ್ಯ ಶಿಕ್ಷಕ ಚಂದ್ರಶೇಖರ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕೊಡಗು ಜಿಲ್ಲಾಧ್ಯಕ್ಷ ಟಿ.ಜಿ.ಪ್ರೇಮ್‌ಕುಮಾರ್, ಮೈಸೂರು ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಎನ್.ಮಹದೇವಪ್ಪ ಗೋಷ್ಠಿಯಲ್ಲಿದ್ದರು.


ಇಂದು ಉದ್ಯೋಗ ಮೇಳ

ಮೈಸೂರು, ಸೆ 10– ಮೈಸೂರಿನ ಇಂಡಿಯನ್ ಯೂತ್ ಕಾಂಗ್ರೆಸ್, ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್, ಸೇಂಟ್ ಫಿಲೋಮಿನಾ ಕಾಲೇಜು ಸಹಯೋಗದೊಂದಿಗೆ ಸೆ. 11 ರಂದು ಬೆಳಗ್ಗೆ 10.30 ರಿಂದ ಸಂಜೆ 4 ಗಂಟೆಯವರೆಗೆ ಎಲ್‌ಐಸಿ ವೃತ್ತದಲ್ಲಿರುವ ಸೇಂಟ್ ಫಿಲೋಮಿನಾಸ್ ಪದವಿ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವೀಧರರು ಇದರ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 70194 02821, 84314 88818 ಸಂಪರ್ಕಿಸಬಹುದು.

ರೈತ ಮಹಿಳೆ ಮಾಂಗಲ್ಯ ಸರವನ್ನೂ ಬಿಡದ ಪಾಪಿ ಸರಗಳ್ಳ!

ಚಾಮರಾಜನಗರ, ಸೆ.10–ಜಮೀನಿಗೆ ಹೋಗುತ್ತಿದ್ದ ರೈತ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಚಾಮರಾಜನಗರ ತಾಲೂಕು ಉಡಿಗಾಲ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ರೈತ ಮಹಿಳೆ ಗೌರಮ್ಮ(55) ಸರ ಕಳೆದುಕೊಂಡವರು. ಇವರು ಉಡಿಗಾಲ–ತಂಬಡಹಳ್ಳಿ ರಸ್ತೆಯಲ್ಲಿರುವ ತಮ್ಮ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಹಸುಗಳನ್ನು ಹೊಡೆದುಕೊಂಡು ಬರಲು ಮನೆಯಿಂದ ತೆರಳುತ್ತಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ಖದೀಮ, ಅವರನ್ನು ಜಮೀನಿನ ಬಳಿ ಬಿಡುತ್ತೇನೆ ಎಂದು ಬೈಕ್‌ನಲ್ಲಿ ಕುಳ್ಳಿರಿಸಿಕೊಂಡು ಜಮೀನಿನ ಬಳಿ ಕರೆದೊಯ್ದ ನಂತರ ಗೌರಮ್ಮ ಧರಿಸಿದ್ದ 50 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.09.2022 ಭಾನುವಾರ, ಮಳೆ ನಕ್ಷತ್ರ: ಪುಬ್ಬ, 31.08.2022 ರಿಂದ 13.09.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ : ಪ್ರತಿಪತ್, ನಕ್ಷತ್ರ : ಪೂಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಕ್ಷತ್ರಿಯ ಒಕ್ಕೂಟ :** ಕ್ಷತ್ರಿಯ ಸಮಾಜದ ಬಲವರ್ಧನೆಗಾಗಿ ಕ್ಷತ್ರಿಯ ಸಮುದಾಯದ ಜಾಗೃತಿ ಸಭೆ, ಸ್ಥಳ: ಟೌನ್‌ಹಾಲ್, ಬೆಳಗ್ಗೆ 10ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ, ಗಾಯಕ ಜಿವ್ ಶಿವು ಅವರಿಂದ ಶರಣರ ಸಾಮಾಜಿಕ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷೆ ಶುಭಮಣಿ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** 55ನೇ ಇಂಜಿನಿಯರ್ಸ್ ದಿನ ಮತ್ತು ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಸ್ಮಾರ್ಟ್ ಇಂಜಿನಿಯರಿಂಗ್ ಫಾರ್ ಬೆಟರ್ ವರ್ಲ್ಡ್ ಕುರಿತು ತಾಂತ್ರಿಕ ಉಪನ್ಯಾಸ, ಭಾಷಣಕಾರರು : ಪ್ರೊ. ಕೆ.ಎಸ್. ಲೋಕೇಶ್, ಡಾ. ವಿ. ರವಿಕುಮಾರ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ಜಿಲ್ಲಾ ಘಟಕ :** ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ, ವಿವಿಧ ಕ್ಷೇತ್ರದಲ್ಲಿ ಆಯ್ಕೆಯಾದ ನೌಕರರಿಗೆ ಸನ್ಮಾನ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 107ನೇ ಜಯಂತಿ ಸಮಾರಂಭ, ಸಾನ್ನಿಧ್ಯ : ಪಡುವಲು ಶ್ರೀ ವಿರಕ್ತಮಠದ ಶ್ರೀ ಮಹದೇವಸ್ವಾಮಿಗಳು, ಉದ್ಘಾಟನೆ : ಹೆಚ್ಚುವರಿ ಆಯುಕ್ತ ಪಿ. ಶಿವರಾಮು, ಮುಖ್ಯ ಭಾಷಣಕಾರರು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆಲೂರು ಬಸವರಾಜು, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಮಹಿಷಾ ಮಂಡಲ ಇಂಟರ್‌ನ್ಯಾಷನಲ್ ಬುದ್ಧಿಷ್ಟ್ ಕಲ್ಚರಲ್ ಟ್ರಸ್ಟ್ :** ಸ್ವಾಭಿಮಾನದ ಸಾಧಕರಿಗೆ ಸನ್ಮಾನ ಸಮಾರಂಭ, ಸಾನ್ನಿಧ್ಯ : ವೀರ್ಯಶಿಲಾ ಭಂತೇಜಿ, ಉದ್ಘಾಟನೆ : ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಸನ್ಮಾನಿತರು : ಮಾಜಿ ಸಂಸದ ಆರ್. ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಶಾಂತರಾಜು, ಸ್ಥಳ: ರಾಜಗೃಹ ಬುದ್ಧ ವಿಹಾರ, ಬ್ಯಾತಹಳ್ಳಿ, ಬೆಳಗ್ಗೆ 11ಕ್ಕೆ.

■ **ಆಪ್ಟಿಕೇರ್ ಆಸ್ಪತ್ರೆ:** ಕಿವಿ ಪರೀಕ್ಷೆ, ಸ್ಪೀಚ್ ಥೆರಪಿ, ಸ್ಥಳ: ಆಪ್ಟಿಕೇರ್ ಆಸ್ಪತ್ರೆ, ರಾಮಾನುಜ ರಸ್ತೆ, ಬೆಳಗ್ಗೆ 11 ರಿಂದ.

■ **ಬಿಲ್ಲವ ಸಂಘ:** ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ, ಸಾನ್ನಿಧ್ಯ: ಶ್ರೀವಿಖ್ಯಾತಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಆರ್ಯ ಈಡಿಗ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್, ಎಸ್‌ಎನ್‌ಡಿಪಿ ಅಧ್ಯಕ್ಷ ಜಿ. ರಾಜೇಂದ್ರನ್, ಅಧ್ಯಕ್ಷತೆ : ಬಿಲ್ಲವ ಸಂಘದ ಅಧ್ಯಕ್ಷ ಸದಾಶಿವ ಪೂಜಾರಿ, ಸ್ಥಳ: ಬಿಲ್ಲವ ಸಂಘದ ಆವರಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ನಗರ ಎರಡನೇ ಹಂತದ ನಿವಾಸಿಗಳ ಸಂಘ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ, ಸಮ್ಮುಖ : ಶ್ರೀ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ನುಡಿ ನಮನ : ಶ್ರೀನಿವಾಸ ವಿಶ್ವವಿದ್ಯಾಲಯದ ಸಂಶೋಧನಾ ಮಾರ್ಗದರ್ಶಕರಾದ ಡಾ. ರಾಜಶೇಖರ ಜಮದಂಡಿ, ಸ್ಥಳ: ಜೆಎಸ್‌ಎಸ್ ನಗರ, ಲಲಿತಾದ್ರಿಪುರ, ಸಂಜೆ 5ಕ್ಕೆ.

■ **ಜ್ಯೋತಿರ್ಗಮಯ ಸೇವಾ ಟ್ರಸ್ಟ್ ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿ ನಿಲಯ :** ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು : ವಿಶೇಷಾಧಿಕಾರಿ ಎಂ.ಕೆ. ಸ್ವಾಮಿ, ಗೌರವ ಸಮರ್ಪಣೆ : ವಿಶ್ರಾಂತ ಪ್ರಾಂಶುಪಾಲ ಡಾ. ಶ್ರೀನಿವಾಸನ್, ಅಧ್ಯಕ್ಷತೆ : ವಾಲ್ಮೀಕಿ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಸ್ಥಳ: ವಿದ್ಯಾರ್ಥಿ ನಿಲಯ ಆವರಣ, ರಾಮಾನುಜ ರಸ್ತೆ, ಸಂಜೆ 5.30ಕ್ಕೆ.

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಗೇಯ–ನೃತ್ಯ–ನಾಟಕ ರೂಪ 'ಪಂಚಮುಖಿ ಗಣಪತಿ', ಸ್ಥಳ: ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಕಲಾಭವನ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಶ್ರೀಮಾತೆಯವರ ನೆಚ್ಚಿನ ನರೇನ್ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸಂಚಲನ ಮೈಸೂರು :** ಸಂಚಲನ ಯುವರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕರಾದ ನಿರ್ಮಲ ಮಠಪತಿ, ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಪ್ರಾಸ್ತಾವಿಕ ನುಡಿ : ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು, ಸಂಚಲನ ರಂಗ ತಂಡದಿಂದ ಉಷಾ ನರಸಿಂಹನ್ ಅವರ ಕಂಚುಗನ್ನಡಿ ನಾಟಕ ಪ್ರದರ್ಶನ, ನಿರ್ದೇಶನ : ಜೀವನ್ ಕುಮಾರ್ ಬಿ. ಹೆಗ್ಗೋಡು, ಸಂಗೀತ : ದಿಗ್ವಿಜಯ, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ನಟನಾದ ರಂಗಾಭ್ಯಾಸಿಗಳಿಂದ ಬಿ. ಸುರೇಶ ಅವರ ಅಡುಗೆ ಮನೆಯಲ್ಲೊಂದು ಹುಲಿ ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 61ನೇ ಪಾರಂಪರಿಕ ಸಂಗೀತೋತ್ಸವ, ಬೆಳಗ್ಗೆ 8 ಗಂಟೆಗೆ ಧನ್ವಂತ್ರಿ ಹೋಮ, ವೇದ ವಿದ್ವಾಂಸರಾದ ಚಳ್ಳಕೆರೆ ಸಹೋದರರಿಂದ, ಮಧ್ಯಾಹ್ನ 12.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಪೂರ್ಣಾಹುತಿ, ಸಂಜೆ 5.30 ರಿಂದ ವಿದುಷಿ ಸತ್ಯಲಕ್ಷ್ಮೀ ಅನಂತಪದ್ಮನಾಭ ಮತ್ತು ಡಾ. ಜ್ಯೋತಿ ಶಂಕರ್ ಅವರಿಂದ ದುರ್ಯೋಧನನ ವಧೆ ಕುರಿತು ಕಾವ್ಯವಾಚನ, ಸಂಜೆ 6.45ಕ್ಕೆ ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಗಾಯನ, ವಿದ್ವಾನ್ ಎಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಉಮಯಾಳಪುರಂ ಕೆ. ಶಿವರಾಮನ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜಿರಾ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ" ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ–ಚರ್ಮದ ಸಮಸ್ಯೆಗಳಿಗೆ ಚರ್ಮರೋಗ ತಜ್ಞವೈದ್ಯ ಚಿಕಿತ್ಸೆಯ ಅಗತ್ಯ ಕುರಿತು ಡಾ. ಡಿ.ಪಿ. ಜಯಂತ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ–ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ – ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆ ವರಣ್ ಸಿಂಹನ ಪರಿಚಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಜನಪದಗೀತೆ–ಬಸವರಾಜಯ್ಯ ಮತ್ತು ತಂಡ, 1.20 ಭಾವಗೀತೆ–ವೈಷ್ಣವಿ ಎನ್., 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣಿ "ಸ್ವರಾಜ್" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಭೀಷ್ಮ ಪರ್ವ, ಪ್ರಸ್ತುತಿ– ಕಾಸರಗೋಡು ಎಡನೀರು ಮಠದ ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿ ಮತ್ತು ತಂಡದವರು, 7.00 ಏಷಿಯಾ ಕಪ್ 2022 ಕ್ರಿಕೆಟ್ ಫೈನಲ್ ಪಂದ್ಯದ ವೀಕ್ಷಕ ವಿವರಣೆ

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
11-9-2022
'ಮಿತ್ರ'ನ ಎಕ್ಸ್‌ಟ್ರಾ ಇನ್ನಿಂಗ್ಸ್

ಸರ್ ಎಂವಿ – ಕಾಯಕ ಯೋಗಿ



ವಿಶ್ವವಿಖ್ಯಾತ ಕನ್ನಂಬಾಡಿ ಅಣೆಕಟ್ಟು

ವಿಶ್ವೇಶ್ವರಯ್ಯ ಅವರ ಪ್ರತಿಭೆಗೆ ದ್ಯೋತಕವಾಗಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರದಲ್ಲಿರುವ 'ಕನ್ನಂಬಾಡಿ ಅಣೆಕಟ್ಟು' ಒಂದು ಜೀವಂತ ನಿದರ್ಶನ. ಬರಡಾಗಿದ್ದ ಮಣ್ಣನ್ನು ಬಂಗಾರವಾಗಿಸಿ, ಹಸಿರಿನ ಸಿರಿಸಿಂಗಾರದಲ್ಲಿ ಭೂಮಿ ತಾಯಿ ಕಂಗೊಳಿಸುವಂತೆ ನೊರೆ ಹಾಲಿನಂತೆ ಹರಿಯುತ್ತಿದ್ದ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿದ ಈ ಅಣೆಕಟ್ಟು ಪ್ರವಾಸಿಗರ ಕಣ್ಣನ ತಣಿಸುವ, ರಮಣೀಯವಾದ, ದಿನಂಪ್ರತಿ ಸಾವಿರಾರು ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿರುವ ಪ್ರವಾಸಿ ಕೇಂದ್ರವು ಇದಾಗಿದೆ. ವಿಶ್ವೇಶ್ವರಯ್ಯ ಅವರನ್ನು ವಿಶ್ವಮಟ್ಟಕ್ಕೇರಿಸಿದ ಸಾಧನೆ ಎಂದರೆ ಉಕ್ಕಿನ ಸ್ವಯಂಚಾಲಿತ ಬಾಗಿಲುಗಳು ನೀರನ್ನು ಪೋಲು ಮಾಡದೇ ಬಳಸುವ 'ಬ್ಲಾಕ್‌ಸಿಸ್ಟಮ್' ಎಂಬ ಯೋಜನೆಯಡಿ ತಾವಾಗಿಯೇ ಮುಚ್ಚಿ ತೆರೆಯುವ ಉಕ್ಕಿನ ಸ್ವಯಂಚಾಲಿತ ಬಾಗಿಲುಗಳನ್ನು ರಚಿಸಿ ಜಲಾಶಯಗಳಿಗೆ ಜೋಡಿಸಿ ಪ್ರಖ್ಯಾತಿ ಗಳಿಸಿದರು. ಈ ಸ್ವಯಂ ಚಾಲಿತ ಬಾಗಿಲುಗಳನ್ನು ಮುಂಬಯಿಯ ಖಡಕ್‌ವಾಸ್ಲಾ ಸರೋವರ, ಗ್ವಾಲಿಯರ್‌ನ ತೀಗ್ರಾ ಅಣೆಕಟ್ಟುಗಳಲ್ಲಿ ಅಳವಡಿಸಲಾಗಿದೆ

ಡಾ.ಮಜ್ಜಿಗೆಪುರ ಕೆ.ಶಿವರಾಮು,
ಮೊ: 9342125060

'ಸರ್' ಎಂಬ ಹೆಸರು ಕಿವಿಗೆ ಬಿದ್ದೊಡನೆ ಥಟ್ಟನೆ ನೆನಪಾಗುವವರು ಬಡವರ ಪಾಲಿನ ಭಾಗ್ಯಶಿಲ್ಪಿ, ತಮ್ಮ ಇಡೀ ಜೀವನವನ್ನು ಮಾನವ ಕಲ್ಯಾಣಕ್ಕಾಗಿ ಮೀಸಲಿಟ್ಟ ಮಹಾನ್ ಪ್ರತಿಭಾವಂತ, ಕಾಯಕಯೋಗಿ, ಸಾಲು ಸಾಲು ಸಾಧನೆಗಳ ಸರದಾರ, ವಿಶ್ವ ವಿಖ್ಯಾತಿ ಗಳಿಸಿದ ಸರ್ ಎಂ.ವಿಶ್ವೇಶ್ವರಯ್ಯ. ಸೆಪ್ಟೆಂಬರ್ 15 ಅವರ ಜನುಮ ದಿನ.

'ಮೋಕ್ಷಗುಂಡಂ' ಆಂಧ್ರ ಪ್ರದೇಶದ ಮೂಲದ ಹಳ್ಳಿ. ವಿಶ್ವೇಶ್ವರಯ್ಯ ವಂಶಸ್ಥರು ಅಲ್ಲಿಂದ ಬಂದು ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ನೆಲೆಸಿದ್ದರಿಂದ 'ಮೋಕ್ಷಗುಂಡಂ' ಹೆಸರು ಶಾಶ್ವತವಾಗಿ ಉಳಿದುಕೊಂಡಿತು. ಸೆಪ್ಟೆಂಬರ್ 15, 1861ರಂದು ಬಡ ಕುಟುಂಬದಲ್ಲಿ ಜನಿಸಿದರೂ ವಿಶ್ವೇಶ್ವರಯ್ಯ ಅವರ ಪ್ರತಿಭೆ, ಸಾಧನೆ ಮುಂದೆ ಬಡತನವೇ ಮಣಿಯಿತು. ಅಂದು ಮುದ್ದೇನಹಳ್ಳಿ ಕೆಲವೇ ಮಂದಿ ಸಾಮಾನ್ಯ ರೈತರಿಂದ ಕೂಡಿದ್ದು, ಕಲಿಯಲು ಶಾಲೆ ಇರದ ಕಾರಣ ಪಕ್ಕದ 'ಕಂದವರ' ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಇವರ ವ್ಯಾಸಂಗ ಮಾಡಿದರು.

ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ನಂತರ ಚಿಕ್ಕಬಳ್ಳಾಪುರದ ಬೆಂಗಳೂರು–ಬಳ್ಳಾರಿ ರಸ್ತೆ ಪಕ್ಕದ ಹಳೆಯ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ತಮ್ಮ ವ್ಯಾಸಂಗ ಪೂರೈಸಿ ತದನಂತರ ಅವರ ಕುಟುಂಬದವರು ಬೆಂಗಳೂರಿನಲ್ಲಿ ಮುಂದಿನ ವ್ಯಾಸಂಗದ ವ್ಯವಸ್ಥೆ ಮಾಡಿದರು. ನಂತರ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆದು ಮುಂಬೈ ಸರ್ಕಾರದಲ್ಲಿ ಅಸಿಸ್ಟಂಟ್ ಇಂಜಿನಿಯರ್ ಆಗಿ ವೃತ್ತಿ ಜೀವನಾರಂಭಿಸಿ ಅಂದಿನ ಮೈಸೂರು ರಾಜ್ಯದಲ್ಲಿ ಮೂರು ವರ್ಷಗಳ ಕಾಲ ಮುಖ್ಯ ಇಂಜಿನಿಯರ್ ಆಗಿ, ಆರು ವರ್ಷಗಳ ಕಾಲ ದಿವಾನರಾಗಿ ಸೇವೆ ಸಲ್ಲಿಸಿ, ಜನಮಾನಸದಲ್ಲಿ ಭಾಗ್ಯ ಶಿಲ್ಪಿಯಾದರು.

ಸರ್ ಎಂವಿ ಶಿಸ್ತಿನ ಸಿಪಾಯಿ, ಮಹಾ ಸ್ವಾಭಿಮಾನಿ, ವಿಚಾರಾತ್ಮಕ ಮತ್ತು ಪ್ರಗತಿದಾಯಕವಾದ, ದೂರದೃಷ್ಟಿವುಳ್ಳ, ಗುಣವಿಶೇಷತೆವುಳ್ಳವರಾಗಿದ್ದರು. ಎಕ್ಸಿಕ್ಯೂಟಿವ್, ಸೂಪರಿಂಟೆಂಡಿಂಗ್, ಸ್ಯಾನಿಟರಿ ಇಂಜಿನಿಯರಿಂಗ್ ಮೊದಲಾದ ಉನ್ನತ ಹುದ್ದೆಗೇರಿದ ಅವರು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮೂಡಿಸಿದ ಛಾಪು ನಿಜಕ್ಕೂ ಅದ್ಭುತ ಮತ್ತು ವಿಸ್ಮಯವೇ ಸರಿ.

ಕಾರ್ಖಾನೆಗಳ ಹರಿಕಾರನಾಗಿ: ಭಾರತದ ಅಭಿವೃದ್ಧಿ ಕೈಗಾರಿಕೆಗಳಿಂದ ಮಾತ್ರ ಸಾಧ್ಯ ಎಂಬುದನ್ನು ಬಲವಾಗಿ 'ಪ್ರತಿಪಾದಿಸಿದವರು'. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಪ್ರೋತ್ಸಾಹ ನೀಡಿದ ಅವರು ಏಷಿಯಾ ಖಂಡದಲ್ಲೇ ಬೃಹತ್ತಾದ ಬೆಂಗಳೂರಿನ ವಿಮಾನ ಕಾರ್ಖಾನೆ, ಭದ್ರಾವತಿಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ, ಮೈಸೂರಿನ ಗಂಧದೆಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಲೋಹದ ಕಾರ್ಖಾನೆ, ಚರ್ಮ ಹದಮಾಡುವ ಕ್ರೋಂತ್ಯಾನಿಂಗ್ ಕಾರ್ಖಾನೆ, ಕೇಂದ್ರ ಕೈಗಾರಿಕಾ ವರ್ಕ್ ಶಾಪ್‌ಗಳು ಇತ್ಯಾದಿಗಳನ್ನು ಸ್ಥಾಪಿಸಿದ ಸರ್.ಎಂ.ವಿ. 'ಕಾರ್ಖಾನೆಗಳ ಕಿಂಗ್' ಎನ್ನಿಸಿಕೊಂಡರು.


ದಕ್ಷ ಆಡಳಿತಗಾರ: ದಕ್ಷ ಆಡಳಿತಗಾರರಾಗಿದ್ದ ವಿಶ್ವೇಶ್ವರಯ್ಯ ಅವರ ಪ್ರತಿಭೆಗೆ ಸೇವಾತತ್ಪರತೆಗೆ ಬ್ರಿಟಿಷ್ ಸರ್ಕಾರವೇ ತಲೆದೂಗಿತ್ತು. ಅವರು ದಿವಾನರಾದಾಗ ಅಂದಿನ ಬ್ರಿಟಿಷ್ ವೈಸರಾಯ್ 'ಹಾರ್ಡಿಂಜ್' ರಾಜ್ಯದ ಆಂತರಿಕ ವಿಷಯಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಇದು ಅವರ ಘನತೆ–ಗೌರವಗಳಿಗಿದ್ದ ಸಾಕ್ಷಿ. ಬೆಂಗಳೂರು, ಮೈಸೂರು ಮಾರುಕಟ್ಟೆ ಬೀದಿ, ಉದ್ಯಾನವನ, ನಗರ ನೈರ್ಮಲ್ಯ, ಸೌಂದರ್ಯ, ಪೌರ ಸೌಲಭ್ಯ ಹಾಗೂ ಜನರ ಆರೋಗ್ಯದತ್ತ ಗಮನಹರಿಸಿ ಆಶ್ಚರ್ಯಕಾರಕ ಸಾಧನೆಗಳನ್ನು ಮಾಡಿ ಗ್ರಾಮಗಳ ಸುಧಾರಣೆಗಾಗಿಯೂ ಶ್ರಮಿಸಿದರು. ಆಡಳಿತದಲ್ಲಿ ಚುರುಕು ಮೂಡಿಸಿ ವರ್ಷಕ್ಕೊಮ್ಮೆ ಸಮಾವೇಶಗೊಳ್ಳುತ್ತಿದ್ದ ಪ್ರಜಾಪ್ರತಿನಿಧಿ ಸಭೆ ವರ್ಷದಲ್ಲಿ ಎರಡು ಬಾರಿ ಸೇರುವಂತೆ ಮಾಡಿದರು. ಇನ್ನೊಂದು ಗಮನಾರ್ಹ ಸಾಧನೆ ಎಂದರೆ 'ಆಯ–ವ್ಯಯ' ಸಂಗ್ರಹ ಪಟ್ಟಿಯನ್ನು ಕನ್ನಡದಲ್ಲಿ ಪ್ರಕಟಿಸಲು ಪ್ರಜಾಪ್ರಭುತ್ವದ ಉನ್ನತ ಪರಂಪರೆಗೆ ಚಾಲನೆ ನೀಡಿದರು. ಪ್ರಜಾಪ್ರತಿನಿಧಿ ಸಭೆ, ಲೆಜಿಸ್ಲೇಟಿವ್ ಕೌನ್ಸಿಲ್‌ಗಳು ಇಂದಿನ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ಗಳಂತೆಯೇ ಕಾರ್ಯ ನಿರ್ವಹಿಸುತ್ತಿದ್ದವು. ವಿಶ್ವೇಶ್ವರಯ್ಯ ಅವರ ಅವಧಿಯಲ್ಲಿ ಮೈಸೂರು ರಾಜ್ಯ ಮಾದರಿ ರಾಜ್ಯವಾಗಿ ಮಾರ್ಪಟ್ಟಿತ್ತು.

ಶಿಸ್ತಿನ ಸಿಪಾಯಿ: ವಿಶ್ವೇಶ್ವರಯ್ಯ ಅವರು ಚಿಕ್ಕಂದಿನಿಂದಲೂ ಶಿಸ್ತನ್ನು ಮೈಗೂಡಿಸಿಕೊಂಡಿದ್ದರು. ಅವರು ಮೈಸೂರು ದಿವಾನರಾಗಿದ್ದ ಸಂದರ್ಭ, ಚಿಕ್ಕಬಳ್ಳಾಪುರದ ಜನತೆಯ ಪುರ ಪ್ರಮುಖರು ವಿಶ್ವೇಶ್ವರಯ್ಯರನ್ನು ಕುರಿತು, ರಾಜ್ಯಕ್ಕೆಲ್ಲಾ ಒಳ್ಳೆಯದು ಮಾಡಿದ್ದೀರಿ, ತಮ್ಮ ಹುಟ್ಟಿದ ತಾಲೂಕು ಚಿಕ್ಕಬಳ್ಳಾಪುರಕ್ಕೆ ಏನಾದರೂ ಮಾಡಿ ಎಂದು ಮನವಿ ಮಾಡಿಕೊಂಡಾಗ ಬೆಂಗಳೂರಿಗೆ ಬಂದು ಭೇಟಿ ಮಾಡಲು ತಿಳಿಸಿದರು. ದಿನಾಂಕ, ಸಮಯ ನಿಗದಿ ಮಾಡಿದ್ದರು. ಅದರಂತೆ ಪಟ್ಟಣದ ಪ್ರಮುಖರಾದ ವಂಕಾಯಲು ವೆಂಕಟಶಾಮಿಚೆಟ್ಟಿ, ವೈ.ವಿ.ನರಸಿಂಹಯ್ಯ, ಸಿ.ವಿ.ವೆಂಕಟರಾಯಪ್ಪ ಇನ್ನು ಕೆಲವರು ಕಾರಿನಲ್ಲಿ ಬೆಂಗಳೂರಿಗೆ ಹೊರಟು ಬಂದರು. ಇವರಿಗೆ ವಿಶ್ವೇಶ್ವರಯ್ಯನವರು ಮಧ್ಯಾಹ್ನ 12 ಗಂಟೆಯ ಸಮಯ ನಿಗದಿ ಮಾಡಿದ್ದರು. ಬೆಂಗಳೂರು ತಲುಪಿದ ಪುರ ಪ್ರಮುಖರು 10–20 ನಿಮಿಷ ತಡವಾದರೂ ಪರವಾಗಿಲ್ಲ, ಅವರು ನಮ್ಮವರಲ್ಲವೇ ಎಂದು ತಿಂಡಿ ತಿನ್ನಲು ಹೋಟೆಲ್‌ಗೆ ತೆರಳಿ, ಆನಂತರ ವಿಶ್ವೇಶ್ವರಯ್ಯನವರ ಭೇಟಿಗೆ ಬಂದರು. ಆದರೆ ಸರಿಯಾದ ಸಮಯಕ್ಕೆ ಬಾರದ ಇವರಿಗೆ ನಾನು ಲಭ್ಯವಿಲ್ಲ ಎಂದು ಹೇಳಿ ಸರ್ ಎಂವಿ ಹೊರ ನಡೆದಿದ್ದರು. ಅವರ ಸಹಾಯಕ ವಿಷಯ ತಿಳಿಸಿದಾಗ ಪುರ ಪ್ರಮುಖರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂದಿರುಗಿದರು. ಈ ಸಂಗತಿಯನ್ನು ಗಮನಿಸಿದರೆ ಸರ್.ಎಂ.ವಿ. ಶಿಸ್ತಿಗೆ ಎಂತಹವರೂ ಸುಸ್ತಾಗಲೇಬೇಕಾಗಿತ್ತು.


ಶಿಕ್ಷಣ ಪ್ರೇಮಿಯಾಗಿ: ಶಿಕ್ಷಣದಿಂದಲೇ ದೇಶೋದ್ಧಾರ ಎಂಬುದನ್ನು ಮನಗಂಡಿದ್ದ ಸರ್.ಎಂ.ವಿ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಅವರು ದಿವಾನರಾಗಿದ್ದಾಗ ಮೈಸೂರು ರಾಜ್ಯದಲ್ಲಿ 4,568 ಶಾಲೆಗಳಿದ್ದವು. ಅವರು ದಿವಾನಗಿರಿಯಿಂದ ನಿವೃತ್ತರಾಗುವಾಗ ಅಂದರೆ 1918ರಲ್ಲಿ ಅವುಗಳ ಸಂಖ್ಯೆ 11,294 ಕ್ಕೇರಿತು. ಜೊತೆಗೆ ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜು, ಅಂದು ಕೃಷಿಕರಿಗಾಗಿ ತೆರೆದ ಕೃಷಿ ಶಾಲೆ ಇಂದು ಕೃಷಿ ವಿಶ್ವವಿದ್ಯಾನಿಲಯವಾಗಿ ಬೆಳೆದು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ, ಮಹಿಳಾ ಮಣಿಗಳಿಗಾಗಿ ರಾಜ್ಯಾದ್ಯಂತ ಹೆಣ್ಣು ಮಕ್ಕಳ ಶಾಲೆ ಪ್ರಾರಂಭಿಸಿ ದಾಖಲೆ ಸೃಷ್ಟಿಸಿದರು.

ಮಾನವತಾವಾದಿಯಾಗಿ: ಉಪ್ಪಿಟ್ಟವರನ್ನು ಮುಪ್ಪಿರುವ ತನಕ ನೆನೆಯುವ ಗುಣವನ್ನು ಹೊಂದಿದ್ದ ಸರ್.ಎಂ.ವಿ. ಮೈಸೂರು ಸಂಸ್ಥಾನದ ದಿವಾನರಾಗಿದ್ದರೂ, ಜನ ಅವರನ್ನು ಮುದ್ದೇನಹಳ್ಳಿ ದಿವಾನರೆಂದೇ ಗುರುತಿಸಿದ್ದರು. ದಿವಾನರಾದ ಮೇಲೆ ಆ ಭಾಗದ ಜನ ಚಿಕ್ಕಬಳ್ಳಾಪುರದಲ್ಲಿ ಕಾರ್ಯಕ್ರಮ ಏರ್ಪಡಿಸಿ, ಅವರನ್ನು ಆಹ್ವಾನಿಸಿ ಜನ ಅವರ ದರ್ಶನಕ್ಕಾಗಿ ಬೆಲ್ಲದಚ್ಚಿಗೆ ಇರುವೆ ಮುತ್ತಿಕೊಂಡಂತೆ ಸೇರಿ ಸಂಭ್ರಮಿಸುತ್ತಿದ್ದರು. ಪುರ ಪ್ರಮುಖರನ್ನೊಳಗೊಂಡು ಅವರಿಗೆ ಹಾರ–ತುರಾಯಿಗಳನ್ನರ್ಪಿಸಿ ಬರಮಾಡಿಕೊಳ್ಳುತ್ತಿದ್ದರು. ಈ ಸಮಯದಲ್ಲಿ ಭುಜದ ಮೇಲೆ ಹಳೆ ಕಂಬಳಿ ಹಾಕಿಕೊಂಡ ವಯಸ್ಸಾದ ರೈತನೊಬ್ಬ 'ಅಪ್ಪಾ ವಿಶ್ವೇಶ್ವರ' ಎಂದು ಹೇಳಿ ಮುನ್ನುಗ್ಗಿದಾಗ ಪೊಲೀಸರು ತಡೆದರು. ಆದರೆ, ಆ ರೈತನ ಕೂಗು ಕೇಳಿಸಿಕೊಂಡ ದಿವಾನರು ಪೊಲೀಸ್ ಕಾವಲು ಕೋಟೆಯಿಂದ ಹೊರ ಬಂದು ಆತನನ್ನು ಅಪ್ಪಿಕೊಂಡು ಪಕ್ಕಕ್ಕೆ ಕರೆದೊಯ್ದು, ಸಂತೈಸಿದರು. ನಂತರ ಕಾರಿನಲ್ಲಿ ಕೂರಿಸಿಕೊಂಡು 'ಇನ್ಮೇಲೆ ವಿಶ್ವೇಶ್ವರಾ ಅಂತಾ ಕರೆಯದೇ ವಿಶ್ವೇಶ್ವರಯ್ಯ ಅಂತ ಕರೆಯಪ್ಪಾ' ಎಂದು ಹೇಳಿದರು. ಆ ರೈತನೇ ಬಾಲ್ಯದಲ್ಲಿ ವಿಶ್ವೇಶ್ವರಯ್ಯ ಅವರನ್ನು ಮುದ್ದೇನಹಳ್ಳಿಯಿಂದ ಕಂದವರ ಶಾಲೆಗೆ ಭುಜದ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದವನು. ಸರ್.ಎಂ.ವಿ. ಅವರು ಬದುಕಿರುವವರೆಗೂ ಆತನ ಯೋಗಕ್ಷೇಮ ನೋಡಿಕೊಂಡರು. ಇದು ಅವರ ಮಾನವೀಯ ಗುಣಕ್ಕೆ ಹಿಡಿದ ಕೈಗನ್ನಡಿ.

ವಿಶ್ವೇಶ್ವರಯ್ಯ ಅವರ ಗಣನೀಯ ಸೇವೆಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿದ್ದು ಭಾರತ ಸರ್ಕಾರ ಅವರ ಅನುಪಮ, ಅವಿಸ್ಮರಣೀಯವಾದ ಸೇವೆಗೆ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ



ಸರ್ ಎಂ.ವಿ. ಅವರ ಕುಟುಂಬ



ಜವಹರಲಾಲ್ ನೆಹರು ಜೊತೆ ಸರ್ ಎಂ.ವಿ.



ವಾರಭವಿಷ್ಯ

11.9.2022 ರಿಂದ 17.9.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕನ್ಯಾ, ಚಂದ್ರ–ಮೇಷ, ವೃಷಭ, ಮಿಥುನ, ಕುಜ–ವೃಷಭ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಕನ್ಯಾ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಹರ್ಷ, ಉಲ್ಲಾಸಗಳ ವಾತಾವರಣದಲ್ಲಿ ವಾರಕ್ಕೆ ಸ್ವಾಗತ. ಆಪ್ತ ಬಂಧುಗಳ, ಮಿತ್ರರ ಸಮಾಗಮದಿಂದ ಮುದಿತ ಮನಸ್ಸು. ಹಿಂದೆ ಮಾಡಿದ್ದ ಸುಪ್ರಯತ್ನಗಳ ಫಲವಾಗಿ ಧನ–ಕನಕ ಪ್ರಾಪ್ತಿಯೂ ಉಂಟು. ಎಲ್ಲವೂ ಸರಿಯಿದ್ದಾಗ ದುಡುಕು ಹಾಗೂ ಕೋಪಗಳಿಗೆ ನಿಮ್ಮ ರಾಶಿಯಲ್ಲೇ ಸ್ಥಿತನಿರುವ ರಾಹು ಕಾರಣಕರ್ತನಾಗುತ್ತಾನೆ. ಗೃಹಲಕ್ಷ್ಮೀಯೊಂದಿಗೆ ಭಿನ್ನಾಭಿಪ್ರಾಯವಿದ್ದರೆ ಅದನ್ನು ಬದಿಗಿರಿಸಿ, ಸಹನೆ ತಾಳ್ಮೆಗಳೇ ಮುಖ್ಯ.
– ಶ್ರೀ ನೃಸಿಂಹ ದರ್ಶನ, ಶುಭಸಂಖ್ಯೆ–4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಧನ ಸಂಬಂಧಿ ವಿಚಾರಗಳು ಗುರು ಕೃಪೆಯಿಂದ ತೃಪ್ತಿದಾಯಕವಾಗಿದ್ದರೂ, ವ್ಯಯಸ್ಥಿತ ರಾಹುವಿನ ಕಾರಣ ಮನೆಯಲ್ಲಿ ಹಾಗೂ ವೃತ್ತಿ ಸ್ಥಾನದಲ್ಲಿ ಹಿತಕರವಾದ ವಾತಾವರಣ ಇರದು. ಗಣ್ಯ ವ್ಯಕ್ತಿಗಳ ಒಡನಾಟ ಸಂಭವ, ಅದರಿಂದ ನಿಮ್ಮ ಮುಖ್ಯ ಕಾರ್ಯ ಸಾಧನೆ ಆಗುವುದು. ಸಾಮಾಜಿಕ ಸೇವೆ ಮಾಡುವುದರಿಂದ ನಿಮ್ಮ ಸಹಯೋಗಕ್ಕೆ ಮನ್ನಣೆ ದೊರೆಯುವುದು. ಷೇರು ಇತ್ಯಾದಿಗಳಲ್ಲಿ ಹಣ ತೊಡಗಿಸುವಾಗ ಅನುಭವಿಗಳ ಗೈಡೆನ್ಸ್ ಅಗತ್ಯ ಪಡೆಯಿರಿ.
– ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ, ಶುಭಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
'ವಾರದ ಆದಿಗೆ ಮನೆಯವರೊಂದಿಗೆ ಹರ್ಷದಾಯಕವಾಗಿ ಸಮಯ ಕಳೆಯುತ್ತದೆಯಾದರೂ ವ್ಯಾಪಾರ, ವ್ಯವಹಾರಗಳಲ್ಲಿ ಸುಖವಿಲ್ಲ. ಮಹತ್ವಾಕಾಂಕ್ಷಿ ಯೋಜನೆಯನ್ನು ಕೊಂಚ ಸಮಯ ಮುಂದೂಡಿ. ಎಲ್ಲವನ್ನೂ ವಿಧಿಯಂತೇ ನಿರ್ವಹಿಸಿ, ಭಗವಂತನನ್ನು ಸ್ಮರಿಸಿ, ಕೇಟರಿಂಗ್ ಉದ್ಯಮದವರಿಗೆ ಒಳ್ಳೆಯ ವರಮಾನವಾಗಲಿದೆ ಕೈಗೆ ಬಂದ ಹಣವನ್ನು ಜೋಪಾನ ಮಾಡಿಕೊಳ್ಳಿ ಕಷ್ಟಕಾಲಕ್ಕೆ ಒದಗುವುದು. ಅಷ್ಟಶನಿಯಿಂದ ಅನಾರೋಗ್ಯ ಕಾಡಬಹುದು. ವೈದ್ಯಕೀಯ ವೆಚ್ಚಗಳು ಎದುರಾಗುವುದು.
– ಭಕ್ತವತ್ಸಲನಾದ ಶ್ರೀವಿಷ್ಣುಸ್ತುತಿ, ಶುಭಸಂಖ್ಯೆ–8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ನಿಮ್ಮ ರಾಶ್ಯಾಧಿಪತಿ ಚಂದ್ರ ಶುಭ ಭಾವದಲ್ಲಿ ಗೋಚರಿಸುವ ಪರಿಣಾಮ ಹರುಷ, ಉಲ್ಲಾಸದಿಂದ ಸಮಯ ಸರಿಯುವುದು. ನಿಮ್ಮ ಮನೋಸ್ಥೈರ್ಯ ಉತ್ತಮತರನಾಗಿದ್ದು, ಗುರುಬಲವೂ ಇರುವುದರಿಂದ ವೈಯಕ್ತಿಕ ಹಾಗೂ ಸಾಮಾಜಿಕ ಕಾರ್ಯಗಳು ಸಫಲತೆಯ ಹಾದಿಯಲ್ಲಿ ಸಾಗಲಿದೆ ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರ ನೀಡುವರು. ವಾರಾಂತ್ಯಕ್ಕೆ ಪ್ರಭಾವಿ ಮಹಿಳೆಯೊಬ್ಬರ ಸಹಾಯ ಹಸ್ತ ದೊರೆತು ತೊಂದರೆಗಳು ಉಪಶಮನವಾಗುವುದು. ಮಾನಸಿಕ ನೆಮ್ಮದಿ ದೊರಕುವುದು.
– ಶ್ರೀ ದುರ್ಗಾಪರಮೇಶ್ವರಿ ಸ್ತುತಿ, ಶುಭಸಂಖ್ಯೆ–1.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದಾರಂಭಕ್ಕೆ ಹರ್ಷದಾಯಕ ಸಮಯವಿದ್ದಾಗ್ಯೂ ಮಾನಸಿಕ ಕಳವಳ ಕಾಡಲು ಪಂಚಮ ಶನಿದೇವ ಕಾರಣ. ವ್ಯವಹಾರಗಳು ಹಿಂದಿನಂತೆ ಸಾಗಿದರೂ ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರಕಲು ಇನ್ನಷ್ಟು ಸಮಯ ಕಾಯಬೇಕಾಗುವುದು. ಉದ್ಯೋಗ ಸ್ಥಳದಲ್ಲಿ ಹಿತಕರ ವಾತಾವರಣ ನಿರ್ಮಾಣವಾಗಲು ನಿಮ್ಮ ಸಹಯೋಗವೂ ಮುಖ್ಯ ಎಂಬ ಅರಿವಿರಲಿ. ಕೇತು–ರಾಹು ಸಂಯೋಗ ಅಶುಭವಿದೆ ದುಡುಕು ನಿರ್ಧಾರಗಳಿಂದ ಆರ್ಥಿಕ ನಷ್ಟಕ್ಕೆ ಒಳಗಾಗುವಿರಿ. ತಾಳ್ಮೆಯ ವಾಹನ ಚಾಲನೆ ಕ್ಷೇಮ.
– ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ, ಶುಭಸಂಖ್ಯೆ–5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಪ್ರಯತ್ನಶೀಲರಿಗೆ ಗ್ರಹಗಳು ಪೂರಕ ಫಲ ನೀಡುವುದು. ಈಗಿರುವ ಗ್ರಹಗಳ ಬೆಂಬಲವನ್ನು ಸದುಪಯೋಗಪಡಿಸಿಕೊಳ್ಳಿ. ಹೆಸರು ಕಾಳು ಹಾಗೂ ಹಸಿರು ತರಕಾರಿ ವ್ಯಾಪಾರದಲ್ಲಿ ಹೇರಳ ಧನಲಾಭವಾಗಲಿದೆ. ಮನೆಯಲ್ಲಿ ಮುದನೀಡುವ ಪ್ರಸಂಗಗಳು ನಡೆಯಲಿದೆ. ಹಳೆಯ ಸಾಲಗಳು ವಸೂಲಾಗಬಹುದು. ವಾಕ್ಚಾತುರ್ಯದಿಂದ ಕಾರ್ಯಸಾಧನೆ. ಸರ್ಕಾರಿ ನೌಕರರಿಗೆ ಪ್ರಮೋಷನ್ ದೊರೆಯುವ ಸಾಧ್ಯತೆ.
– ಶ್ರೀ ವೆಂಕಟೇಶ್ವರ ದರ್ಶನ, ಶುಭಸಂಖ್ಯೆ–8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸಪ್ತಾಹದ ಆದಿಗೆ ಕೆಲಸ ಕಾರ್ಯಗಳು ನಿಧಾನವಾಗಿ ಸಾಗುವುದು. ಆದರೆ ತಾಳ್ಮೆಗೆಡುವ ಅಗತ್ಯವಿಲ್ಲ. ದಾಂಪತ್ಯದಲ್ಲಿ ಉಂಟಾಗಿದ್ದ ಉತ್ತರಧ್ರುವ– ದಕ್ಷಿಣಧ್ರುವ ಪರಿಸ್ಥಿತಿ ತಾನೇ ತಿಳಿಗೊಳ್ಳಲಿದೆ. ವಿಲಾಸಿ ಪದಾರ್ಥಗಳನ್ನು ಖರೀದಿಸುವಿರಿ. ಶಾಸ್ತ್ರಾರ್ಥ ಬಲ್ಲವರ ಸಂಪರ್ಕ, ಸಂಭಾಷಣೆಗಳಿಂದ ಮನಸ್ಸಿನ ಶಂಕೆಗಳು– ನಿವಾರಣೆಗೊಳ್ಳಲಿದೆ. ವಾರಾಂತ್ಯಕ್ಕೆ ಸಂಸಾರ ಸಮೇತ ಪುಣ್ಯಕ್ಷೇತ್ರ ಸಂದರ್ಶನದಿಂದ ಮಾನಸಿಕ ನೆಮ್ಮದಿ.
– ಶ್ರೀ ಗುರುಸ್ತುತಿ, ಶುಭಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ನೂತನ ಚಟುವಟಿಕೆಗಳ ಪ್ರಾರಂಭ. ಹೊಸ ಜನರ ಭೇಟಿ. ಹಣಕಾಸಿನ ಸ್ಥಿತಿ ಸುಧಾರಿಸುವುದರೊಂದಿಗೆ ಸಪ್ತಾಹಕ್ಕೆ ಸ್ವಾಗತ. ಪ್ರಮುಖ ನಿರ್ಧಾರಗಳಲ್ಲಿ ಗುರು–ಹಿರಿಯರ ಉಭಯ ಸಮಾಲೋಚನೆ ಉತ್ತಮ ಫಲಿತಾಂಶ ನೀಡುವುದು. ಬಂಧು ಬಳಗದವರಲ್ಲಿ ಸಂತೋಷವನ್ನು ಹಂಚಿಕೊಳ್ಳಿ. ಜನ್ಮರಾಶಿಸ್ಥಿತ ಕೇತು ದಿಢೀರ್ ನಿರ್ಧಾರಗಳಿಂದ ನಷ್ಟವನ್ನು ಅಂಗಕ್ಷತಿಯನ್ನು ಉಂಟುಮಾಡಬಹುದು. ವಾಹನ ಚಾಲನೆಯಲ್ಲಿ ಸ್ವರಕ್ಷೆ ಮುಖ್ಯ.
– ಶ್ರೀ ಕೇತುಗ್ರಹ ಸ್ತೋತ್ರ ಪಠಿಸಿ, ಶುಭಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಇದು ನಿಮಗೆ ಬಿಡುವಿಲ್ಲದ ವಾರ, ಹಲವು ರೀತಿಯ ಒತ್ತಡಗಳ ಮಧ್ಯೆ ನಲುಗುವಿರಿ. ನಿರ್ಧಾರಕ್ಕೆ ಮುನ್ನ ನಿಧಾನಿಸಿ ವಿವಿಧ ವ್ಯಕ್ತಿಗಳ ಒಡನಾಟದಲ್ಲಿ ಸಮಯ ಕಳೆಯುವುದು. ಧನಾದಾಯ ಚೆನ್ನಾಗಿದೆ. ಆದರೆ ಅನಗತ್ಯ ವಿಷಯಗಳಿಗೆ ಹಣ ಪೋಲಾಗುವುದು. ಮನೆಯಲ್ಲಿ ಹಿರಿಯರ ಆರೋಗ್ಯ ಕೆಡುವ ಸಂಭವ. ಶಾರ್ಟ್‌ಟ್ರಿಪ್‌ಗಳು ನಿಮಗೂ, ನಿಮ್ಮ ಮನೆಮಂದಿಗೂ ಮುದ ನೀಡುವುದು. ವಾಹನ ಚಾಲನೆಯಲ್ಲಿ ಆತುರ ಸಲ್ಲದು.
– ಶ್ರೀ ರಾಯರ ಉಪಾಸನೆ, ಶುಭಸಂಖ್ಯೆ–9.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ನಿಮ್ಮ ಕೆಲಸ ಕಾರ್ಯಗಳಿಗೆ ನಿಮ್ಮ ಹಿತೈಷಿಗಳ ಸಹಕಾರ ಬೆಂಬಲ ದೊರೆಯುವುದು. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ಸಾಡೇಸಾತಿ ನಡೆಯುತ್ತಿದೆ. ಅನಾವಶ್ಯಕ, ಖಯಾಲಿ ಓಡಾಟಗಳನ್ನು ನಿಲ್ಲಿಸಿ. ಸ್ವಲ್ಪ ಸಮಯ ಪ್ರೀತಿ–ವಾತ್ಸಲ್ಯಗಳಿಂದ ಮನೆಮಂದಿಯವರೊಂದಿಗೆ ಬೆರೆಯಿರಿ. ಇದು ನಿಮ್ಮ ಮನೋಬಲ ಹೆಚ್ಚಿಸುವುದು. ವಿದ್ಯಾರ್ಥಿಗಳು ಉತ್ತಮ ಜನರ ಸಹವಾಸದಲ್ಲಿ ಇರುವುದು ಕ್ಷೇಮ. ಅನ್ಯಥಾ ಪೊಲೀಸ್ ಠಾಣೆಗೆ ತಿರುಗಾಟ.
– ಶ್ರೀ ಸುದರ್ಶನ ಮಂತ್ರ ಜಪಿಸಿ, ಶುಭಸಂಖ್ಯೆ–7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಇದು ಸಮತೋಲನವಾದ ವಾರ. 'ಸುಖೇ ದುಃಖೇ ಸಮೇ ಕೃತ್ವಾ' ಎಂಬ ಗೀತಾವಾಣಿಯಂತೆ ಆರಕ್ಕೆ ಏರದೇ, ಮೂರಕ್ಕೆ ಇಳಿಯದೇ ವಾರ ಸಾಗುವುದು. ದೂರ ಸರಿದವರು ಹತ್ತಿರ ಬರುವುದರಿಂದ ಹಳೆಯ ಸಮಸ್ಯೆಗಳು ಪರಿಹಾರವಾಗುವುದು. ನೀವು ನಂಬಿದವರೇ ನಿಮಗೆ ಮೋಸ ಮಾಡಬಹುದು. ಕೃಷಿಕರಿಗೆ ಮಾರ್ಕೆಟ್ ಮಧ್ಯವರ್ತಿಗಳಿಂದ ನಷ್ಟ ಉಂಟಾಗುವುದು. ಆರೋಗ್ಯದಲ್ಲಿ ವ್ಯತ್ಯಯ. ವೈದ್ಯ ಗುರುಗಳ ಭೇಟಿ ಅನಿವಾರ್ಯವಾಗುವುದು.
– ಶ್ರೀ ಕೃಷ್ಣಾಷ್ಟಕ ಪಠಿಸಿ, ಶುಭಸಂಖ್ಯೆ–2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಉತ್ಸಾಹಶೀಲರಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುವಿರಿ. ಧಾರ್ಮಿಕ ಚಟುವಟಿಕೆಗಳಲ್ಲಿ ನಿಮ್ಮ ಪಾತ್ರಕ್ಕೆ ಮನ್ನಣೆ ದೊರೆಯುವುದು. ಆಸ್ತಿ–ಪಾಸ್ತಿಗೆ ಸಂಬಂಧಿಸಿದ ವಿಚಾರಗಳಲ್ಲಿಯೂ ಆಶಾದಾಯಕ ಫಲವನ್ನು ನಿರೀಕ್ಷಿಸಬಹುದು. ನಿಮ್ಮ ಜನ್ಮರಾಶಿಯಲ್ಲೇ ಗುರುವಿದ್ದು, ಗುರಿ ಸಾಧಿಸಲು ಗುರುವಿನ ಅಗತ್ಯವಿದೆ ಎಂಬುದನ್ನು ಮರೆಯದಿರಿ. ವಾರದ ಕಡೆಗೆ ಮನೆಯಲ್ಲಿ ಅನ್ಯೋನ್ಯತೆಯ ಕೊರತೆಯಿಂದ ಮನಃಶಾಂತಿಗೆ ಭಂಗ.
– ಶ್ರೀ ಗುರುಸ್ತೋತ್ರ ಪಠಿಸಿ, ಶುಭಸಂಖ್ಯೆ–4.

ಶುಂಠಿ – ಸಿದ್ಧೌಷಧ



ಆಯುರ್ವೇದದ ಪ್ರಕಾರ ನಿತ್ಯವೂ ಬಳಕೆಯಾಗುವ ಆಹಾರ ಮತ್ತು ಔಷಧಗಳಲ್ಲಿ ಶುಂಠಿಯೂ ಒಂದು. ಇದಕ್ಕೆ ಅದನ್ನು ವಿಶ್ವಭೇಷಜ, ಮಹಾಭೇಷಜ ಅಂದರೆ ಇಡೀ ಜಗತ್ತಿಗೇ ಔಷಧ ಮತ್ತು ಎಲ್ಲ ಕಾಯಿಲೆಗಳನ್ನು ನಿವಾರಿಸುವ ಗುಣವಿದೆ ಎಂದರ್ಥ. Zingiber officinale ಶುಂಠಿ, ಮಹಾಔಷಧ, ವಿಶ್ವಭೇಷಜ, ನಾಗರ, ವಿಶ್ವೌಷಧ, ಶೃಂಗವೇರ ಮುಂತಾದ ಆಯುರ್ವೇದೋಕ್ತ ಪರ್ಯಾಯ ನಾಮಗಳಿವೆ. ಏಷಿಯಾ ಮೂಲದ ಶುಂಠಿ ಭಾರತ, ಆಗ್ನೇಯಾ, ಏಷ್ಯಾ, ಪಶ್ಚಿಮ ಆಫ್ರಿಕಾ ಮತ್ತು ಕೆರಿಬಿಯನ್ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಜಗತ್ತಿನ ಒಟ್ಟು ಶುಂಠಿ ಉತ್ಪಾದನೆಯಲ್ಲಿ 30% ಪಾಲನ್ನು ಬೆಳೆಯುವ ಸ್ಥಾನದಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ.

ಶುಂಠಿಯ ತೀಕ್ಷ್ಣ, ಘಾಟು ಮತ್ತು ರುಚಿಗಳು ಅದರಲ್ಲಿಯ ಜಿಂಜಿರೋಲ್ (Gingerol) ಶೋಗಾಲ್ (Shogal) ಮತ್ತು ಜಿಂಜಿರೋನ್ (Gingerone) ಎಂಬ ಸಸ್ಯತೈಲಗಳ ಮಿಶ್ರಣದಿಂದ ಉಂಟಾಗಿರುತ್ತದೆ.

ಶುಂಠಿಯಲ್ಲಿ ವಿಟಮಿನ್ ಎ, ಸಿ, ಇ ಮತ್ತು ಬಿ ಕಾಂಪ್ಲೆಕ್ಸ್ ಇದೆ. ಇದು ಮೆಗ್ನೀಷಿಯಂ, ಫಾಸ್ಪರಸ್, ಸಿಲಿಕಾನ್, ಸೋಡಿಯಂ, ಕಬ್ಬಿಣ, ಸತು, ಕ್ಯಾಲ್ಸಿಯಂ, ಬೀಟಾ ಕ್ಯರೋಟಿನ್‌ನಂತಹ ಖನಿಜಗಳಿಂದ ಸಮೃದ್ಧವಾಗಿರುವುದರಿಂದ ಶರೀರದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.



- ಶುಂಠಿಯಲ್ಲಿರುವ ಜಿಂಜಿರೋಲ್ ಅಂಶವು (Gingerols) ನೋವು ನಿವಾರಕ, ಉದ್ವೇಗಶಾಮಕ ಮತ್ತು ಬ್ಯಾಕ್ಟೀರಿಯಾದಿ ವಿರೋಧಿ ಗುಣ, ಮತ್ತು ಜೀರ್ಣಶಕ್ತಿ ಹೆಚ್ಚಿಸುವ ಗುಣ ಹೊಂದಿದೆ. ಉರಿಯೂತ ನಿವಾರಿಸುವುದರಿಂದ ಎಲ್ಲ ರೀತಿಯ ಸಂಧಿವಾತದ ರೋಗದಲ್ಲಿ ಉಪಯುಕ್ತ.
- ಮಕ್ಕಳ ಶೀತದಲ್ಲಿ 3–6 ಹನಿ ಶುಂಠಿ ರಸ + ತುಳಸಿ ರಸ + ಜೇನುತುಪ್ಪ ದೊಂದಿಗೆ ಕೊಡಬೇಕು.
- ದೇಹದ ತೂಕ ಕಡಿಮೆ ಮಾಡಲು ಹಸಿ ಶುಂಠಿ ರಸ ಸೈಂದವ ಲವಣದೊಂದಿಗೆ ಸೇವನೆ.
- ಗಂಟಲು ಕೆರೆತ, ನೋವುಗಳಲ್ಲಿ ಶುಂಠಿ ಮತ್ತು ಉಪ್ಪು ಹಾಕಿ ತಿಂದರೆ ಅಥವಾ ಚೀಪಿದರೆ ನಿವಾರಣೆಯಾಗುತ್ತದೆ (ಮಾರುಕಟ್ಟೆಯಲ್ಲಿ ಭಾವನಾ ಶುಂಠಿ ಲಭ್ಯವಿದೆ)
- ಬಾಯಿ ರುಚಿ ಕೆಟ್ಟಾಗ, ಅಜೀರ್ಣದಲ್ಲಿ, ಮಂದಾಗ್ನಿಯಲ್ಲಿ ಶುಂಠಿ ಬಲು ಉಪಯೋಗಿ.
- ಎಲ್ಲಾ ಶ್ವಾಸ ಸಂಬಂಧಿ ಕಾಯಿಲೆಗಳಲ್ಲಿ ಶುಂಠಿ, ಕರಿಮೆಣಸು, ಪಿಪ್ಪಲೀ ಜೇನುತುಪ್ಪದೊಂದಿಗೆ ಸೇವಿಸುವುದು ಉತ್ತಮ.
- ಶುಂಠಿ ರಸ, ನಿಂಬೆರಸ, ಜೇನುತುಪ್ಪ ಸಮಭಾಗವಾಗಿ ಮಿಶ್ರ ಮಾಡಿ ಸೇವಿಸುವುದರಿಂದ ಅಜೀರ್ಣ, ವಾಂತಿ, ತಲೆನೋವು, ತಲೆಭಾರ ಮುಂತಾದ ತೊಂದರೆಗಳು ನಿವಾರಣೆಯಾಗುತ್ತದೆ.

ಶುಂಠಿಯನ್ನು ಪ್ರತಿನಿತ್ಯ ಊಟದಲ್ಲಿ ಸಾಕಷ್ಟು ಬಳಸಿದರೆ ಊಟಕ್ಕೆ ರುಚಿಯನ್ನು ಕೊಡುವುದಷ್ಟೇ ಅಲ್ಲದೇ, ಪಚನಕ್ರಿಯೆಯನ್ನು ಹೆಚ್ಚಿಸಿ, ದೇಹಕ್ಕೆ ಪೋಷಣೆ ನೀಡಿ ಆರೋಗ್ಯ ಕಾಪಾಡುತ್ತದೆ.

ನಿಮಗಿದು ಗೊತ್ತಿರಲಿ!: ಶುಂಠಿ ನಮ್ಮ ಕರ್ನಾಟಕದ ಎಲ್ಲೆಡೆ ಈಗ ಹೆಚ್ಚಾಗಿ ಬೆಳೆಯಲ್ಪಡುತ್ತದೆ. ನಮ್ಮ ವಿಶ್ವ ಪ್ರಸಿದ್ಧ ಆದಿ ಶಂಕರಾಚಾರ್ಯರ ಕ್ಷೇತ್ರ ಶೃಂಗೇರಿಯು ಮುಂಚೆ 'ಶೃಂಗವೇರ ಗಿರಿ' ಅಂದರೆ ಹೆಚ್ಚಾಗಿ ಶೃಂಗವೇರ (ಶುಂಠಿ) ಬೆಳೆಯುವ ಗಿರಿ ಎಂಬ ಹೆಸರೇ ಮುಂದೆ 'ಶೃಂಗೇರಿ' ಎಂದು ಪ್ರತೀತಿಯಾಯಿತಂತೆ ಹೇಗಿದೆ ಶುಂಠಿಗೂ ನಮಗೂ ಶೃಂಗವೇರಗಿರಿ ಶೃಂಗೇರಿಗೂ ನಂಟು ಅಲ್ಲವೇ?

–ಡಾ.ಸುಧಾ.ಎಂ.ಎನ್. ಮೊ: 9448071933,
e-mail: drsudhamn@yahoo.com